
ಅಖಿಲ ಭಾರತ ಪತ್ರಿಕೆ
ನವೆಂಬರ್ 2016
ಶ್ರೀಕೃಷ್ಣ
– ಸನಾತನ ದೇವ ಪ್ರಮುಖ
ಬೆಲೆ : 15/–



*Lord, give me perfect sincerity,*
*that sincerity which will lead me*
*straight to Thee.*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

## ಪರಿವಿಡಿ

### ಶ್ರೀಕೃಷ್ಣ – ಸನಾತನ ದೇವ ಪ್ರಮುಖ

**ಅನು : ಡಾ. ಕೆ.ಎಸ್. ಆಮೂರ**
ಶ್ರೀಕೃಷ್ಣ – ಸನಾತನ ದೇವ ಪ್ರಮುಖ 4

**ಅನು : ಶ್ರೀ ವೀರೇಂದ್ರ ಸಿಂಪಿ**
ಶ್ರೀಕೃಷ್ಣನ ಐತಿಹಾಸಿಕತೆ 17

**ಅನು : ಡಾ. ಕೆ.ಎಸ್. ಆಮೂರ**
ಅವತಾರ ಪುರುಷ ಶ್ರೀಕೃಷ್ಣ 22
ಶ್ರೀಕೃಷ್ಣ – ಯೋಗದ ದೈವೀ ಪ್ರಭು 38


**ಅನು : ಶ್ರೀ ಪುರುಷೋತ್ತಮ ಗಲಗಲಿ**
ಶ್ರೀ ಅರವಿಂದರು ಹಾಗೂ ಶ್ರೀಕೃಷ್ಣ 50

**ವಾರ್ತಾಪತ್ರ** 56

## (All India Magazine) ಸಂಪಾದಕೀಯ:

ಗತಕಾಲದ ಹಾಗೂ ಸದ್ಯದ ಕಾಲದ ಮನುಷ್ಯಾಕೃತಿಗಳಲ್ಲಿ ಹಾಗೂ ಅವತಾರಗಳಲ್ಲಿ ಶ್ರೀಕೃಷ್ಣ ನಿಸ್ಸಂಶಯವಾಗಿ ಒಂದು ಬಹಳ ವಿಶಿಷ್ಟ ಸ್ಥಾನವನ್ನು ಹೊಂದಿದ್ದಾನೆ. ಒಂದೆಡೆಗೆ ಅವನ ಸಂಕೀರ್ಣ ಹಾಗೂ ಬಹುಮುಖವುಳ್ಳ ವ್ಯಕ್ತಿತ್ವವಿರುವ ಹಾಗೂ ಅವನ ಅತ್ಯಾಕರ್ಷಕ ಮಾನವ ವ್ಯಕ್ತಿವಿಶಿಷ್ಟತೆ ಇರುವ ರಹಸ್ಯವಿದೆ. ಇನ್ನೊಂದೆಡೆಗೆ ದೈವಿಕವಾಗಿ ಶ್ರೀಮಂತವಾಗಿರುವ ಅವನ ಸತ್ತೆ ಆತ್ಮಕ್ಕೆ ಅನುರಾಗ ಹುಟ್ಟಿಸುವ ಚಿರಂತನ ದೈವಿಕ ಆಕರ್ಷಣೆಯಾಗಿದೆ. ಅವನು ಮಾನವ ಹಾಗೂ ದೇವ ಭೇಟಿಮಾಡಲು ಪರಿಪೂರ್ಣ ಸ್ಥಾನವಾಗಿರುವ ಹಾಗೆ ತೋರಿಬರುತ್ತಾನೆ, ಸೃಷ್ಟಿಯ ಒಂದು ಒಗಟಾಗಿರುವ ಹಾಗಿದ್ದಾಗ್ಯೂ, ಸೃಷ್ಟಿಯ ಹೊರಗಡೆ ನಿಂತಿರುತ್ತಾನೆ. ಬಹುಮಟ್ಟಿಗೆ ಸಿದ್ಧಿಸಿಕೊಳ್ಳಲಾಗದ ಮನುಷ್ಯತ್ವದ ಆದರ್ಶದ ಹಾಗಿದ್ದಾಗ್ಯೂ, ಎಷ್ಟೊಂದು ಹತ್ತಿರ ಇರುತ್ತಾನೆ ಹಾಗೂ ಸುಪರಿಚಿತನಾಗಿರುತ್ತಾನೆ ಎಂದರೆ ಅವನು ನಮ್ಮ ಸತ್ತೆಯ ದ್ರವ್ಯ ಹಾಗೂ ಸಾರವಾಗಿರುವ ಹಾಗಿದ್ದಾನೆ. ಅಪರೂಪಕ್ಕೆ ಕಂಡುಬರುವ ದೈವೀ ವಿವೇಕ, ಪ್ರೇಮ, ಬಲ, ಮಾಧುರ್ಯ ಅತ್ಯಂತ ಅನಾಸಕ್ತನಾಗಿರುವಿಕೆ ಮತ್ತು ಪರಿಪೂರ್ಣ ಆನಂದ ಇವೆಲ್ಲವುಗಳ ಸಂಯೋಜನೆ ಆಗಿದ್ದಾನೆ. ಶ್ರೀಕೃಷ್ಣ ತನ್ನ ಏಕೈಕ ವ್ಯಕ್ತಿವಿಶಿಷ್ಟತೆಯಲ್ಲಿ ಮನುಕುಲ ಅಭೀಪ್ಸೆ ಪಡುತ್ತಿರುವ ಸಮನ್ವಯವನ್ನು ಸಂಕ್ಷೇಪಿಸುತ್ತಾನೆ, ಅವನು ಆಧುನಿಕ ಹಾಗೂ ಪ್ರಾಚೀನವಾದವನು, ತಾರುಣ್ಯವುಳ್ಳ ದೇವ ಹಾಗೆಯೇ ಸ್ವತಃ ಸೃಷ್ಟಿಯದೇ ಮೂಲ ಹಾಗೂ ಕಾರಂಜಿಯಾದವನು, ಒಗಟಾಗಿರುವ ಹಾಗೂ ಆನಂದಮಯವಾಗಿರುವ ಅವನ ಸತ್ತೆ ಹಾಗೂ ಕಾರ್ಯಗಳ ಮೇಲೆ ನಾವು ನೆಲೆಸಿದ್ದೇವೆ. ನವ್ಹೆಂಬರ ತಿಂಗಳ 24ರಂದು ಶ್ರೀಕೃಷ್ಣನ ಪುರಾತನ ವ್ಯಕ್ತಿತ್ವ ತನ್ನ ಭವಿಷ್ಯತ್ತಿನ ಕಾರ್ಯಕ್ಕಾಗಿ ನಿನ್ನೆಯ ಅವತಾರಪುರುಷರಾದ ಶ್ರೀ ಅರವಿಂದರ ದೇಹದೊಡನೆ ಬೆಸುಗೆಗೆ ಒಳಗಾಯಿತು, ಇನ್ನೊಂದು ಭೌತಿಕ ದೇಹಕ್ಕೆ ಕಟ್ಟಿಹಾಕಿಕೊಳ್ಳುವುದನ್ನು ಒಪ್ಪಿಕೊಂಡಿತು.

*



ಶ್ರೀಕೃಷ್ಣ ಸನಾತನನ ಆನಂದದ ವ್ಯಕ್ತಿವಿಶಿಷ್ಟನಾದವನು, ಏಕೆಂದರೆ ಅವನಿಂದಾಗಿ, ಅವನ ಲೀಲೆಯಿಂದಾಗಿ, ಅವನ ದಿವ್ಯಾನಂದ ಹಾಗೂ ಮಾಧುರ್ಯಗಳಿಂದಾಗಿ ಎಲ್ಲ ಸೃಷ್ಟಿ ಸಾಧ್ಯವಾಗುವುದು.

ಬ್ರಹ್ಮ ಅಮರನಾಗಿದ್ದಾನೆ, ವಿಷ್ಣು ಸನಾತನನಾಗಿದ್ದಾನೆ, ಶಿವ ಅನಂತ–ನಾಗಿದ್ದಾನೆ; ಶ್ರೀಕೃಷ್ಣ ಪರಮೋಚ್ಚನ ಸನಾತನ, ಅನಂತ, ಅಮರನಾಗಿ ಸ್ವ–ವಶವರ್ತಿ ಮಾಡಿಕೊಂಡವನು ಸ್ವ–ಅವಿರ್ಭಾವ ಹೊಂದಿದವನು, ಸ್ವ–ಪ್ರಕಟಿತನು, ಸ್ವ–ಅರಸುವಿಕೆಯುಳ್ಳವನು ಆಗಿದ್ದಾನೆ.

**CWSA, 12/208–09** **– ಶ್ರೀ ಅರವಿಂದರು**

*

## ಈ ಯೋಗದ ಕಿರೀಟಪ್ರಾಯವಾದ ಸಿದ್ಧಿ

ನೀವು ಇಡೀ ಜಗತ್ತು ಅನಂತ ದೈವೀ ವ್ಯಕ್ತಿವಿಶಿಷ್ಟತೆಯ ಅಭಿವ್ಯಕ್ತಿ ಹಾಗೂ ಲೀಲೆ ಎಂಬುದರ ಅರಿವು ತಂದುಕೊಂಡಾಗ ಅದು ಈ ಯೋಗದ ಕಿರೀಟ ಪ್ರಾಯವಾದ ಸಿದ್ಧಿಯಾಗಿರುತ್ತದೆ, ನೀವು ಎಲ್ಲದರಲ್ಲಿ ವಿಷಣ್ಣ ಅವೈಯಕ್ತಿಕ ಆತ್ಮನ್‌ನಲ್ಲ– ಆ ಜ್ಞಾನವನ್ನು ಕಳೆದುಕೊಳ್ಳದೆ ಇದ್ದಾಗ್ಯೂ– ಆದರೆ ಒಂದೇ ವೇಳೆಗೆ ಅವನು ಎಲ್ಲ ವ್ಯಕ್ತ ಹಾಗೂ ಅವ್ಯಕ್ತ ಅಸ್ತಿತ್ವವಾಗಿರುವನಷ್ಟೇ ಅಲ್ಲ, ಆ ಅಸ್ತಿತ್ವವನ್ನು ಮೀರಿ ಆಚೆಗಿರುವುದಕ್ಕೆ ಆಧಾರವಾಗಿರುತ್ತಾನೆ, ಅವ್ಯಕ್ತೋ ವ್ಯಕ್ತಾತ್ ಪರಃ, ಏಕೆಂದರೆ ವಿಷಣ್ಣ ಆತ್ಮನ್ ದ ಹಿಂದೆ ಅಸತ್ ದ ನಿಶ್ಚಲನೀರವತೆ ಇದೆ, ಅದನ್ನು ಶೂನ್ಯವಾದಿಗಳಾದ ಬೌದ್ಧರು ಶೂನ್ಯಮ್ ಎಂದು ಸಿದ್ಧಿಸಿಕೊಂಡರು, ಮತ್ತು ಆ

ನಿಶ್ಚಲನೀರವತೆಯಾಚೆಗೆ ಪರಾತ್ಪರ ಪುರುಷನಿದ್ದಾನೆ (ಪುರುಷೋವರೇಣ್ಯ ಆದಿತ್ಯವರ್ಣಾಸ್ತಮಸಃ ಪರಸ್ತಾತ್) ಅವನೇ ತನ್ನ ಸತ್ತೆಯಿಂದ ಈ ಜಗತ್ತನ್ನು ನಿರ್ಮಾಣ ಮಾಡಿ ಅದರಲ್ಲಿ ಅಂತರ್ಗತನಾಗಿದ್ದಾನೆ ಹಾಗೂ ಸಾಂತ–ಅನಂತ ಈಶ್ವರನ ಹಾಗೂ ನಾರಾಯಣ ರೂಪದಲ್ಲಿ ಅದನ್ನು ಪೋಷಿಸುತ್ತಾನೆ. ಲೀಲಾಮಯನಾದ ಶ್ರೀಕೃಷ್ಣ ತನ್ನ ಪ್ರೇಮದಿಂದ ನಮ್ಮೆಲ್ಲರನ್ನೂ ತನ್ನೆಡೆಗೆ ಎಳೆದು–ಕೊಳ್ಳುತ್ತಾನೆ, ತನ್ನ ಪ್ರಭುತ್ವಗಳಿಂದ ನಮ್ಮೆಲ್ಲರ ಮೇಲೆ ಒತ್ತಾಯ ತರುತ್ತಾನೆ, ಹಾಗೂ ವೈವಿಧ್ಯಮಯ ಜಗತ್ತಿನಲ್ಲಿ ಸಂತೋಷ, ಬಲ ಹಾಗು ಸೌಂದರ್ಯಗಳಿಂದ ತನ್ನ ಸನಾತನ ಲೀಲೆಯನ್ನು ನಡೆಸುತ್ತಾನೆ.

ಜಗತ್ತು ಕೇವಲ ಅವನ ಲೀಲೆ, ಜ್ಞಾನ ಹಾಗೂ ದಿವ್ಯಾನಂದ, ಸತ್, ಚಿತ್ ಹಾಗೂ ಆನಂದ. ಭೌತದ್ರವ್ಯವೇ ಸ್ವತಃ ಮೂಲವಸ್ತುವಲ್ಲ, ದ್ರವ್ಯವಲ್ಲ, ಆದರೆ ಪ್ರಜ್ಞೆಯ ಒಂದು ರೂಪ, ಗುಣ, ಇಂದ್ರಿಜ ಜ್ಞಾನದಿಂದ ಗ್ರಹಿಸಲಾದ ಸತ್ತೆಯ ಗುಣದ ಪರಿಣಾಮ ಎಂಬುದನ್ನು ಒಂದು ದಿನ ನೀವು ತಿಳಿದುಕೊಳ್ಳುತ್ತೀರಿ. ಘನತ್ವವೇ ಸ್ವತಃ ಗುಣಗಳ ಸಂಯೋಜನೆ ಮಾತ್ರವಾಗಿರುತ್ತದೆ ಸಂಹತಿ ಹಾಗೂ ಧೃತಿ ಅಂಟಿಕೊಳ್ಳುವಿಕೆ ಹಾಗೂ ಶಾಶ್ವತತೆ, ಪ್ರಜ್ಞಾಪೂರ್ಣವಾದುದರ ಒಂದು ಸ್ಥಿತಿ, ಬೇರೇನೂ ಅಲ್ಲ. ಭೌತದ್ರವ್ಯ, ಪ್ರಾಣ ಹಾಗೂ ಮನಸ್ಸು, ಮನಸ್ಸಿನಿಂದಾಚೆಗೆ ಇರುವುದು ಇದೆಲ್ಲವೂ ಶ್ರೀಕೃಷ್ಣ, ಅನಂತಗುಣ ಬ್ರಹ್ಮನ್, ಸಚ್ಚಿದಾನಂದನೆಂದು ಜಗತ್ತಿನಲ್ಲಿ ಲೀಲೆ ನಡೆಸುವವನು, ನಾವು ಇದನ್ನು ಸಿದ್ಧಿಸಿಕೊಂಡಾಗ ಹಾಗೂ ಅದರಲ್ಲಿ ಸುರಕ್ಷಿತವಾಗಿ, ಶಾಶ್ವತವಾಗಿ ವಾಸಿಸುತ್ತಿದ್ದಾಗ ದುಃಖ ಹಾಗೂ ಪಾಪ, ಭಯ, ಭ್ರಮೆ, ಆಂತರಿಕ ಹೋರಾಟ ಮತ್ತು ನೋವು ಇವೆಲ್ಲವನ್ನೂ ಬಲವತ್ತರವಾಗಿ ನಮ್ಮ ಸತ್ತೆಯಿಂದ ಹೊರಗೆ ಎಳೆದು ಹಾಕಲಾಗಿರುತ್ತದೆ.

**CWSA, 13/76–77** **– ಶ್ರೀ ಅರವಿಂದರು**

*

## ಶ್ರೀಕೃಷ್ಣ – ಸನಾತನ ದೇವ ಪ್ರಮುಖ

### ಶ್ರೀಕೃಷ್ಣ ಎಲ್ಲರಲ್ಲೂ ವಾಸಿಸುತ್ತಾನೆ

ಶ್ರೀಕೃಷ್ಣ ಎಲ್ಲರಲ್ಲೂ ವಾಸಿಸುತ್ತಾನೆ, ಕೇವಲ ಜೀವಂತವಿರುವವುಗಳಲ್ಲಿ ಅಷ್ಟೇ ಅಲ್ಲ, ಆದರೆ ಜೀವರಹಿತವಾದವುಗಳಲ್ಲೂ ನಾರಾಯಣನನ್ನು ನೋಡಬೇಕು,

ಶಿವನನ್ನು ಅನುಭವಕ್ಕೆ ತಂದುಕೊಳ್ಳಬೇಕು, ನಮ್ಮ ತೋಳುಗಳಿಂದ ದೈವೀಶಕ್ತಿಯನ್ನು ಸುತ್ತಬೇಕು. ಭೌತದ್ರವ್ಯವಿರುವ ವಿಚಾರದಿಂದ ಸದ್ಯ ನಮ್ಮ ಕಣ್ಣುಗಳು ಕುರುಡಾಗಿವೆ, ಅವು ಪರಮೋಚ್ಚ ಪ್ರಕಾಶಕ್ಕೆ ತೆರೆದುಕೊಂಡಾಗ ಯಾವುದೂ ಜೀವರಹಿತವಾಗಿಲ್ಲ ಎಂಬುದನ್ನು ಕಂಡುಕೊಳ್ಳುತ್ತೇವೆ, ಆದರೆ ಎಲ್ಲವೂ ಅಭಿವ್ಯಕ್ತವಾದದ್ದನ್ನು, ಅನಭಿವ್ಯಕ್ತವಾದದ್ದನ್ನು, ತೊಡಗಿಕೊಂಡದ್ದನ್ನು ಇಲ್ಲವೆ ಉತ್ಕ್ರಾಂತಿ ಹೊಂದಿದ್ದನ್ನು ರಹಸ್ಯವಾದದ್ದನ್ನು ಇಲ್ಲವೆ ಪ್ರಕಟವಾದದ್ದನ್ನು ಇಲ್ಲವೆ ಪ್ರಕಟಣೆಯ ಮುನ್ನಡೆಯಲ್ಲಿರುವುದನ್ನು, ನಾವು ಅನ್ನಮ್ ಇಲ್ಲವೆ ಭೌತದ್ರವ್ಯವೆಂದು ಕರೆಯುವ ತೊಡಕಿ ಹಾಕಿಕೊಂಡ ಪ್ರಜ್ಞೆಯನ್ನು ಒಳಗೊಳ್ಳುತ್ತದೆ ಅಷ್ಟೇ ಅಲ್ಲ, ಆದರೆ ಪ್ರಾಣ , ಮನಸ್ಸು, ಜ್ಞಾನ, ದಿವ್ಯಾನಂದ, ದೈವೀಶಕ್ತಿ ಹಾಗೂ ಸತ್ತೆ–ಪ್ರಾಣ, ಮನಸ್ಸು, ವಿಜ್ಞಾನ, ಆನಂದ ಚಿತ್, ಸತ್ ಇವೆಲ್ಲವನ್ನೂ ಒಳಗೊಂಡಿರುತ್ತದೆ. ಎಲ್ಲ ವಸ್ತು–ವಿಷಯಗಳಲ್ಲಿ ಸ್ವ–ಪ್ರಜ್ಞೆಯುಳ್ಳ ದೈವೀ ವ್ಯಕ್ತಿ–ವಿಶಿಷ್ಟತೆಯುಳ್ಳವನಾದ ಅವನು ಅವುಗಳನ್ನು ಕುರಿತು ಚಿಂತಿಸುತ್ತಾನೆ ಹಾಗೂ ತನ್ನ ಗುಣಗಳಲ್ಲಿ ಆನಂದ ಕಂಡುಕೊಳ್ಳುತ್ತಾನೆ. ಹೂವುಗಳು, ಹಣ್ಣುಗಳು, ಭೂಮಿ, ಗಿಡಗಳು, ಲೋಹಗಳು ಇಂತಹ ಎಲ್ಲ ವಸ್ತುಗಳಲ್ಲಿ ಸಂತೋಷವಿರುತ್ತದೆ, ಏಕೆಂದರೆ ಎಲ್ಲವುಗಳಲ್ಲಿ ಶ್ರೀಕೃಷ್ಣ ವಾಸಿಸುತ್ತಾನೆ, ಪ್ರವಿಶ್ಯ, ಭೌತಿಕ ರೀತಿಯಲ್ಲಲ್ಲ, ಏಕೆಂದರೆ ಅಂತಹ ವಿಷಯವೇ ಇರುವುದಿಲ್ಲ, ಸ್ಥಳಾವಕಾಶ ಹಾಗೂ ಕಾಲಗತಿ ಇವು ಸಂಪ್ರದಾಯದಿಂದ ಬಂದಂತಹವು, ಗ್ರಹಿಕೆಗೆ ಬರುವಂತೆ ವ್ಯವಸ್ಥೆ ಮಾಡಿದವು–ಗಳಾಗಿರುತ್ತವೆ, ದೇವನ ಸೃಷ್ಟ್ಯಾತ್ಮಕ ಕಲೆಯಲ್ಲಿ ಕಣ್ಣೆಲೆ (perspective) ಆಗಿರುತ್ತವೆ– ಆದರೆ ಅದು ಚಿತ್‌ದಿಂದ ಎಂದರೆ ದೇವನ ವಿಶ್ವಾತೀತ ಸತ್ತೆಯಲ್ಲಿರುವ ದೈವೀ ಪರಿಜ್ಞಾನದಿಂದ ಆಗಿರುತ್ತದೆ.

*

**ಶ್ರೀಕೃಷ್ಣನ ವಿಶ್ವಲೀಲೆ**

ದೇವ ಒಬ್ಬನೇ, ಆದರೆ ಅವನು ತನ್ನ ಏಕತೆಯಿಂದ ಬಂಧಿತನಾಗಬೇಕಿಲ್ಲ. ಇಲ್ಲಿ ಅವನು ಏಕೈಕವಾಗಿರುವುದನ್ನು ಮತ್ತು ಯಾವಾಗಲೂ ಅನೇಕವಾಗಿ ಪ್ರಕಟವಾಗು–ತ್ತಿರುವುದನ್ನು ನಾವು ನೋಡುತ್ತೇವೆ, ಅವನು ಅಸಹಾಯಕನಾಗಿ ಹಾಗೆ ಮಾಡುತ್ತಿಲ್ಲ ಆದರೆ ಅವನು ಆ ರೀತಿ ಸಂಕಲ್ಪ ಮಾಡುತ್ತಾನೆ ಮತ್ತು ಪ್ರಕಟಣೆಯ ಹೊರಗೆ ಅವನು ಅನಿರ್ದೇಶ್ಯ ಎಂದರೆ ವ್ಯಾಖ್ಯೆ ನೀಡಲು ಸಾಧ್ಯವಾಗದಂತೆ ಇರುವವನು

ಮತ್ತು ಅವನನ್ನು ಏಕ ಇಲ್ಲವೆ ಅನೇಕ ಎಂದು ವರ್ಣಿಸಲಾಗುವುದಿಲ್ಲ. ಅದನ್ನೇ ಉಪನಿಷತ್ತುಗಳು ಮತ್ತು ಇತರ ಪವಿತ್ರ ಗ್ರಂಥಗಳು ಸುಸಂಗತವಾಗಿ ಬೋಧಿಸುತ್ತವೆ, ಅವನು ಏಕಮಾದ್ವಿತೀಯಮ್ ಆಗಿದ್ದಾನೆ. ಏಕೈಕನಾದವನು ಇದ್ದಾನೆ, ಬೇರೆ ಯಾರೂ ಇಲ್ಲ, ಹಾಗೆಯೇ ಪರಿಣಾಮವಾಗಿ ಅವನು "ಈ ಪುರುಷ, ಆಚೆಗಿರುವ ಸ್ತ್ರೀ, ಆ ನೀಲಿ ರೆಕ್ಕೆಗಳಿರುವ ಪಕ್ಷಿ, ಕಡುಗೆಂಪು ಬಣ್ಣವಿರುವ ಪಕ್ಷಿ." ಅವನು ಸಂತ ಹಾಗೂ ಅನಂತ, ಜೀವನೂ ಅವನೇ. ಗೀತೆಯಲ್ಲಿ ಶ್ರೀಕೃಷ್ಣ: "ನಾನು ಅಶ್ವತ್ಥ ಗಿಡ, ಮೃತ್ಯು ನಾನೇ, ಅಗ್ನಿ ವೈಶ್ವಾನರ ನಾನೇ, ಅನ್ನ ಜೀರ್ಣಿಸುವಂತೆ ಮಾಡುವ ಅಗ್ನಿ ನಾನು, ವ್ಯಾಸ ನಾನು, ವಾಸುದೇವ ನಾನು, ಅರ್ಜುನ ನಾನು." ಎಂದು ಹೇಳುತ್ತಾನೆ. ಎಲ್ಲವೂ ಅವನ ಅನಂತ ಸತ್ತೆಯಲ್ಲಿರುವ, ಪ್ರಕಟಣೆಯಲ್ಲಿರುವ ಚೈತನ್ಯದ ಲೀಲೆ, ಹಾಗಾಗಿ ಎಲ್ಲವೂ ನೈಜವಾಗಿವೆ. ಮಾಯೆಯ ಅರ್ಥ ಬ್ರಹ್ಮನ್ ತನ್ನನ್ನು ಅಭಿವ್ಯಕ್ತಗೊಳಿಸುವುದಕ್ಕಾಗಿ ಇರುವ ಪರಿಸ್ಥಿತಿಗಳಿಂದ ಸ್ವತಂತ್ರನಾಗಿರುವುದಾಗಿದೆ. ನಾವು ನೋಡುವುದರಿಂದ, ಅವನನ್ನು ಕುರಿತು ಯೋಚಿಸುವುದರಿಂದ ಅವನು ಯಾವುದೇ ರೀತಿಯಲ್ಲಿ ಸೀಮಿತಗೊಳ್ಳು–ವುದಿಲ್ಲ. ಆ ಮಾಯೆಯಿಂದ ನಾವು ತಪ್ಪಿಸಿಕೊಳ್ಳಬೇಕು. ಅದು ಅಜ್ಞಾನದ ಮಾಯೆ–ಯಾಗಿದ್ದು ವಸ್ತು–ವಿಷಯಗಳು ಪ್ರತ್ಯೇಕವಾಗಿ ಅಸ್ತಿತ್ವದಲ್ಲಿವೆ, ದೇವರಲ್ಲ, ಚೈತನ್ಯವಲ್ಲ ಎಂದು ಭಾವಿಸುತ್ತದೆ, ಸೀಮಿತವಾಗಿರದೆ ಇದ್ದುದನ್ನು ಸೀಮಿತವಾಗಿದೆ ಎಂದು, ಮುಕ್ತವಾದದ್ದು ಬಂಧನಕ್ಕೊಳಗಾಗಿದೆ ಎಂದು ತಿಳಿದುಕೊಳ್ಳುತ್ತದೆ. ಶ್ರೀಕೃಷ್ಣ ಹಾಗೂ ಗೋಪಿಯರ ಕತೆ ನಿಮ್ಮ ನೆನಪಿಗೆ ಬರುತ್ತದೆಯೆ? ಶ್ರೀಕೃಷ್ಣ ಪ್ರತಿಯೊಬ್ಬ ಗೋಪಿಯ ಮನೆಯಲ್ಲಿ ಭಿನ್ನ ದೇಹದಲ್ಲಿ ಕಾಣಿಸಿಕೊಂಡು ಕಾರ್ಯನಿರತನಾದದ್ದನ್ನು ನಾರದರು ನೋಡಿದರು, ಆದಾಗ್ಯೂ ಶ್ರೀಕೃಷ್ಣ ಅವನೇ ಆಗಿದ್ದ. ಭಕ್ತಿ ಪ್ರಾಧಾನ್ಯತೆಯ ಅರ್ಥ ನೀಡುವ ಆ ಕತೆ ನಿಮಗೆ ತಿಳಿದಿದೆ, ಅದರ ಹೊರತಾಗಿ ಅಲ್ಲಿ ಅವನ ವಿಶ್ವಲೀಲೆಯ ಒಳ್ಳೆಯ ಪ್ರತೀಕವಿದೆ. ಅವನು ಸರ್ವವೂ ಆಗಿದ್ದಾನೆ, ಪ್ರತಿಯೊಬ್ಬನೂ ಆಗಿದ್ದಾನೆ, ಪ್ರತಿಯೊಬ್ಬ ಪುರುಷ, ಅವನೊಡನೆ ತೋರಿಕೆಗಾಗಿ ಇರುವ ಪ್ರಕೃತಿ ಹಾಗೂ ಕ್ರಿಯೆ ಅವನೇ ಆಗಿದ್ದಾನೆ. ಅವನು ಸಂಕಲ್ಪಿಸಿದಾಗ ಇವೆಲ್ಲವನ್ನೂ ತನ್ನೊಳಗೆ ಹಿಂತೆಗೆದು–ಕೊಳ್ಳಬಲ್ಲ, ಹಾಗೆಯೇ ಅವನು ಸಂಕಲ್ಪಿಸಿದಾಗ ಅವೆಲ್ಲವನ್ನೂ ಹೊರಗಿರಿಸಬಲ್ಲ. ಒಂದು ದೃಷ್ಟಿಕೋನದಿಂದ ಅವೆಲ್ಲವೂ ಈಗ ಅವನ ಜೊತೆಗಿವೆ, ಇನ್ನೊಂದು ದೃಷ್ಟಿಕೋನದಿಂದ ಅವು ಯಾವಾಗಲೂ ಭಿನ್ನವಾಗಿವೆ, ಇನ್ನೂ ಬೇರೊಂದು ದೃಷ್ಟಿಕೋನದಿಂದ ಭಿನ್ನವಾಗಿವೆ ಏಕೆಂದರೆ ಅವು ಯಾವಾಗಲೂ ಅಸ್ತಿತ್ವದಲ್ಲಿರುತ್ತವೆ,

ಅವನ ಸಂತೋಷದ ಪ್ರಕಾರ ಅವನಲ್ಲಿ ಗುಪ್ತವಾಗಿರುತ್ತವೆ ಇಲ್ಲವೆ ಪ್ರಕಟವಾಗಿ–ರುತ್ತವೆ. ಈ ನಿಲುವುಗಳನ್ನು ಕುರಿತು ವಾದ–ವಿವಾದ ಮಾಡುವುದರಿಂದ ಲಾಭವಿಲ್ಲ. ದೇವನನ್ನು ಕಾಣುವವರೆಗೆ ನಿಮ್ಮನ್ನು ತಿಳಿದುಕೊಳ್ಳುವವರೆಗೆ ಕಾದುಕೊಂಡಿರಿ ಮತ್ತು ಆಗ ವಾದ–ವಿವಾದ ಹಾಗೂ ಚರ್ಚೆ ಅನವಶ್ಯಕವಾಗುತ್ತವೆ.

**CWSA, 13/89–90** **– ಶ್ರೀ ಅರವಿಂದರು**

*

**ದೈವೀ ವ್ಯಕ್ತಿವಿಶಿಷ್ಟನಾದ ಶ್ರೀಕೃಷ್ಣ**

(ಬೃಂದಾವನದ ಶ್ರೀಕೃಷ್ಣ ಹಾಗೂ ಅವನ ಲೀಲೆಯ ಕತೆಗಳು ಅಕ್ಷರಶಃ ಸತ್ಯವಾಗಿದ್ದವೋ ಇಲ್ಲವೆ ಕೇವಲ ಆಳವಾದ ಆಧ್ಯಾತ್ಮಿಕ ನೈಜತೆಗಳ ಸಂಕೇತ ಮಾತ್ರಗಳಾಗಿದ್ದವೋ) ಎಂಬ ಪ್ರಶ್ನೆಗೆ ಉತ್ತರ ಮನುಷ್ಯ ಆಧ್ಯಾತ್ಮಿಕ ಅನುಭವಕ್ಕೆ ಯಾವ ಅತೀಂದ್ರಿಯಾರ್ಥದ ಹಾಗೂ ರಹಸ್ಯ ಅನುಭವವನ್ನು ಅಂಟಿಸುತ್ತಾನೋ ಎಂದರೆ ಭೌತಿಕವಲ್ಲದ ಇತರ ಸ್ತರಗಳಿಂದ ದೊರಕುವ ಮಾಹಿತಿಗೆ ಹಾಗೆಯೇ ಮನುಷ್ಯನ ವಿಶ್ವವ್ಯಾಪಿ ಪ್ರಜ್ಞೆ ಹಾಗು ವೈಯಕ್ತಿಕ, ಸಾಮೂಹಿಕ ಪ್ರಜ್ಞೆ ಇವುಗಳ ಸಂಬಂಧದ ಸ್ವಭಾವದ ಮೇಲೆ ಅಂಟಿಸುತ್ತಾನೋ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಆಧ್ಯಾತ್ಮಿಕ ಹಾಗೂ ರಹಸ್ಯ ದೈವೀ ಸತ್ಯದ ದೃಷ್ಟಿಕೋನದಿಂದ, ಮನುಷ್ಯನ ಪ್ರಜ್ಞೆಯಲ್ಲಿ ಆಕಾರ ತಾಳುವಿಕೆ, ಕಠಿಣ ಮಾಧ್ಯಮದಲ್ಲಿ ತಮ್ಮ ಪ್ರಕಾಶ, ಸಾಮರ್ಥ್ಯ ಹಾಗೂ ಸೌಂದರ್ಯ ಇವುಗಳಲ್ಲಿ ಶ್ರೇಷ್ಠತರವಾದವುಗಳ ಒಂದು ಪ್ರತಿಫಲನ ಮತ್ತು ವಿಶಿಷ್ಟಬಗೆಯ ರೂಪತಾಳುವಿಕೆಯಾಗಿರುತ್ತದೆ. ಇಲ್ಲವೆ ಆ ರೂಪತಾಳುವಿಕೆಗೆ ವಿಶ್ವವ್ಯಾಪಿ ಪ್ರಜ್ಞೆಯಿಂದ ಬರುವ ಶಕ್ತಿ ಹಾಗೂ ವ್ಯಾಪ್ತಿಗಳಿಗೆ ಮನುಷ್ಯ ಇನ್ನೂ ತನ್ನ ಸದ್ಯದ ಉತ್ಕ್ರಾಂತಿ ಸ್ಥಿತಿಯಲ್ಲಿ ಸೀಮಿತಗೊಂಡವನು ಹಾಗೂ ಅಜ್ಞಾನದ ಭಾಗವಾಗಿರುವವನು ಆಗಿರುತ್ತಾನೆ. . . .

ಕೃಷ್ಣಪ್ರಜ್ಞೆ ಒಂದು ನೈಜತೆಯಾಗಿದೆ, ಆದರೆ ಕೃಷ್ಣನೆಂಬುವವನು ಇರದೇ ಹೋಗಿದ್ದರೆ ಕೃಷ್ಣಪ್ರಜ್ಞೆ ಇರುವುದು ಸಾಧ್ಯವಾಗುತ್ತಿರಲಿಲ್ಲ: ಯಾದೃಚ್ಛಿಕ (arbitrary) ತತ್ವಮೀಮಾಂಸೆಯ ಅಮೂರ್ತ ರೂಪಗಳಲ್ಲಿ ಹೊರತಾಗಿ, ಪ್ರಜ್ಞೆಯುಳ್ಳ ದೈವೀಸತ್ತೆಯಿಲ್ಲದೆ ಪ್ರಜ್ಞೆ ಇರುವುದು ಸಾಧ್ಯವಿಲ್ಲ. ವ್ಯಕ್ತಿವಿಶಿಷ್ಟತೆಗೆ ಮೌಲ್ಯವನ್ನು ಹಾಗೂ ನೈಜತೆಯನ್ನು ಕೊಡುವವನು ವ್ಯಕ್ತಿಯಾಗಿರುತ್ತಾನೆ, ಅವನು ಅದರಲ್ಲಿ ತನ್ನನ್ನು ಅಭಿವ್ಯಕ್ತಪಡಿಸುತ್ತಾನೆ ಮತ್ತು ಅದರಿಂದ ಅವನು ರಚಿತನಾಗಿರುವುದಿಲ್ಲ.

ಶ್ರೀಕೃಷ್ಣ ಒಂದು ಸತ್ತೆಯಾಗಿದ್ದಾನೆ, ವ್ಯಕ್ತಿಯಾಗಿದ್ದಾನೆ ಮತ್ತು ದೈವೀ ವ್ಯಕ್ತಿಯ ರೂಪದಲ್ಲಿ ಅವನನ್ನು ನಾವು ಭೇಟಿ ಮಾಡುತ್ತೇವೆ, ಅವನ ಧ್ವನಿಯನ್ನು ಕೇಳುತ್ತೇವೆ, ಅವನೊಡನೆ ಮಾತನಾಡುತ್ತೇವೆ, ಅವನ ಸಾನ್ನಿಧ್ಯದ ಭಾವನೆ ತಂದುಕೊಳ್ಳುತ್ತೇವೆ. ಶ್ರೀಕೃಷ್ಣ–ಪ್ರಜ್ಞೆ ಶ್ರೀಕೃಷ್ಣನಿಂದ ಪ್ರತ್ಯೇಕವಾದ ವಿಷಯ ಎಂದು ಹೇಳುವುದು ಮನಸ್ಸಿನ ದೋಷವಾಗಿರುತ್ತದೆ, ಮನಸ್ಸು ಯಾವಾಗಲೂ ಪ್ರತ್ಯೇಕಿಸಲಾಗದ್ದನ್ನು ಪ್ರತ್ಯೇಕಿಸು–ತ್ತಿರುತ್ತದೆ, ಏಕೆಂದರೆ ಅಮೂರ್ತವಾದದ್ದು ಹೆಚ್ಚು ಶ್ರೇಷ್ಠವಾದದ್ದು, ಹೆಚ್ಚು ಸತ್ಯವಾದದ್ದು ಮತ್ತು ವ್ಯಕ್ತಿಗಿಂತ ಅದರ ಉದ್ದೇಶಗಳಿಗಾಗಿ ಹೆಚ್ಚಿನ ಕಾಲ ಉಳಿದು–ಕೊಳ್ಳುವಂತಹದು ಎಂಬ ಭಾವನೆ ಮನಸ್ಸಿಗಿರುತ್ತದೆ. ಇಂತಹ ವಿಭಜನೆಗಳು ಮನಸ್ಸಿಗೆ ಅದರ ಉದ್ದೇಶಗಳಿಗಾಗಿ ಉಪಯುಕ್ತವಾಗಬಹುದು, ಆದರೆ ಅದು ನಿಜವಾದ ಸತ್ಯವಲ್ಲ; ಅದರ ನೈಜ ಸತ್ಯದಲ್ಲಿ ಸತ್ತೆ ಅಥವಾ ವ್ಯಕ್ತಿ ಮತ್ತು ಅದರ ಅವೈಯಕ್ತಿಕಕತೆ ಇಲ್ಲವೆ ಸತ್ತೆಯ ಸ್ಥಿತಿ ಇವೆರಡೂ ಏಕೈಕ ನೈಜತೆಯಾಗಿರುತ್ತವೆ.

**CWSA, 28/481/481–82** **– ಶ್ರೀ ಅರವಿಂದರು**


*

**ರಾಧಾ ಹಾಗೂ ಶ್ರೀಕೃಷ್ಣ ಇವರ ನಡುವಿನ ಪ್ರೇಮ**

ದೇವನಿಗಾಗಿ ಆತ್ಮದ ಬಯಕೆಯನ್ನು ಅಲ್ಲಿ ಸಾಂಕೇತಿಕ ಆಕಾರದಲ್ಲಿ ರಾಧಾ ಮತ್ತು ಶ್ರೀಕೃಷ್ಣ ಇವರ ಭಾವಗೀತೆಗೆ ತಕ್ಕ ಪ್ರೇಮಚಕ್ರವನ್ನು ಚೆಲ್ಲಿಕೊಡಲಾಗಿದೆ. ಮನುಷ್ಯನಲ್ಲಿರುವ ಪ್ರಕೃತಿಯ ಆತ್ಮ ದೈವೀ ಆತ್ಮವನ್ನು ಪ್ರೇಮದ ಮೂಲಕ ಅರಸುವುದಾಗಿದೆ, ದೈವೀ ಆತ್ಮದ ಸೌಂದರ್ಯದ ಹಿಡಿತಕ್ಕೆ ಹಾಗೂ ಪ್ರಭುತ್ವಕ್ಕೆ ಒಳಗಾಗಿ, ಅವನ ಮಾಂತ್ರಿಕ ಕೊಳಲ ಧ್ವನಿಯಿಂದ ಆಕರ್ಷಿತವಾಗಿ, ಈ ಒಂದು ಪ್ರಬಲ ಭಾವೋದ್ರೇಕಕ್ಕಾಗಿ ಮಾನವ ಚಿಂತೆಗಳನ್ನು ಹಾಗೂ ಕರ್ತವ್ಯಗಳನ್ನು ಬಿಟ್ಟುಕೊಟ್ಟು ಅರಸುವುದಾಗಿದೆ ಮತ್ತು ಅದರ ಮಜಲುಗಳ ಛಂದೋಗತಿ ಬದ್ಧತೆಯಲ್ಲಿ ಮೊದಲು ಬಯಕೆಯಿಂದ ಏಕತೆಯ ದಿವ್ಯಾನಂದದವರೆಗೆ ಸಾಗಿ ಹೋಗುವುದು, ವಿರಹದ ನೋವುಗಳು, ಶಾಶ್ವತ ಹಂಬಲಿಸುವಿಕೆ ಮತ್ತು ಪುನರ್ಮಿಲನ, ಇದೆಲ್ಲ ದೇವನಿಗಾಗಿ ಮಾನವ ಆತ್ಮದ ಪ್ರೇಮದ ಲೀಲೆಯಾಗಿರುತ್ತದೆ.

**CWSA, 20/379** **– ಶ್ರೀ ಅರವಿಂದರು**

*



# ಶ್ರೀಕೃಷ್ಣ
## (ಕವಿತೆ)

ಓ ಗಾಢ ದೈವೀಪ್ರಕಾಶವೆ ಹಾಗೂ ನೀನು,
ಓ ವಿಶಾಲವಾದ ಆತ್ಮವೆ, ಸೀಮಾರಹಿತ ಸ್ಥಳಾವಕಾಶವೆ,
ಸಾವಿಲ್ಲದ ಅಂಗಾಂಗಗಳೆ: ವೈಭವದ ಮುಖವೆ ಯಾರನ್ನು ನೀವು
ತಬ್ಬಿಕೊಂಡಿರುವಿರಿ, ಹಾಗೂ ಬಚ್ಚಿಟ್ಟಿರುವಿರಿ?
"ನಾವು ಶೂನ್ಯರಾಗಿಹೆವು, ಅಲ್ಲಿ ಯಾರೂ ಇಲ್ಲ" ಎಂದು ಸ್ಥಳಾವಕಾಶ
ಹಾಗೂ ಕಾಲಗತಿಗಳು ವ್ಯರ್ಥವಾಗಿ ಸುಳ್ಳು ಹೇಳುತ್ತಿವೆ,
"ನಾನು, ನಾನು ಮಾತ್ರ" ಎಂದು ವ್ಯರ್ಥವಾಗಿ ದಿವ್ಯಾತ್ಮ ಹಾಗೂ ಜಗತ್ತು
ಕೂಗುತ್ತಿವೆ,
ಆತ್ಮದ ದಿವ್ಯಾತ್ಮನಾದ, ಸ್ಥಳಾವಕಾಶದ ದಿವ್ಯ ಜೀವವಾದ, ಕಾಲಗತಿಯ
ಕಾರಂಜಿಯಾದ, ಹೃದಯಗಳ ದೇವೀ ಹೃದಯವಾದ,
ಮನಸ್ಸುಗಳ ದೈವೀ ಮನಸ್ಸಾದ ಅವನು ಘನತೆವೆತ್ತವನಾಗಿ ಕುಳಿತಿಹನು.
ಓ, ಪರಿಪೂರ್ಣವಾಗಿ ಸ್ವ–ಮಗ್ನವಾಗಿ ಭವ್ಯ ಹಾಗೂ ಮೂಕವಾಗಿರುವ
ಶೂನ್ಯ ಬೇಡ,
ಅಪ್ಪಿಕೊಂಡು ಹಿಡಿದಿಟ್ಟುಕೊಳ್ಳುವ ಕೈಗಳು, ತನ್ನ ಕೊಳಲನ್ನು ಬಾರಿಸುವ,
ಮುದ್ದುಕೊಡುವ ಕೆಂಪು ತುಟಿಗಳಿರಲಿ.

ಅವನೆಲ್ಲರನ್ನು ಪ್ರೀತಿಸುವವನು, ಎಲ್ಲರೂ ಚಲಿಸುವಂತೆ ಮಾಡುವವನು,
ಎಲ್ಲರೂ ಅವನವರೇ, ಎಲ್ಲರೂ ಅವನೇ
ಬಹಳಷ್ಟು ಅಂಗಗಳು ಅವನ ಲಹರಿಗಳನ್ನು ಸಂತೃಪ್ತಗೊಳಿಸುವವು, ಅವನ
ಮಧುರ ದಿವ್ಯಾನಂದವನು ತಾಳಿಕೊಳ್ಳುವವು.
ಇಬ್ಬರು ಒಬ್ಬರಲ್ಲಿರುವರು, ಸಮೃದ್ಧ ಅರ್ಥದಲ್ಲಿ ವ್ಯತ್ಯಾಸವನರಿತ ಇಬ್ಬರು,
ಒಬ್ಬರಿನ್ನೊಬ್ಬರನು ಅಪ್ಪಿಕೊಳ್ಳುವುದಕ್ಕಾಗಿ ಇಬ್ಬರು, ದೈವೀಐಕ್ಯೈಕರಾಗುವುದು
ಇದು ಅವನ ವಿಚಿತ್ರ ರಹಸ್ಯ.

**CWSA, 2/637** **– ಶ್ರೀ ಅರವಿಂದರು**

*

**ಆಟದ ದೈವೀ ಜೊತೆಗಾರ ಶ್ರೀಕೃಷ್ಣ**

ಶ್ರೀಕೃಷ್ಣ ಸರ್ವವ್ಯಾಪಿ ಭಗವಂತ, ಪ್ರತಿಯೊಬ್ಬನಲ್ಲಿರುವ ದೈವೀಸಾನ್ನಿಧ್ಯ. ಅವನು ಸಾರ್ವಭೌಮ ರೀತಿಯಲ್ಲಿ ಪರಮೋಚ್ಚನ ದಿವ್ಯಾನಂದದ ಹಾಗೂ ದಿವ್ಯಪ್ರೇಮದ ಮುಖವಾಗಿದ್ದಾನೆ. ಅವನು ಮುಗುಳ್ನಗುತ್ತಿರುವ ಕೋಮಲತೆ ಮತ್ತು ಆಟದೊಲವಿರುವ ಉಲ್ಲಾಸ. ಅವನು ಒಂದೇವೇಳೆಗೆ ಆಟಗಾರ, ಆಟ ಮತ್ತು ಆಟದ ಎಲ್ಲ ಜೊತೆಗಾರರಾಗಿದ್ದಾನೆ. ಆಟ ಹಾಗೂ ಅದರ ಪರಿಣಾಮಗಳು ಇಡಿಯಾಗಿ ತಿಳಿದಿರುವುದರಿಂದ, ಕಲ್ಪನೆ ಮಾಡಿಕೊಳ್ಳಲಾದವುಗಳು ಆಗಿರುವು–ದರಿಂದ, ಸಂಕಲ್ಪಿಸಿದವೂ ಹಾಗೂ ವ್ಯವಸ್ಥಿತಗೊಳಿಸಿದವೂ ಆಗಿರುವುದರಿಂದ, ಅವುಗಳ ಇಡಿಯಾದುದರಲ್ಲಿ ಪ್ರಜ್ಞಾಪೂರ್ವಕ ಆಟವಾಡಿರುವುದರಿಂದ ಅಲ್ಲಿ ದಿವ್ಯಾನಂದದ ಹೊರತಾಗಿ ಬೇರೆ ಯಾವುದಕ್ಕೂ ಸ್ಥಾನವಿರುವುದಿಲ್ಲ. ಹೀಗೆ ಶ್ರೀಕೃಷ್ಣನನ್ನು ನೋಡುವುದೆಂದರೆ ಆಂತರಿಕ ದೇವಪ್ರಮುಖನನ್ನು ಕಂಡುಕೊಳ್ಳು–ವುದಾಗಿದೆ, ಶ್ರೀಕೃಷ್ಣನೊಡನೆ ಆಟವಾಡುವುದೆಂದರೆ ಆಂತರಿಕ ದೇವಪ್ರಮುಖ–ನೊಂದಿಗೆ ತಾದಾತ್ಮ್ಯ ಪಡೆಯುವುದಾಗಿದೆ ಹಾಗೂ ಅವನ ಪ್ರಜ್ಞೆಯಲ್ಲಿ ಪಾಲು ಪಡೆಯುವುದಾಗಿದೆ. ಈ ಸ್ಥಿತಿಯನ್ನು ಸಿದ್ಧಿಸಿಕೊಂಡಾಗ ನೀವು ಕೂಡಲೆ ದೈವೀ ಲೀಲೆಯ ದಿವ್ಯಾನಂದದಲ್ಲಿ ಪ್ರವೇಶಿಸುತ್ತೀರಿ, ತಾದಾತ್ಮ್ಯ ಸಂಪೂರ್ಣವಾದಂತೆ, ಆ ಸ್ಥಿತಿ ಹೆಚ್ಚು ಪರಿಪೂರ್ಣವಾಗುವುದು. ಆದರೆ ಪ್ರಜ್ಞೆಯ ಯಾವುದೋ ಒಂದು ತುದಿ ಸರ್ವಸಾಮಾನ್ಯ ಗ್ರಹಿಕೆಯನ್ನು ಸಾಮಾನ್ಯ ತಿಳುವಳಿಕೆಯನ್ನು, ಸಾಧಾರಣ ಸಂವೇದನೆಯನ್ನು ಕಾಪಾಡಿಕೊಂಡು ಬಂದರೆ, ಆಗ ನೀವು ಇತರರ

ವೇದನೆಯನ್ನು ನೋಡುತ್ತೀರಿ, ಇಷ್ಟೊಂದು ವೇದನೆಯನ್ನುಂಟು ಮಾಡುವ ಆ ಆಟ ಬಹಳ ಕ್ರೂರವಾದದ್ದು ಎಂದು ಕಂಡುಕೊಳ್ಳುತ್ತೀರಿ ಮತ್ತು ಇಂತಹ ಆಟದಲ್ಲಿ ಹರ್ಷ ಕಂಡುಕೊಳ್ಳುವ ದೇವ ಭಯಾನಕ ರೀತಿಯಲ್ಲಿ ಪೀಡಾಕಾರಕ ಎಂಬ ತೀರ್ಮಾನಕ್ಕೆ ಬರುತ್ತೀರಿ. ಆದರೆ ಇನ್ನೊಂದೆಡೆಯಲ್ಲಿ, ನಿಮಗೆ ದೇವನೊಡನಾಗುವ ತಾದಾತ್ಮ್ಯದ ಅನುಭವವಾಗಿದ್ದರೆ, ಈ ಆಟದಲ್ಲಿ ಆ ದೇವನಿರಿಸುವ ಭವ್ಯ, ಅದ್ಭುತ ಪ್ರೇಮವನ್ನು ನೀವು ಮರೆಯಲಾರಿರಿ, ಮತ್ತು ಈ ರೀತಿ ತೀರ್ಮಾನಕ್ಕೆ ಬರಲು ನಮ್ಮ ದೃಷ್ಟಿಯ ಸಂಕುಚಿತತೆ ಕಾರಣವಾಗಿರುತ್ತದೆ ಎಂಬುದನ್ನು ನೀವು ತಿಳಿದುಕೊಳ್ಳುವಿರಿ. ಅವನು ಸ್ವಯಂಪ್ರೇರಿತ ಪೀಡಾಕಾರಕನಾಗುವುದು ದೂರ ಉಳಿದು ಶ್ರೇಷ್ಠ ಉಪಕಾರಿ ಪ್ರೇಮ ಸ್ವರೂಪನಾಗಿರುತ್ತಾನೆ, ಆ ಪ್ರೇಮ ಜಗತ್ತಿಗೆ ಹಾಗೂ ಜನರಿಗೆ ಅವರ ತೀವ್ರಗತಿಯ ಮಾರ್ಗಗಳಲ್ಲಿ ಅವರ ಪರಿಪೂರ್ಣತೆಯತ್ತ ಪ್ರಗತಿಪರ ಮುನ್ನಡೆಯತ್ತ ಮಾರ್ಗದರ್ಶನ ಮಾಡುತ್ತದೆ, ಅಲ್ಲದೆ ಆ ಪರಿಪೂರ್ಣತೆ ಸಾಪೇಕ್ಷ (relative) ವಾಗಿರುತ್ತದೆ ಮತ್ತು ಯಾವಾಗಲೂ ಅದನ್ನು ಮೀರಿ ಹೋಗಲಾಗುತ್ತದೆ. ಆದರೆ ಒಂದು ದಿನ ಬರಲಿದೆ, ಆಗ ತೋರಿಕೆಯ ವೇದನೆ ಮುನ್ನಡೆಗೆ ಉತ್ತೇಜನ ನೀಡುವುದಕ್ಕಾಗಿ ಇನ್ನು ಮುಂದೆ ಅವಶ್ಯವಾಗುವುದಿಲ್ಲ ಮತ್ತು ಆಗ ಪ್ರಗತಿಯನ್ನು ಹೆಚ್ಚು ಹೆಚ್ಚಾದ ಸಾಮರಸ್ಯದಲ್ಲಿ ಹಾಗೂ ದಿವ್ಯಾನಂದನಲ್ಲಿ ಮಾಡಲು ಶಕ್ಯವಾಗುತ್ತದೆ.

**CWM, 10/51–52** **– ಶ್ರೀಮಾತೆ**

*

**ದೈವೀ ಮಗು ಶ್ರೀಕೃಷ್ಣ**

ಶ್ರೀಕೃಷ್ಣ ವಿಶ್ವಂಭರ ದೇವಪ್ರಮುಖ ಹಾಗೂ ಅಂತರ್ವ್ಯಾಪಿ ದೇವಪ್ರಮುಖ–ನಾಗಿದ್ದಾನೆ. ಅವನನ್ನು ಮನುಷ್ಯ ತನ್ನಂತರಂಗದಲ್ಲಿ ಭೇಟಿ ಮಾಡಬಲ್ಲನು ಹಾಗೆಯೇ ಭೌತಿಕ ಜಗತ್ತು ರಚನೆಗೊಂಡುದುದರಲ್ಲೂ ಅವನನ್ನು ಭೇಟಿ ಮಾಡಬಲ್ಲನು.

ಅವನನ್ನು ಯಾವಾಗಲೂ ದೈವೀಮಗುವೆಂದು ಏಕೆ ಪ್ರತಿನಿಧಿಸಲಾಗುತ್ತದೆ ಎಂಬುದನ್ನು ನೀವು ತಿಳಿದುಕೊಳ್ಳಬೇಕಾಗಿದೆಯೆ? ಏಕೆಂದರೆ ಅವನು ಸತತ ಪ್ರಗತಿ ಪಥದಲ್ಲಿರುತ್ತಾನೆ. ಜಗತ್ತನ್ನು ಪರಿಪೂರ್ಣವಾಗಿ ಬೆಳೆಸಲಾಗುವಷ್ಟರ ಮಟ್ಟಿಗೆ ಅವನ

ಲೀಲೆಯೂ ಪರಿಪೂರ್ಣವಾಗುತ್ತದೆ. ಅವನ ಲೀಲೆ ಹೆಚ್ಚು ಹೆಚ್ಚಾಗಿ ಸಾಮರಸ್ಯ–ವುಳ್ಳದ್ದು ದಯಾಪೂರ್ಣವಾದದ್ದು ಹಾಗೂ ಸಂತೋಷಕರವಾದದ್ದಾಗುತ್ತದೆ, ಅದೆಷ್ಟರ ಮಟ್ಟಿಗೆಂದರೆ ಜಗತ್ತು ಅದಕ್ಕೆ ಪ್ರತ್ಯುತ್ತರ ನೀಡಲು ಕ್ಷಮತೆ ಹೊಂದಿದ ಹಾಗೂ ಭಗವಂತನೊಡನೆ ಸಂತೋಷ ಪಡೆಯಲು ಶಕ್ತವಾದ ಪ್ರಮಾಣದಲ್ಲಿ ಅದಾಗುತ್ತದೆ.

ಗೋಲೋಕ ಪ್ರೇಮದ, ಸೌಂದರ್ಯದ ಹಾಗೂ ಆನಂದದ ಜಗತ್ತಾಗಿದೆ, ಅದು ಆಧ್ಯಾತ್ಮಿಕ ತೇಜಸ್ಸಿನಿಂದ ತುಂಬಿಕೊಂಡಿದೆ. ನಾವು ವೈಕುಂಠವನ್ನು ಇಲ್ಲವೆ ಗೋಲೋಕವನ್ನು ವಿಷ್ಣುವಿನ ಇಲ್ಲವೆ ಶ್ರೀಕೃಷ್ಣನ ದೈವತ್ವವಿರುವ ಜಗತ್ತೆಂದು ಪರಿಗಣಿಸಿದರೆ, ಅದರ ಸ್ಥಾನವನ್ನು ಅಧಿಮಾನಸ ಸ್ತರದಲ್ಲಿ ಕಂಡುಕೊಳ್ಳುವತ್ತ ನಮ್ಮನ್ನು ಕರೆದೊಯ್ಯಲಾಗುತ್ತದೆ. ಅಧಿಮಾನಸ, ದೇವತೆಗಳ ಅತ್ಯುಚ್ಚ ಲೋಕಗಳಿರುವ ಸ್ತರವಾಗಿದೆ, ಆದರೆ ವೈಕುಂಠ ಹಾಗೂ ಗೋಲೋಕ ಇವು ಮನುಕುಲದಾಚೆಗಿರುವ ಮಾನವ ಕಲ್ಪಿತ ಸತ್ತೆಯ ಸ್ಥಿತಿಗಳಾಗಿವೆ. ಗೋಲೋಕ ಸ್ಪಷ್ಟವಾಗಿ ದೈವೀಪ್ರೇಮದ ದೈವೀಸೌಂದರ್ಯದ ಹಾಗೂ ದಿವ್ಯಾನಂದದ ಜಗತ್ತು, ಅದು ಆಧ್ಯಾತ್ಮಿಕ ತೇಜಸ್ಸಿನಿಂದ ತುಂಬಿಕೊಂಡಿದೆ (ಆಕಳು ಆಧ್ಯಾತ್ಮಿಕ ಪ್ರಕಾಶದ ಸಂಕೇತ). ಗೋಲೋಕದಲ್ಲಿರುವ ಗೋಪರು ಹಾಗೂ ಗೋಪಿಯರು ಆ ಲೋಕವನ್ನು ಕಾಪಾಡಿಕೊಂಡು ಬರುತ್ತಾರೆ ಇಲ್ಲವೆ ವಶವರ್ತಿಮಾಡಿ–ಕೊಂಡಿರುತ್ತಾರೆ. ಈ ಪ್ರಕಟಣೆಗೆ ಯಾವುದೇ ಏಕೈಕ ಸ್ತರವನ್ನು ಕೊಡುವ ಆವಶ್ಯಕತೆ ಇಲ್ಲ.– ವಾಸ್ತವದಲ್ಲಿ ಅದರ ಸ್ಥಿತಿಗಳ ಪ್ರತಿಫಲನ ಇಲ್ಲವೆ ವಶದಲ್ಲಿಟ್ಟುಕೊಂಡಿರುವಿಕೆ ಪ್ರಜ್ಞೆಯ ಯಾವುದೇ ಸ್ತರದಲ್ಲಿ ಎಂದರೆ ಮಾನಸಿಕ, ಪ್ರಾಣಿಕ ಹಾಗೂ ಸೂಕ್ಷ್ಮಭೌತಿಕ ಸ್ತರದಲ್ಲಿಯೂ ಇರಬಹುದು. ಅದನ್ನು ಕುರಿತು ನೀನು ಕೊಡುವ ವಿವರಣೆ ಸರಿಯೆಂದು ತೋರಿಬರಬಹುದು.

**CWSA, 28/140** – **ಶ್ರೀ ಅರವಿಂದರು**

*

**ಶ್ರೀಕೃಷ್ಣನ ಆಟದಲ್ಲಿ ಜೊತೆಗಾರನಾಗುವುದು**

ವೈವಿಧ್ಯಮಯ ಲೀಲೆ ಇರುವ ಈ ಜಗತ್ತನ್ನು ಅದರ ಜೀವಿಗಳಿಗೆ ದಿವ್ಯಾನಂದವನ್ನು ತರುವಂತಾಗಲಿ ಎಂಬ ಉದ್ದೇಶದಿಂದ ಸೃಷ್ಟಿಸಲಾಗಿದೆ. ದೇವನ ಉದ್ದೇಶ ಈ ಆಟ ನಿಂತು ಹೋಗಲಿ ಎಂದಿಲ್ಲ. ಆ ಜೀವಿಗಳು ತನ್ನ ಆಟದಲ್ಲಿ

ಜೊತೆಗಾರರಾಗಲಿ, ಸಂಗಾತಿಗಳಾಗಲಿ, ಜಗತ್ತನ್ನು ದಿವ್ಯಾನಂದದ ಪ್ರವಾಹದಿಂದ ತುಂಬುವಂತಾಗಲಿ ಎಂದು ಬಯಸುತ್ತಾನೆ. ನಾವು ಅಜ್ಞಾನದ ಅಂಧಕಾರ–ದಲ್ಲಿದ್ದೇವೆ, ಅದೇಕೆಂದರೆ ಲೀಲೆಗಾಗಿ ದೈವೀಪ್ರಭು ತನ್ನನ್ನು ದೂರವಿರಿಸಿ–ಕೊಂಡಿದ್ದಾನೆ ಮತ್ತು ಹೀಗೆ ತನ್ನನ್ನು ಮಬ್ಬಿನಿಂದ ಸುತ್ತುವರಿದುಕೊಂಡಿದ್ದಾನೆ, ಅವನೇ ಸ್ಥಿರಪಡಿಸಿದ ರೀತಿಗಳಿವೆ, ಅವುಗಳನ್ನು ಅನುಸರಿಸಿದರೆ ಮನುಷ್ಯ ಅಂಧಕಾರದಿಂದ ಹೊರಬರಬಹುದು ಹಾಗೂ ಅವನು ದೇವನ ಸಹವಾಸದಲ್ಲಿದ್ದು ಬಿಡಬಹುದು. ಯಾರೊಬ್ಬರಿಗೆ ಈ ಆಟದಲ್ಲಿ ಅಭಿರುಚಿ ಇಲ್ಲದೇ ಹೋದರೆ ಹಾಗೂ ವಿಶ್ರಾಂತಿಯಲ್ಲಿ ಇರುವುದನ್ನು ಬಯಸಿದರೆ ದೇವ ಅವನ ಬಯಕೆಯನ್ನು ಈಡೇರಿಸುತ್ತಾನೆ. ಆದರೆ ಮನುಷ್ಯ ಅವನ ರೀತಿಯನ್ನು ಅವನಿಗಾಗಿ ಅನುಸರಿಸಿದರೆ ಆಗ ಈ ಜಗತ್ತಿನಲ್ಲಿ ಇಲ್ಲವೆ ಬೇರಾವುದೋ ಲೋಕದಲ್ಲಿ ಅವನನ್ನು ತನ್ನ ಯೋಗ್ಯ ಜೊತೆಗಾರನೆಂದು ಆಯ್ದುಕೊಳ್ಳುತ್ತಾನೆ. ಅರ್ಜುನ ಶ್ರೀಕೃಷ್ಣನ ಅತ್ಯಂತ ಪ್ರೀತಿಯ ಜೊತೆಗಾರ ಹಾಗೂ ಸಂಗಾತಿಯಾಗಿದ್ದ, ಹಾಗಾಗಿ ಅವನು ಶ್ರೀಕೃಷ್ಣನಿಂದ ಪರಮೋಚ್ಚ ರಹಸ್ಯವಿರುವ ಗೀತೋಪದೇಶವನ್ನು ಪಡೆದ.

**ಬಂಗಾಲಿ ಬರಹಗಳು, ಪು. 84** **– ಶ್ರೀ ಅರವಿಂದರು**

*

**ಭಾಗವತ ಹಾಗೂ ಬೃಂದಾವನ ಕುರಿತು ಇರುವ ಸತ್ಯ ಸಂಗತಿಗಳು**

**ಪ್ರಶ್ನೆ :** *ಬೃಂದಾವನ ಪೃಥ್ವಿಯ ಮೇಲೆ ಇರುವುದರ ಹೊರತಾಗಿ ಬೇರೆಲ್ಲಿಯಾದರೂ ಇದೆಯೆ?*

**ಶ್ರೀಮಾತೆ :** ದೇವತೆಗಳ ಜಗತ್ತಿನಲ್ಲಿ ಒಂದು ಆದರ್ಶ ಹಾಗೂ ಸಾಮರಸ್ಯ–ದಿಂದಿರುವ ಬೃಂದಾವನ ಇದೆ. ಪೃಥ್ವಿಯ ಮೇಲಿದ್ದದ್ದು ಅದರ ವಿರೂಪಗೊಂಡ ಹಾಗೂ ಅಣಕು ಚಿತ್ರರೂಪದ ಬೃಂದಾವನ.

ಆಂತರಿಕವಾಗಿ ಅಭಿವೃದ್ಧಿ ಹೊಂದಿದವರು ತಮ್ಮ ಇಂದ್ರಿಯಗಳಲ್ಲಿ ಇಲ್ಲವೆ ಮನಸ್ಸುಗಳಲ್ಲಿ ಈ ನೈಜತೆಗಳನ್ನು ಗ್ರಹಿಕೆಗೆ ತಂದುಕೊಳ್ಳಬಹುದು, ಅವು ಗೋಚರಿಸದೆ ಇರುವಂತಹವು (ಸಾಮಾನ್ಯ ಮನುಷ್ಯನಿಗೆ) ಮತ್ತು ಅವುಗಳಿಂದ ಅವುಗಳ ಸ್ಫೂರ್ತಿ ಪಡೆದುಕೊಳ್ಳಬಹುದು. ಹಾಗಾಗಿ ಭಾಗವತವನ್ನು ಬರೆದವನು ಇಲ್ಲವೆ ಬರೆದವರು, ನಿಶ್ಚಿತವಾಗಿ, ಒಂದು ಇಡೀ ಆಂತರಿಕ ಜಗತ್ತಿನೊಡನೆ

ಸಂಪರ್ಕದಲ್ಲಿದ್ದರು, ಆ ಜಗತ್ತು ಸರಿಯಾದದ್ದು ಮತ್ತು ನಿಜವಾದದ್ದು, ಅಸ್ತಿತ್ವದಲ್ಲಿ ಇರುವಂತಹದು, ಅವರು ವರ್ಣಿಸಿದ್ದುದನ್ನು ಹಾಗೂ ತೆರೆದು ತೋರಿಸಿದ್ದನ್ನು ಅಲ್ಲಿ ನೋಡಿದ್ದರು ಹಾಗೂ ಅನುಭವಕ್ಕೆ ತಂದುಕೊಂಡಿದ್ದರು.

ಶ್ರೀಕೃಷ್ಣ ಪೃಥ್ವಿಯ ಮೇಲೆ ಮಾನವ ರೂಪದಲ್ಲಿ ಅಸ್ತಿತ್ವದಲ್ಲಿದ್ದನೋ ಇಲ್ಲವೋ ಎಂಬುದು ಗೌಣವಾದ ವಿಷಯ. (ಬಹುಶಃ ಐತಿಹಾಸಿಕ ದೃಷ್ಟಿಕೋನದಿಂದ ನೋಡುವುದರ ಹೊರತಾಗಿ), ಏಕೆಂದರೆ ಶ್ರೀಕೃಷ್ಣ ನೈಜವಾಗಿ ಇರುವ, ಜೀವಂತವಿರುವ ಹಾಗೂ ಕ್ರಿಯಾಶೀಲವಾಗಿರುವ ಸತ್ತೆಯಾಗಿದ್ದಾನೆ ಮತ್ತು ಅವನ ಪ್ರಭಾವ ಪೃಥ್ವಿಯ ಪ್ರಗತಿಗೆ ಹಾಗೂ ಪರಿವರ್ತನೆಗೆ ಕಾರಣವಾದ ಶ್ರೇಷ್ಠ ಸಂಗತಿಗಳಲ್ಲಿ ಒಂದಾಗಿದೆ. ಭಾಗವತ ಪುರಾಣದಲ್ಲಿ ಶ್ರೀಕೃಷ್ಣನ ಕತೆಯನ್ನು ಹೇಳಲಾಗಿದೆ.

**CWM, 10/60–61** **– ಶ್ರೀಮಾತೆ**

*

**ಮನುಕುಲದೊಂದಿಗೆ ದೈವೀ ವ್ಯವಹಾರ**

ಮಾನವ ರೂಪದ ಶ್ರೀಕೃಷ್ಣನಿಗೆ ಮಾದರಿ ನೀಡುವ, ಬಹುಮಟ್ಟಿಗೆ ಸಾಂಕೇತಿಕವೆನಿಸುವ ಪ್ರಾಮುಖ್ಯತೆ ಇದೆ. ಅವನು ಮಹಾಭಾರತದ ಭವ್ಯ ಕ್ರಿಯೆಯ ಹಿಂದೆ ನಿಂತಿರುತ್ತಾನೆ, ಅದರ ನಾಯಕನಾಗಿ ಅಲ್ಲ, ಆದರೆ ಅದರ ರಹಸ್ಯ ಕೇಂದ್ರದಲ್ಲಿದ್ದು, ಅಡಗಿ ಹಿಂದಿದ್ದು ಅದರ ಮಾರ್ಗದರ್ಶಕನಾಗಿರುತ್ತಾನೆ. ಆ ಕ್ರಿಯೆ ಜನರು, ರಾಷ್ಟ್ರಗಳಿರುವ ಇಡೀ ಜಗತ್ತಿನ ಕ್ರಿಯೆಯಾಗಿರುತ್ತದೆ, ಅದರಲ್ಲಿ ಕೆಲವರು ಆ ಪ್ರಯತ್ನಕ್ಕೆ ಹಾಗೂ ಪರಿಣಾಮಕ್ಕೆ ಸಹಾಯಕರೆಂದು ಬಂದಿರುತ್ತಾರೆ, ಅದರಿಂದ ಅವರಿಗೆ ವೈಯಕ್ತಿಕ ಲಾಭವೇನೂ ಇರುವುದಿಲ್ಲ ಮತ್ತು ಇಂತಹರಿಗೆ ಅವನು ನೇತಾರನಾಗಿರುತ್ತಾನೆ, ವಿರೋಧಿಗಳಲ್ಲಿ ಕೆಲವರಿರುತ್ತಾರೆ, ಅವರಿಗೆ ಅವನು ವಿರೋಧಿಯಾಗಿರುತ್ತಾನೆ, ಅವರ ಸಂಚುಗಳಿಗೆ ಅಡಚಣೆ ಉಂಟು ಮಾಡುತ್ತಾನೆ, ಅವರಿಗೆ ಸಾವನ್ನುಂಟು ಮಾಡುತ್ತಾನೆ ಮತ್ತು ಅವರಲ್ಲಿ ಕೆಲವರಿಗೆ ಅನಿಷ್ಟವನ್ನು ಪ್ರಚೋದಿಸುವವನಾಗಿ ಕಂಡುಬರುತ್ತಾನೆ, ಅವರ ಹಳೆಯ ಕ್ರಮಬದ್ಧತೆಯನ್ನು ಹಾಗೂ ಸುಪರಿಚಿತ ಜಗತ್ತನ್ನು ಸುರಕ್ಷಿತ ಒಳ್ಳೆಯ ಹಾಗೂ ಸದ್ಗುಣದ ಸಂಪ್ರದಾಯಗಳನ್ನು ನಾಶಮಾಡುವವನಾಗಿ ಕಂಡುಬರುತ್ತಾನೆ. ನೆರವೇರಿಕೆ ಕಂಡುಬರುವುದರ ಪ್ರತಿನಿಧಿಗಳಾಗಿ ಕೆಲವರಿರುತ್ತಾರೆ ಮತ್ತು ಅವನು ಅವರಿಗೆ

ಸಲಹೆ ನೀಡುತ್ತಾನೆ, ಸಹಾಯಕನಾಗಿರುತ್ತಾನೆ ಹಾಗೂ ಮಿತ್ರನಾಗಿರುತ್ತಾನೆ. ಎಲ್ಲಿ ಕ್ರಿಯೆ ತನ್ನ ಸ್ವಾಭಾವಿಕ ಮುನ್ನಡೆಯನ್ನು ಬೆಂಬತ್ತಿರುವುದೋ ಇಲ್ಲವೆ ಕಾರ್ಯಕೈಕೊಳ್ಳುತ್ತಿರುವವರು ಪ್ರಭುತ್ವಕ್ಕೆ ತಯಾರಾಗಲು ವೈರಿಗಳ ಹಸ್ತಗಳಲ್ಲಿ ಸತ್ವಪರೀಕ್ಷೆಯನ್ನು ಎದುರಿಸುತ್ತಿರುವರೋ ಅಂತಹ ಸಂದರ್ಭದಲ್ಲಿ ಅವತಾರಿ ಪುರುಷ ಗೋಚರಿಸದ ಹಾಗಿರುತ್ತಾನೆ ಇಲ್ಲವೆ ಸಾಂದರ್ಭಿಕ ಸೌಲಭ್ಯ ಹಾಗೂ ಸಹಾಯ ನೀಡುವುದಕ್ಕಾಗಿ ಗೋಚರಿಸುತ್ತಾನೆ, ಆದರೆ ಪ್ರತಿಯೊಂದು ಸತ್ವಪರೀಕ್ಷೆಯ ಕಾಲದಲ್ಲಿ ಅವನ ಹಸ್ತವಿರುವ ಭಾವನೆ ಇರುತ್ತದೆ. ಎಂತಹ ರೀತಿಯಲ್ಲಿ ಎಂದರೆ, ಪ್ರತಿಯೊಬ್ಬನೂ ತಾನೇ ಮುಂದಾಳು ಎಂಬ ಕಲ್ಪನೆ ಮಾಡಿಕೊಳ್ಳುತ್ತಾನೆ. ಶ್ರೀಕೃಷ್ಣನಿಗೆ ಅತ್ಯಂತ ಹತ್ತಿರದ ಮಿತ್ರನಾಗಿದ್ದ ಹಾಗೂ ಮುಖ್ಯ ಉಪಕರಣವಾಗಿದ್ದ ಅರ್ಜುನ ಕೂಡ ತಾನು ಒಂದು ಉಪಕರಣ ಎಂಬುದನ್ನು ಗ್ರಹಿಕೆಗೆ ತಂದುಕೊಂಡಿರಲಿಲ್ಲ ಮತ್ತು ಕೊನೆಗೆ, ಎಲ್ಲ ಕಾಲದಲ್ಲೂ, ತಾನು ತನ್ನ ದೈವೀಮಿತ್ರನನ್ನು ನಿಜವಾಗಿ ಅರಿತುಕೊಂಡಿರಲಿಲ್ಲ ಎಂದು ಒಪ್ಪಿಕೊಳ್ಳಬೇಕಾಯಿತು. ಅವನು ಶ್ರೀಕೃಷ್ಣನ ಜಾಣತನದಿಂದ ಸಲಹೆ ಪಡೆದಿದ್ದಾನೆ, ಅವನ ಸಾಮರ್ಥ್ಯದಿಂದ ಸಹಾಯ ಪಡೆದಿದ್ದಾನೆ, ಅವನನ್ನು ಪ್ರೀತಿಸಿದ್ದಾನೆ, ಅವನ ಪ್ರೀತಿಗೆ ಒಳಗಾಗಿದ್ದಾನೆ, ಅವನ ದೈವೀ ಸ್ವಭಾವವನ್ನು ಅರಿತುಕೊಳ್ಳದೆ ಅವನನ್ನು ಆರಾಧಿಸಿದ್ದಾನೆ, ಆದರೆ ಅವನು ಇತರರು ಪಡೆದಂತೆ ತನ್ನದೇ ಅಹಂಕಾರದ ಮೂಲಕ ಮಾರ್ಗದರ್ಶನ ಪಡೆದಿದ್ದಾನೆ ಮತ್ತು ಆ ಸಲಹೆ, ಸಹಾಯ ಹಾಗೂ ನಿರ್ದೇಶನ ಇವುಗಳನ್ನು ಅವಿದ್ಯೆಯ ಯೋಚನೆಗಳಲ್ಲಿ ಕೊಡಲಾಗಿದೆ ಹಾಗೂ ಸ್ವೀಕರಿಸಲಾಗಿದೆ. ಕುರುಕ್ಷೇತ್ರದಲ್ಲಿ ಆ ಹೋರಾಟದ ಎಲ್ಲವೂ ಭಯಾನಕ ಮಹತ್ವದ ವಿಷಯದತ್ತ ಮುಂದೂಡಿಕೊಂಡು ಹೋದ ಕ್ಷಣ ಬರುವವರೆಗೆ ಮತ್ತು ಅವತಾರಿ ಪುರುಷ ಇನ್ನೂ ಹೋರಾಟಗಾರನಾಗಿ ಅಲ್ಲ, ಆದರೆ ಯುದ್ಧ ರಥದ ಸಾರಥಿಯಾಗಿ ಎದ್ದು ನಿಂತಾಗ, ಆ ರಥ ಹೋರಾಟದ ಅದೃಷ್ಟವನ್ನು ಕೊಂಡೊಯ್ಯುತ್ತಿದ್ದಾಗ ಶ್ರೀಕೃಷ್ಣ ತಾನು ಆಯ್ದುಕೊಂಡವರಿಗೂ ತನ್ನನ್ನು ತೆರೆದು ತೋರಿಸಿರಲಿಲ್ಲ.

ಹೀಗೆ ಶ್ರೀಕೃಷ್ಣನ ಆಕಾರ ಮನುಕುಲದೊಂದಿಗೆ ದೈವೀವ್ಯವಹಾರ ನಡೆಸು–ವುದರ ಸಂಕೇತದಂತಾಗಿರುತ್ತದೆ.

**CWSA, 19/17–18** **– ಶ್ರೀ ಅರವಿಂದರು**

*

**ಅರ್ಜುನ ಹಾಗೂ ಶ್ರೀಕೃಷ್ಣ ಇವರ ಸಾಂಕೇತಿಕ ಒಡನಾಟ**

ಮಾನವ ಜೀವಿ ಹಾಗೂ ದಿವ್ಯಾತ್ಮರಾದ ಅರ್ಜುನ ಹಾಗೂ ಶ್ರೀಕೃಷ್ಣ ಇವರ ಸಾಂಕೇತಿಕ ಒಡನಾಟವನ್ನು ಭಾರತೀಯ ವಿಚಾರಧಾರೆಯಲ್ಲಿ ಬೇರೆಡೆ ಅಭಿವ್ಯಕ್ತ–ಪಡಿಸಲಾಗಿದೆ: ಒಂದೇ ರಥದಲ್ಲಿ ಕುಳಿತಿದ್ದ ಇಂದ್ರ ಹಾಗೂ ಕುತ್ಸ ಇವರ ಕತೆ, ಉಪನಿಷತ್ತಿನಲ್ಲಿ ಹೇಳಲಾದ ಒಂದೇ ಗಿಡದ ಮೇಲೆ ಕುಳಿತಿದ್ದ ಎರಡು ಹಕ್ಕಿಗಳ ಕತೆ, ದೃಷ್ಟಾರರಾದ ನರ ಹಾಗೂ ನಾರಾಯಣ ಇವರಿಬ್ಬರೂ ಒಟ್ಟಿಗೆ ಕುಳಿತು ಜ್ಞಾನಕ್ಕಾಗಿ ತಪಸ್ಸು ಮಾಡುತ್ತಿದ್ದ ಕತೆ. ಆದರೆ ಈ ಮೂರೂ ಕತೆಗಳಲ್ಲಿ ದೈವೀಜ್ಞಾನ ಕುರಿತು ವಿಚಾರಧಾರೆಯಿದೆ, "ಎಲ್ಲ ಕ್ರಿಯೆ ದೈವೀಜ್ಞಾನದಲ್ಲಿ ಪರಾಕಾಷ್ಠೆ ಕಂಡುಕೊಳ್ಳುತ್ತದೆ, ಅದನ್ನು ತನ್ನ ದೃಷ್ಟಿಯಲ್ಲಿ ಇಟ್ಟುಕೊಂಡಿರುತ್ತದೆ" ಎಂದು ಗೀತೆ ಹೇಳುತ್ತದೆ. ಇಲ್ಲಿ ಅದರ ಬದಲಾಗಿ ಕ್ರಿಯೆ ಜ್ಞಾನದತ್ತ ಕರೆದೊಯ್ಯುತ್ತದೆ ಅದರಲ್ಲಿ ದೈವೀ ಜ್ಞಾತಾ ತನ್ನನ್ನು ತೋರಿಸಿಕೊಡುತ್ತಾನೆ. ಮಾನವ ಅರ್ಜುನ ಹಾಗೂ ದೈವೀ ಪುರುಷ ಶ್ರೀಕೃಷ್ಣ ಧ್ಯಾನಕ್ಕಾಗಿರುವ ಶಾಂತಿಯುತ ಆಶ್ರಮದಲ್ಲಿ ದೃಷ್ಟಾರರ ಹಾಗೆ ನಿಂತುಕೊಳ್ಳುವುದಿಲ್ಲ, ಆದರೆ ಕೂಗಾಟದ ಕ್ಷೇತ್ರದಲ್ಲಿ, ಜೋರಾಗಿ ಎಸೆಯುತ್ತಿರುವ ಬಾಣಗಳ ಮಧ್ಯೆ, ಯುದ್ಧ ರಥದಲ್ಲಿ ಹೋರಾಟಗಾರ ಹಾಗೂ ಲಗಾಮು ಹಿಡಿದುಕೊಂಡ ಸಾರಥಿ ಇವರ ರೂಪದಲ್ಲಿ ಕುಳಿತುಕೊಂಡಿದ್ದಾರೆ. ಹಾಗಾಗಿ ಗೀತೋಪದೇಶ ಮಾಡುವವನು ಜ್ಞಾನದ ಶಬ್ದದಲ್ಲಿ ತನ್ನನ್ನು ತೆರೆದು ತೋರಿಸುವ ಮನುಷ್ಯನಲ್ಲಿರುವ ದೇವ ಅಷ್ಟೇ ಅಲ್ಲ, ಆದರೆ ಕ್ರಿಯೆಯ ನಮ್ಮ ಇಡೀ ಜಗತ್ತನ್ನು ಚಲಿಸುವಂತೆ ಮಾಡುವ ಮಾನವನಲ್ಲಿರುವ ದೇವ, ಅವನಿಗಾಗಿ, ಅವನ ಮೂಲಕ ನಮ್ಮ ಮನುಕುಲ ಅಸ್ತಿತ್ವದಲ್ಲಿದೆ, ಹೋರಾಟ ಮಾಡುತ್ತದೆ ಹಾಗೂ ಶ್ರಮಿಸುತ್ತದೆ, ಅವನತ್ತ ಎಲ್ಲ ಮಾನವ ಜೀವನ ಪಯಣಿಸುತ್ತದೆ ಹಾಗೂ ಪ್ರಗತಿ ಸಾಧಿಸುತ್ತದೆ ಅವನು ಕ್ರಿಯೆಗಳ, ಯಜ್ಞಾಹುತಿಗಳ ರಹಸ್ಯ ಪ್ರಭು ಹಾಗೂ ಮಾನವ ಜನಾಂಗಗಳ ದೈವೀಮಿತ್ರ.

**CWSA, 19/19–20** **– ಶ್ರೀ ಅರವಿಂದರು**

*

# ಶ್ರೀಕೃಷ್ಣನ ಐತಿಹಾಸಿಕತೆ

## ಶ್ರೀಕೃಷ್ಣ ನಿಜವಾಗಿ ಪೃಥ್ವಿಯ ಮೇಲೆ ಅಸ್ತಿತ್ವದಲ್ಲಿದ್ದ

ಶ್ರೀಕೃಷ್ಣನ ಐತಿಹಾಸಿಕತೆ ಆಧ್ಯಾತ್ಮಿಕ ದೃಷ್ಟಿಕೋನದಿಂದ ಅವಶ್ಯವಾಗಿರುವುದಿಲ್ಲ, ಆದರೆ ಅದಕ್ಕಿನ್ನೂ ಅಸಾಧಾರಣ ಮೌಲ್ಯವಿದೆ. ಮಾನವ ಶ್ರೀಕೃಷ್ಣ ಪೌರಾಣಿಕ ವ್ಯಕ್ತಿಯಾಗಲಿ ಇಲ್ಲವೆ ಕಾವ್ಯಮಯ ಶೋಧನೆಗೆ ಒಳಗಾದವನಾಗಲಿ ಅಲ್ಲ, ಆದರೆ ನಿಜವಾಗಿ ಪೃಥ್ವಿಯ ಮೇಲೆ ಅಸ್ತಿತ್ವದಲ್ಲಿದ್ದ ಹಾಗೂ ಭಾರತದ ಗತಕಾಲದಲ್ಲಿ ಪಾತ್ರವನ್ನು ವಹಿಸಿದ್ದ ಎಂಬುದರ ಬಗ್ಗೆ ತರ್ಕಬದ್ಧ ಸಂಶಯ ಇರುವುದೆಂದು ನನಗೆ ತೋರಿಬರುವುದಿಲ್ಲ.

ವಾಸ್ತವದಲ್ಲಿ ಎರಡು ಸಂಗತಿಗಳು ಹೊರಹೊಮ್ಮಿ ಬರುತ್ತವೆ: ಅವನನ್ನು ಮಹತ್ವದ ಆಧ್ಯಾತ್ಮಿಕ ವ್ಯಕ್ತಿ ಎಂದು ಪರಿಗಣಿಸಲಾಗಿತ್ತು, ಅವನ ಆಧ್ಯಾತ್ಮಿಕ ಜ್ಞಾನ ಪ್ರಕಾಶವನ್ನು ಉಪನಿಷತ್ತೊಂದರಲ್ಲಿ ದಾಖಲಿಸಲಾಗಿದೆ ಮತ್ತು ಸಾಂಪ್ರದಾಯಿಕ–ವಾಗಿ ಅವನು ದೈವೀ ಪುರುಷನೆಂದು ಪರಿಗಣಿಸಲಾಗಿತ್ತು, ಅವನ ಮೃತ್ಯುವಿನ ನಂತರ ಅವನೊಬ್ಬ ದೇವತೆಯೆಂದು ಪೂಜಿಸಲಾಗುತ್ತಿತ್ತು; ಇದು ಮಹಾಭಾರತ ಹಾಗೂ ಪುರಾಣಗಳಲ್ಲಿ ಬರುವ ಕತೆಗೆ ಹೊರತಾದದ್ದು. ಭಾಗವತ ಧರ್ಮದ ಅಭಿವೃದ್ಧಿಯ ಜೊತೆಗೆ ಅವನ ಹೆಸರಿನ ಜೋಡಣೆ, ಭಾರತೀಯ ಆಧ್ಯಾತ್ಮಿಕತೆಯ ಪ್ರವಾಹದಲ್ಲಿ ಮಹತ್ವದ ಹರಿವು ಇವುಗಳನ್ನು ಕೇವಲ ಪುರಾಣದ ಆಧಾರದ ಮೇಲೆ ಇಲ್ಲವೆ ಕಾವ್ಯಮಯ ಶೋಧನೆಯ ಮೇಲೆ ಮಾಡಲಾಗಿತ್ತು ಎಂದು ಭಾವಿಸುವುದು ತರ್ಕಬದ್ಧವಾಗಿರುವುದಿಲ್ಲ. ಮಹಾಭಾರತ ಒಂದು ಕಾವ್ಯ, ಇತಿಹಾಸವಲ್ಲ, ಆದರೆ ಒಂದು ಶ್ರೇಷ್ಠ ಐತಿಹಾಸಿಕ ಘಟನೆಯ ಆಧಾರ ಪಡೆದಿದೆ, ಅದನ್ನು ಸಾಂಪ್ರದಾಯಿಕವಾಗಿ ನೆನಪಿನಲ್ಲಿಟ್ಟುಕೊಂಡು ಬರಲಾಗಿದೆ, ಅದರೊಂದಿಗೆ ಸಂಬಂಧ ಹೊಂದಿದ್ದ ವ್ಯಕ್ತಿಗಳು ಉದಾಹರಣೆಗೆ ಧೃತರಾಷ್ಟ್ರ, ಪರೀಕ್ಷಿತ ಇವರು ನಿಜವಾಗಿ ಅಸ್ತಿತ್ವದಲ್ಲಿದ್ದರು ಮತ್ತು ನೇತಾರ, ಯೋಧ ಹಾಗೂ ರಾಜ್ಯನೀತಿಜ್ಞ ಎಂದು ಪಾತ್ರ ವಹಿಸಿದ ಶ್ರೀಕೃಷ್ಣನ ಕತೆಯನ್ನು ಸಂಭವನೀಯವೆಂದು ಒಪ್ಪಿಕೊಳ್ಳಬಹುದು ಮತ್ತು ಅದು ಎಲ್ಲ ತೋರಿಕೆಗೆ ಐತಿಹಾಸಿಕ ಮೌಲ್ಯ ನೀಡಬಹುದಾದ ಸಾಂಪ್ರದಾಯದ ಮೇಲೆ ಸ್ಥಾಪಿತವಾಗಿದೆ, ಅದು ಮಿಥ್ಯೆಯ ಗಾಳಿ ಸುದ್ದಿಯಲ್ಲ ಇಲ್ಲವೆ ಕಾವ್ಯಮಯ ಶೋಧನೆಯಲ್ಲ. ಮಾನವ ಶ್ರೀಕೃಷ್ಣನ ಐತಿಹಾಸಿಕ ಬಾಹ್ಯಾಕೃತಿ ಕುರಿತು ಸಿದ್ಧಾಂತದ ಕಾರಣವಿರುವ ದೃಷ್ಟಿಕೋನದಿಂದ ಅಷ್ಟರಮಟ್ಟಿಗೆ

ಧನಾತ್ಮಕವಾಗಿ ಹೇಳಬಹುದು. ಆದರೆ ನನ್ನ ದೃಷ್ಟಿಕೋನದಿಂದ ಅಲ್ಲಿ ಇನ್ನೂ ಹೆಚ್ಚಿನದಿದೆ, ನಾನು, ಯಾವಾಗಲೂ, ಅವತಾರವನ್ನು ವಸ್ತುಸ್ಥಿತಿ ಎಂದು ಪರಿಗಣಿಸಿದ್ದೇನೆ ಮತ್ತು ಕ್ರಿಸ್ತನ ಐತಿಹಾಸಿಕತೆಯನ್ನು ನಾನು ಒಪ್ಪಿಕೊಂಡ ಹಾಗೆ ಶ್ರೀಕೃಷ್ಣನ ಐತಿಹಾಸಿಕತೆಯನ್ನು ಒಪ್ಪಿಕೊಳ್ಳುತ್ತೇನೆ.

*

**ಐತಿಹಾಸಿಕ ಶ್ರೀಕೃಷ್ಣ ನಿಸ್ಸಂಶಯವಾಗಿ ಅಸ್ತಿತ್ವದಲ್ಲಿದ್ದ**

ಐತಿಹಾಸಿಕ ಶ್ರೀಕೃಷ್ಣ, ನಿಸ್ಸಂಶಯವಾಗಿ, ಅಸ್ತಿತ್ವದಲ್ಲಿದ್ದ. ಅವನ ಹೆಸರನ್ನು ನಾವು ಮೊದಲಿಗೆ ಛಾಂದೋಗ್ಯ ಉಪನಿಷತ್ತಿನಲ್ಲಿ ಕಂಡುಕೊಳ್ಳುತ್ತೇವೆ. ಅಲ್ಲಿ ನಾವು ಸಂಗ್ರಹಿಸಬಹುದಾದ ಮಾಹಿತಿ ಎಂದರೆ ಬ್ರಹ್ಮನ್‌ನನ್ನು ಅರಿತುಕೊಂಡವನೆಂದು ಆಧ್ಯಾತ್ಮಿಕ ಸಂಪ್ರದಾಯದಲ್ಲಿ ಸುಪರಿಚಿತನಾಗಿದ್ದ, ಅವನ ವ್ಯಕ್ತಿತ್ವದಲ್ಲಿ ಮತ್ತು ಅವನ ಜೀವನದ ಪರಿಸ್ಥಿತಿಗಳಲ್ಲಿ ಎಷ್ಟೊಂದು ಸುಪರಿಚಿತನಾಗಿದ್ದನೆಂದರೆ ದೇವಕಿಯ ಮಗ ಶ್ರೀಕೃಷ್ಣ (ದೇವಕಿ ನಂದನ) ಎಂದರೆ ಎಲ್ಲರಿಗೂ ಅವನಾರೆಂಬುದು ತಿಳಿಯುತ್ತಿತ್ತು. ಅದೇ ಉಪನಿಷತ್ತಿನಲ್ಲಿ ವಿಚಿತ್ರವೀರ್ಯನ ಮಗ ಧೃತರಾಷ್ಟ್ರನ ಹೆಸರಿರುವುದನ್ನು ನೋಡುತ್ತೇವೆ ಮತ್ತು ಸಂಪ್ರದಾಯ ಅವರಿಬ್ಬರನ್ನು ಎಷ್ಟೊಂದು ಹತ್ತಿರ ತಂದಿದೆ ಎಂದರೆ ಅವರು ಮಹಾಭಾರತದ ಕ್ರಿಯೆಯಲ್ಲಿ ಮುಂದಾಳುತ್ವ ವಹಿಸಿದ ವ್ಯಕ್ತಿಗಳಾಗಿದ್ದರು ಹಾಗೂ ಸಮಕಾಲೀನರಾಗಿದ್ದರು ಎಂಬ ತೀರ್ಮಾನಕ್ಕೆ ಬರಬಹುದು ಮತ್ತು ಆ ಮಹಾಕಾವ್ಯ ಹೆಚ್ಚಿನ ಮಟ್ಟಿಗೆ ಐತಿಹಾಸಿಕ ಉನ್ನತ ವ್ಯಕ್ತಿಗಳೊಂದಿಗೆ ವ್ಯವಹರಿಸುತ್ತದೆ ಮತ್ತು ಕುರುಕ್ಷೇತ್ರದ ಯುದ್ಧದಲ್ಲಿ ಆದ ಐತಿಹಾಸಿಕ ಘಟನೆ ಆ ಕುಲದ ನೆನಪಿನಲ್ಲಿ ದೃಢವಾಗಿ ಉಳಿದುಕೊಂಡಿದೆ. ಕ್ರಿಶ್ಚಿಯನ್ ಶತಮಾನಗಳ ಮೊದಲು ಶ್ರೀಕೃಷ್ಣ ಹಾಗು ಅರ್ಜುನ ಇವರಿಗೆ ಧಾರ್ಮಿಕ ಪೂಜೆಯನ್ನು ಅರ್ಪಿಸಲಾಗುತ್ತಿತ್ತು ಎಂಬುದು ತಿಳಿದು ಬಂದಿದೆ. ಅದು ಹಾಗಿತ್ತು ಎನ್ನುವುದಕ್ಕೆ ಯಾವುದೋ ಒಂದು ಕಾರಣವಿದೆ, ಅದು ಧಾರ್ಮಿಕ ಮತ್ತು ತತ್ವಜ್ಞಾನದ ಸಂಪ್ರದಾಯಕ್ಕೆ ಸಂಬಂಧಿಸಿದ್ದಾಗಿತ್ತು, ಅದರಿಂದ ಗೀತೆ ತನ್ನ ಬಹಳಷ್ಟು ಅಂಶಗಳನ್ನು ಕೂಡಿಟ್ಟುಕೊಂಡಿರಬಹುದು, ಅದರಲ್ಲಿ ಬರುವ ಜ್ಞಾನ, ಭಕ್ತಿ ಹಾಗೂ ಕರ್ಮಗಳ ಸಮನ್ವಯವನ್ನೂ ಕೂಡ ಕಂಡುಕೊಂಡಿರಬಹುದು ಮತ್ತು ಬಹುಶಃ ಮಾನವ ಶ್ರೀಕೃಷ್ಣ ಈ ಪಂಥದ ಸಂಸ್ಥಾಪಕ, ಪುನರುಜ್ಜೀವನಗೊಳಿಸುವವ ಇಲ್ಲವೆ ಕನಿಷ್ಠ ಪಕ್ಷ ಈ ಪಂಥದ ಗುರುಗಳಲ್ಲಿ ಒಬ್ಬನಾಗಿರಬಹುದು. ನಂತರದ ರೂಪ

ಬೇರೆ ಆಗಿದ್ದರೂ ಕೂಡ ಗೀತೆ ಭಾರತೀಯ ಯೋಚನೆಯ ಫಲಿತಾಂಶವನ್ನು ಪ್ರತಿನಿಧಿಸುತ್ತದೆ, ಆ ಬೋಧನೆ ಶ್ರೀಕೃಷ್ಣನದಾಗಿದ್ದು ಮತ್ತು ಆ ಬೋಧನೆಯ ಸಂಪರ್ಕ ಅರ್ಜುನನೊಡನಿದ್ದ ಐತಿಹಾಸಿಕ ಶ್ರೀಕೃಷ್ಣನೊಡನಿರಬಹುದು ಮತ್ತು ಕುರುಕ್ಷೇತ್ರದ ಯುದ್ಧ ನಾಟಕೀಯ ಕಟ್ಟುಕತೆಗಿಂತ ಹೆಚ್ಚಿನದೇನೋ ಆಗಿರಬಹುದು.

ಮಹಾಭಾರತ ಮಹಾಕಾವ್ಯದಲ್ಲಿ ಶ್ರೀಕೃಷ್ಣನನ್ನು ಐತಿಹಾಸಿಕ ಪಾತ್ರ ಹಾಗೂ ಅವತಾರಿ ಪುರುಷ ಎಂದು ಪ್ರತಿನಿಧಿಸಲಾಗಿದೆ. ಆ ವೇಳೆಗೆ ಅವನನ್ನು ಕುರಿತ ಪೂಜೆ ಹಾಗೂ ಅವನ ಅವತಾರತತ್ವ ಸರಿಯಾಗಿ ಸ್ಥಾಪಿತಗೊಂಡಿರಬೇಕು– ತೋರಿಕೆಗೆ ಐದನೆಯ B.C (before Christ) ಯಿಂದ ಒಂದನೆಯ B.C ಯವರೆಗೆ– ಆಗ ಹಳೆಯ ಕತೆ ಹಾಗೂ ಕಾವ್ಯ ಇಲ್ಲವೆ ಭರತರ ಮಹಾಕಾವ್ಯದ ಸಂಪ್ರದಾಯ ಸದ್ಯದ ರೂಪ ಪಡೆಯಿತು. ಆ ಕತೆಯಲ್ಲಿ ಇಲ್ಲವೆ ಪುರಾಣದಲ್ಲಿ ಅವತಾರಿ ಪುರುಷನ ಬೃಂದಾವನದಲ್ಲಿಯ ಮೊದಲ ದಿನಗಳ ಜೀವನದ ಒಂದು ಸುಳಿವಿದೆ. ಪುರಾಣಗಳು ಅದನ್ನು ಗಾಢ ಹಾಗೂ ಸಾಮರ್ಥ್ಯಪೂರ್ಣ ಸಂಕೇತ–ವನ್ನಾಗಿ ಅಭಿವೃದ್ಧಿಪಡಿಸಿದವು. ಅದು ಭಾರತದ ಧಾರ್ಮಿಕ ಮನಸ್ಸಿನ ಮೇಲೆ ಅತ್ಯಂತ ಗಾಢ ಪ್ರಭಾವ ಬೀರಿದೆ. ಹಾಗೆಯೇ ಹರಿವಂಶದಲ್ಲಿ ಶ್ರೀಕೃಷ್ಣನ ಜೀವನದ ವೃತ್ತಾಂತವಿದೆ, ಸ್ಪಷ್ಟವಾಗಿ ಪುರಾಣ ಕತೆಗಳಿಂದ ತುಂಬಿಕೊಂಡಿದೆ, ಅದು ಪೌರಾಣಿಕ ವೃತ್ತಾಂತಗಳಿಗೆ ಆಧಾರ ಒದಗಿಸಿರಬಹುದು.

**CWSA, 19/14–15** **– ಶ್ರೀ ಅರವಿಂದರು**

*

**ಬೃಂದಾವನ, ಗೋಕುಲ ಹಾಗೂ ಗೋಪಿಯರ ಲೀಲೆ**

ಬೃಂದಾವನದ ಕತೆ ಇನ್ನೊಂದು ವಿಷಯ, ಅದು ಮಹಾಭಾರತದ ಮುಖ್ಯ ಕತೆಯಲ್ಲಿ ಪ್ರವೇಶ ಪಡೆದಿಲ್ಲ ಮತ್ತು ಅದಕ್ಕೆ ಪೌರಾಣಿಕ ಮೂಲವಿದೆ ಮತ್ತು ಅದರ ಉದ್ದೇಶ ಉದ್ದಕ್ಕೂ ಸಾಂಕೇತಿಕ ಲಕ್ಷಣವನ್ನು ಹೊಂದಿರುವಂತೆ ನಿರ್ವಹಿಸಿಕೊಂಡು ಬರಲಾಗಿದೆ. ಒಂದು ಕಾಲಕ್ಕೆ ಆ ವಿವರಣೆಯನ್ನು ನಾನು ಒಪ್ಪಿಕೊಂಡಿದ್ದೆ, ಆದರೆ ನಂತರ ಅದನ್ನು ಬಿಟ್ಟುಕೊಡಬೇಕಾಯಿತು. ಪುರಾಣಗಳಲ್ಲಿ ಇಂತಹ ಉದ್ದೇಶಕ್ಕೆ ದ್ರೋಹವೇನೂ ಇಲ್ಲ. ಅದು ನಿಜವಾಗಿ ಸಂಭವಿಸಿತ್ತು ಇಲ್ಲವೆ ಎಲ್ಲಿಯೋ ಅದು ಸಂಭವಿಸುತ್ತಿರುತ್ತದೆ ಎಂಬಂತೆ ಹೇಳಲಾಗಿದೆ, ಅವರಿಗೆ ಗೋಪಿಯರು ನೈಜತೆಗಳು, ಸಂಕೇತಗಳಲ್ಲ, ಅವರಿಗೆ ಕನಿಷ್ಠಪಕ್ಷ ಅದು ಒಂದು ರಹಸ್ಯ

ಸತ್ಯವಾಗಿತ್ತು ಮತ್ತು ರಹಸ್ಯವಾದದ್ದು ಮತ್ತು ಸಾಂಕೇತಿಕವಾದದ್ದು ಒಂದೇ ಅಲ್ಲ. ಸಂಕೇತ ಕೇವಲ ಪ್ರಾಮುಖ್ಯತೆಯುಳ್ಳ ಮಾನಸಿಕ ರಚನೆಯಾಗಿರಬಹುದು ಇಲ್ಲವೆ ಲಹರಿಗನುಸಾರವಾಗಿ ಕೈಕೊಂಡ ಆವಿಷ್ಕರಣ (invention) ಆಗಿರಬಹುದು. ಆದರೆ ರಹಸ್ಯವಾದದ್ದು ಒಂದು ನೈಜತೆ, ಪ್ರಾಪಂಚಿಕ ದೃಶ್ಯದ ಹಿಂದೆ ಅದೆಲ್ಲಿಯೋ ಇರುವ ನೈಜತೆಯಾಗಿರಬಹುದು ಮತ್ತು ಪೃಥ್ವಿಯ ಮೇಲಿನ ಜೀವನಕ್ಕೆ ಅದರ ಸತ್ಯವಿರಬಹುದು ಹಾಗೂ ಅದರ ಮೇಲೆ ಪ್ರಭಾವವಿರಬಹುದು, ಅಲ್ಲಿ ಮೈವೆತ್ತಲೂಬಹುದು. ಗೋಪಿಯರ ಲೀಲೆ ದೈವೀ ಗೋಕುಲದಲ್ಲಿ ಯಾವಾಗಲೂ ನಡೆಯುತ್ತಿರುವ ಏನೋ ಒಂದೆಂದು ಅದನ್ನು ಕಲ್ಪಿಸಿಕೊಳ್ಳಬಹುದು ಮತ್ತು ಅದು ಪೃಥ್ವಿಯ ಮೇಲಿನ ಬೃಂದಾವನದಲ್ಲಿ ತನ್ನನ್ನು ಪ್ರಕ್ಷೇಪಿಸಿಕೊಂಡಿತು ಮತ್ತು ಅದನ್ನು ಯಾವಾಗಲೂ ಸಿದ್ಧಿಸಿಕೊಳ್ಳಬಹುದು ಮತ್ತು ಅದರ ಅರ್ಥ ಆತ್ಮಕ್ಕೆ ನಿಜವಾದ–ದ್ದನ್ನಾಗಿ ಮಾಡಬಹುದು. ಪುರಾಣದ ಲೇಖಕರು ಅದು ನಿಜವಾಗಿ ಪೃಥ್ವಿಯ ಮೇಲೆ ಅವತಾರ ತಾಳಿದ ಶ್ರೀಕೃಷ್ಣನ ಜೀವನದಲ್ಲಿ ಪ್ರಕ್ಷೇಪಿಸಲಾಗಿತ್ತೆಂದು ಭಾವಿಸಿದರು ಮತ್ತು ಅದನ್ನು ಹಾಗೆ ಭಾರತದ ಧಾರ್ಮಿಕ ಜೀವನ ಒಪ್ಪಿಕೊಂಡಿದೆ.

*

**ಆಂತರಿಕ ಸಂಪರ್ಕ ಹೆಚ್ಚು ಮಹತ್ವದ್ದು**

ಮೇಲೆದ್ದು ಬರುವಂತೆ ಮಾಡಿದ ಈ ಪ್ರಶ್ನೆಗಳು, ಊಹನಗಳು. ಆಧ್ಯಾತ್ಮಿಕ ಜೀವನಕ್ಕೆ ಅನಿವಾರ್ಯವಾದ ಸಂಪರ್ಕ ಹೊಂದಿಲ್ಲ. ಶ್ರೀಕೃಷ್ಣನೊಡನೆ ಸಂಪರ್ಕ ಹಾಗೂ ಶ್ರೀಕೃಷ್ಣ ಪ್ರಜ್ಞೆಯ ಬೆಳವಣಿಗೆ, ಸಾನ್ನಿಧ್ಯ, ಆಧ್ಯಾತ್ಮಿಕ ಸಂಬಂಧ, ಆತ್ಮದಲ್ಲಿ ಏಕತೆ ಇವೆಲ್ಲವುಗಳ ಬೆಳವಣಿಗೆ ಹಾಗೂ ಮಾರ್ಗದಲ್ಲಿ ದೊರಕಿಸಬಹುದಾದ ಜ್ಞಾನೋದಯ ಇಲ್ಲಿ ಮಹತ್ವದವಾಗಿರುತ್ತವೆ. ಯಾರು ಇವೆಲ್ಲವನ್ನು ದೊರಕಿಸಿ–ರುವರೋ, ಆ ಸಾನ್ನಿಧ್ಯದಲ್ಲಿ ಜೀವಿಸಿರುವರೋ, ಆ ಧ್ವನಿಯನ್ನು ಕೇಳಿರುವರೋ, ಶ್ರೀಕೃಷ್ಣನನ್ನು ಮಿತ್ರನೆಂದು, ಪ್ರಿಯಕರನೆಂದು, ಮಾರ್ಗದರ್ಶಕನೆಂದು, ಗುರುವೆಂದು, ಪ್ರಭುವೆಂದು ಇಲ್ಲವೆ ಅದಕ್ಕೂ ಹೆಚ್ಚಾಗಿ ಯಾರ ಪ್ರಜ್ಞೆ ಆ ಸಂಪರ್ಕದಿಂದ ಬದಲಾಗಿರುವುದೋ ಇಲ್ಲವೆ ಅಂತರಂಗದಲ್ಲಿ ಸಾನ್ನಿಧ್ಯದ ಭಾವನೆ ಬಂದಿರುವುದೋ ಅಂತಹರಿಗೆ ಇಂತಹ ಪ್ರಶ್ನೆಗಳು ಕೇವಲ ಬಾಹ್ಯ ಹಾಗೂ ಮೇಲ್ಮೈ ಆಸಕ್ತಿ ಹುಟ್ಟಿಸುವಂತಹವಾಗಿರುತ್ತವೆ.

ಹಾಗೆಯೇ ಯಾರು ಆಂತರಿಕ ಬೃಂದಾವನದ ಹಾಗೂ ಗೋಪಿಯರ ಲೀಲೆಗಳ ಸಂಪರ್ಕದಲ್ಲಿ ಬಂದಿರುವರೋ, ಶರಣಾಗತಿ ಮಾಡಿಕೊಂಡಿರುವರೋ ಆ ಸೌಂದರ್ಯದ ಹಾಗೂ ಸಂತೋಷದ ಮೋಹಕತೆಗೆ ಒಳಗಾಗಿರುವರೋ ಅಂತಹರಿಗೆ ಉಳಿದದ್ದು ಅತಿಕಡಿಮೆ ಮಹತ್ವದ್ದಾಗಿರುತ್ತದೆ. ಆದರೆ ಇನ್ನೊಂದು ದೃಷ್ಟಿಕೋನದಿಂದ ಮನುಷ್ಯ ಅವತಾರದ ಐತಿಹಾಸಿಕ ನೈಜತೆಯನ್ನು ಒಪ್ಪಿಕೊಂಡರೆ ಅಲ್ಲಿ ಮನುಷ್ಯನಿಗೆ (a point of d' appui) ಆಧಾರ ಬಿಂದು ಇರುವ ಶ್ರೇಷ್ಠ ಆಧ್ಯಾತ್ಮಿಕ ಲಾಭವಿರುತ್ತದೆ, ಅದು ಹೆಚ್ಚು ಮೂರ್ತರೂಪದ ಸಿದ್ಧಿಗಾಗಿರುತ್ತದೆ: ಕನಿಷ್ಠಪಕ್ಷ ಒಮ್ಮೆಯಾದರೂ ಭಗವಂತ ಕಣ್ಣಿಗೆ ಕಾಣುವ ಹಾಗೆ ಪೃಥ್ವಿಯನ್ನು ಸ್ಪರ್ಶಿಸಿದ್ದ, ಸಂಪೂರ್ಣ ಪ್ರಕಟಣೆ ಸಾಧ್ಯವಾಗುವಂತೆ ಮಾಡಿದ, ಉತ್ಕ್ರಾಂತಿ ಹೊಂದುತ್ತಿರುವ, ಆದರೆ ಇನ್ನೂ ಬಹಳ ಅಪರಿಪೂರ್ಣವಾಗಿರುವ ಪಾರ್ಥಿವ ಸ್ವಭಾವದಲ್ಲಿ ದೈವೀ ಉನ್ನತ ಸ್ವಭಾವ ಅವರೋಹಣ ಮಾಡುವಂತೆ ಮಾಡಿದ ಎಂಬ ವಿಷಯಗಳನ್ನು ಒಳಗೊಂಡಿರುತ್ತದೆ.

**CWSA, 28/483–84** **– ಶ್ರೀ ಅರವಿಂದರು**

*

## ಬಾಹ್ಯ ಮುಖಕ್ಕೆ ಕೇವಲ ಗೌಣ ಮಹತ್ವವಿರುತ್ತದೆ

ಅವತಾರತ್ವದ ಕಲ್ಪನೆಯ ಬಗ್ಗೆ ನಾವು ಹೀಗೆ ತಿಳಿದುಕೊಂಡಾಗ ನಮಗೆ ಕಂಡುಬರುವುದೇನೆಂದರೆ ಗೀತೆಯ ಮೂಲಭೂತ ಬೋಧನೆ, ನಮ್ಮ ಸದ್ಯದ ವಿಷಯ, ಇಲ್ಲವೆ ಸಾಧಾರಣವಾದ ಆಧ್ಯಾತ್ಮದ ಜೀವನ ಇವೆಲ್ಲವುಗಳಿಗೆ ಬಾಹ್ಯ ಮುಖ ಕೇವಲ ಗೌಣ ಮಹತ್ವ ಹೊಂದಿರುತ್ತದೆ. ಕ್ರಿಸ್ತನ ಐತಿಹಾಸಿಕತೆ ಕುರಿತು ಯುರೋಪ ದೇಶದಲ್ಲಿ ಉಂಟಾದ ಕೂಗಾಟದ ಹಾಗೆ ಇಂತಹ ವಾದ ವಿವಾದಗಳು ಆಧ್ಯಾತ್ಮಿಕ ಮನಸ್ಸುಳ್ಳ ಭಾರತೀಯನಿಗೆ ವೇಳೆ ಹಾಳುಮಾಡುವ ವಿಷಯಗಳು ಎಂದು ತೋರಿಬರುತ್ತವೆ. ಅವನು ಅದಕ್ಕೆ ಸಾಕಷ್ಟು ಐತಿಹಾಸಿಕ ಮಹತ್ವವಿರುವುದನ್ನು ಒಪ್ಪಿಕೊಳ್ಳುತ್ತಾನೆ, ಆದರೆ ಧಾರ್ಮಿಕ ಮಹತ್ವವನ್ನಲ್ಲ, ಆಧ್ಯಾತ್ಮಿಕ ಅನುಭವದಿಂದ ಆಂತರಿಕ ಕ್ರಿಸ್ತನನ್ನು ನಾವು ತಿಳಿದುಕೊಂಡಾಗ, ಅವನ ಬೋಧನೆಯಿಂದ ಮೇಲಕ್ಕೆತ್ತಲ್ಪಟ್ಟವರಾಗಿ ಶಿಲುಬೆಗೇರಿಸುವಿಕೆ ಒಂದು ಸಂಕೇತವಾದ ದೇವನೊಡನೆ ಮಾನವ ಪ್ರಾಯಶ್ಚಿತ್ತವನ್ನು ಕೈಕೊಂಡು ಸ್ವಾಭಾವಿಕ ನಿಯಮ ಹೇರುವ ನೊಗದಿಂದ ಪಾರಾಗುವಂತಾದಾಗ, ಬಡಿಗ ಜೋಸೆಫನ ಮಗ

ಜೀಸಸ್ ನಿಜವಾಗಿ ನಝರಾತ್‌ನಲ್ಲಿ ಜನಿಸಿದನೋ, ಬೆಥಲೆಮ್‌ನಲ್ಲಿ ಜನಿಸಿದನೋ, ಜೀವಿಸಿ ಬೋಧಿಸಿದನೋ, ಅವನ ಮೇಲೆ ರಾಷ್ಟ್ರದ್ರೋಹದ ಆಪಾದನೆಯನ್ನು ಹೊರಿಸಿ ಅವನಿಗೆ ಮೃತ್ಯುದಂಡಕೊಡಲಾಯಿತೋ ಎಂಬುದಕ್ಕೆ ಯಾವ ಮಹತ್ವವಿದೆ? ದೇವನು ಮಾಡಿದ ಮನುಷ್ಯನಾದ ಕ್ರಿಸ್ತ ನಮ್ಮ ಆಧ್ಯಾತ್ಮಿಕ ಸತ್ತೆಯಲ್ಲಿ ಜೀವಿಸುವುದಾದರೆ ಮೇರಿಯ ಮಗನೊಬ್ಬ ಭೌತಿಕವಾಗಿ ಜೀವಿಸಿದ್ದನೋ ವೇದನೆಗೊಳಗಾಗಿ ಜುಡೆಯಾ (Judea)ದಲ್ಲಿ ಮೃತ್ಯು ಹೊಂದಿದನೋ ಎಂಬುದಕ್ಕೆ ಬಹಳ ಮಹತ್ವವಿರುವುದಿಲ್ಲ. ಹಾಗೆಯೇ ನಮಗೆ ಮಹತ್ವದ್ದಾದ ವಿಷಯ ಶ್ರೀಕೃಷ್ಣ ಭಗವಂತನ ಸನಾತನ ಅವತಾರವೆಂಬುದಾಗಿದೆ, ಅವನು ಐತಿಹಾಸಿಕ ಗುರುವಾಗಿದ್ದ ಇಲ್ಲವೆ ಜನರ ನೇತಾರನಾಗಿದ್ದ ಎಂಬುದಲ್ಲ.

ಹಾಗಾಗಿ ಗೀತೆಯ ಯೋಚನೆಯ ತಿರುಳನ್ನು ಅರಸುವುದರಲ್ಲಿ ನಾವು ಸಂಬಂಧ ಹೊಂದಿರಬೇಕಾದುದು ಕೇವಲ ಆಧ್ಯಾತ್ಮಿಕ ಪ್ರಾಮುಖ್ಯತೆ ಹೊಂದಿರುವ ಮಾನವ–ದೈವೀ ಕೃಷ್ಣನೊಡನೆ, ಅವನನ್ನು ನಮಗೆ ಮಹಾಭಾರತದಲ್ಲಿ ಕುರುಕ್ಷೇತ್ರದ ರಣರಂಗದಲ್ಲಿ ಅರ್ಜುನನ ಗುರುವೆಂದು ಪ್ರತಿನಿಧಿಸಲಾಗಿದೆ.

**CWSA, 19/15** **– ಶ್ರೀ ಅರವಿಂದರು**

*

# ಅವತಾರ ಪುರುಷ ಶ್ರೀಕೃಷ್ಣ

## ಅವತಾರದ ಅರ್ಥ ಹಾಗೂ ಉದ್ದೇಶ

ದೈವತ್ವದ ಪ್ರಕಟಣೆಯನ್ನು ಕುರಿತು ಅವರು ಯೋಚಿಸಿದಾಗ, ಆ ಪ್ರಕಟಣೆಯಲ್ಲಿ ಸರ್ವಸಾಧಾರಣ ಮಾನವ ಕಾರ್ಯ ಕುರಿತು ಅಸಾಧಾರಣ ಪರಿಪೂರ್ಣತೆ ಇರಬೇಕು: ವ್ಯವಹಾರ ಕುರಿತು ಅಸಾಧಾರಣ ಸಹಜಶಕ್ತಿ, ರಾಜಕೀಯ, ಕಾವ್ಯರಚನೆಯ ಇಲ್ಲವೆ ಕಲಾತ್ಮಕ ಸಹಜ ಶಕ್ತಿ, ನಿಖರವಾದ ನೆನಪಿನ ಶಕ್ತಿ, ಮಾನಸಿಕವಾದ ಯಾವುದೇ ತಪ್ಪು ಮಾಡದೆ ಇರುವುದು, ಯಾವುದೇ ಬಗೆಯ ಸೋಲು ಇಲ್ಲವೆ ವಿಫಲತೆಗೆ ಒಳಗಾಗದೆ ಇರುವುದು ಇತ್ಯಾದಿ. ಇಲ್ಲವೆ ಬೇರೆ ರೀತಿಯಲ್ಲಿ ಅತಿಮಾನವವನವು ಎನಿಸಬಹುದಾದ ಕಾರ್ಯಗಳನ್ನು ನಿರೀಕ್ಷಿಸ–ಲಾಗುತ್ತಿತ್ತು. ನಾನು ಆಹಾರ ಸೇವಿಸದೆ ಹಾಗೆಯೇ ಬದುಕಿರಬೇಕೆಂದು ನಿರೀಕ್ಷಿಸುತ್ತಿದ್ದ ಜನರಿದ್ದರು. ಮುಂಬೈಯ ಹತ್ತಿಯ ಷೇರು ಧಾರಣಿಯಲ್ಲಿ

ದೈನಂದಿನವಾಗಿ ಯಾವ ಬೆಲೆ ದೊರಕುವುದು ಎಂಬುದನ್ನು ಮುಂಚಿತವಾಗಿ ನನ್ನಿಂದ ತಿಳಿದುಕೊಳ್ಳಬಯಸಿದ ಜನರಿದ್ದರು. ಇಲ್ಲವೆ ಮೊಳೆಗಳ ಹಾಸಿಗೆಯ ಮಲಗಲು ಶಕ್ತನಾದ ಇಲ್ಲವೆ ಮೊಳೆಗಳನ್ನು ತಿನ್ನುವ ಮನುಷ್ಯ ಶ್ರೇಷ್ಠ ಯೋಗಿ ಎಂದು ಪರಿಗಣಿಸಲಾಗುತ್ತಿತ್ತು. ಭಗವಂತನನ್ನು ಪ್ರಕಟಿಸುವುದಕ್ಕೆ ಅದೆಲ್ಲದರಿಂದ ಏನೂ ಆಗಬೇಕಾಗಿಲ್ಲ.

ಆ ವಿಚಾರದ ಪ್ರಕಾರ ಶ್ರೀರಾಮ ದೈವಿಕವಾಗಿರಲು ಸಾಧ್ಯವಿಲ್ಲ, ಏಕೆಂದರೆ ಅವನು ಮಾಯಾಮೃಗವನ್ನು ಸಾಧಾರಣ ಚಿಗರೆಯನ್ನು ಬೆನ್ನಟ್ಟುವ ಹಾಗೆ ಬೆನ್ನಟ್ಟಿದ. ಶ್ರೀಕೃಷ್ಣ ದೈವಿಕವಾಗಿರುವುದು ಸಾಧ್ಯವಿಲ್ಲ, ಏಕೆಂದರೆ ಜರಾಸಂಧ ದೂರದಲ್ಲಿರುವ ದ್ವಾರಕೆಯಲ್ಲಿ ಶರಣು ಸ್ಥಾನವನ್ನು ಕಂಡುಕೊಳ್ಳುವಂತೆ ಅವನ ಮೇಲೆ ಶಕ್ತಿ ಪ್ರಯೋಗ ಮಾಡಿದ. ಈ ಬಗೆಯ ಮಾನವ ವಿಚಾರಗಳು ಮಿಥ್ಯೆಯ–ವಾಗಿರುತ್ತವೆ. ದೈವತ್ವ ಇನ್ನೊಂದು ಪ್ರಜ್ಞೆಯ ಪ್ರಕಾರ ಕಾರ್ಯಕೈಕೊಳ್ಳುತ್ತದೆ, ಅದು ಮೇಲ್ಗಡೆಗಿರುವ ದೈವೀ ಸತ್ಯ, ಅದು ಲೀಲೆಯ ಆವಶ್ಯಕತೆಗೆ ಅನುಗುಣವಾಗಿ ಕಾರ್ಯಕೈಕೊಳ್ಳುತ್ತದೆ, ಏನಿರಬೇಕು, ಏನಿರಬಾರದು ಎಂಬ ಮನುಷ್ಯನ ವಿಚಾರಗಳ ಪ್ರಕಾರ ಅಲ್ಲ. ಗ್ರಹಿಸಬೇಕಾದ ಮೊದಲ ವಿಷಯ ಇದಾಗಿದೆ, ಹಾಗಿಲ್ಲದಿದ್ದರೆ, ಭಗವಂತನ ಪ್ರಕಟಣೆ ಕುರಿತು ಮನುಷ್ಯ ಏನನ್ನೂ ತಿಳಿದುಕೊಳ್ಳಲಾರ.

**CWSA, 28/474–75** **– ಶ್ರೀ ಅರವಿಂದರು**

*

**ಅವತಾರ ಪುರುಷ ಶ್ರೀಕೃಷ್ಣನ ಹಲವಾರು ಬದಿಗಳು**

ಶ್ರೀಕೃಷ್ಣ ಅವತಾರ ಪುರುಷನಾಗಿದ್ದಾನೆ. ಅವನು ಮಾನವ ರೂಪದಲ್ಲಿ ಮಾನವ ದೇಹ, ಮನಸ್ಸು ಹಾಗೂ ಆತ್ಮವನ್ನು ಒಪ್ಪಿಕೊಂಡಿದ್ದಾನೆ ಮತ್ತು ತನ್ನ ಲೀಲೆಯನ್ನು ಆ ರೀತಿಯಲ್ಲಿ ನಡೆಸಿದ್ದಾನೆ. ಆ ಲೀಲೆಯ ಸ್ಪಷ್ಟ ಹಾಗೂ ರಹಸ್ಯ ಅರ್ಥವನ್ನು ನಾವು ಗ್ರಹಿಸಿದರೆ, ಆ ಲೀಲೆಯ ಅರ್ಥವನ್ನು, ಗುರಿಯನ್ನು ಹಾಗೂ ಜಗತ್ತಿನ ಲೀಲೆಯ ವಿಧಾನವನ್ನು ಗ್ರಹಿಸುತ್ತೇವೆ.

ಈ ಶ್ರೇಷ್ಠ ಲೀಲೆಯ ಮುಖ್ಯ ವೈಲಕ್ಷಣ್ಯ (fetature) ವೆಂದರೆ ಅದು ಇಡಿಯಾದ ಜ್ಞಾನದಿಂದ ಪ್ರಚೋದನೆಗೆ ಒಳಗಾಗಿತ್ತು. ಆ ಕ್ರಿಯೆ ಹಾಗೂ ಲೀಲೆಯ ಹಿಂದೆ ಇದ್ದ ಜ್ಞಾನವನ್ನು ಗೀತೆಯಲ್ಲಿ ತೆರೆದು ತೋರಿಸಲಾಗಿದೆ.

ಮಹಾಭಾರತದ ಶ್ರೀಕೃಷ್ಣ ಕ್ರಿಯೆಯ ಪ್ರಖ್ಯಾತ ಸಾಹಸಿ, ಶ್ರೇಷ್ಠ ಯೋಗಿ, ಜಗತ್ತಿನ ಶ್ರೇಷ್ಠವ್ಯಕ್ತಿ, ಸಾಮ್ರಾಜ್ಯವೊಂದರ ಸಂಸ್ಥಾಪಕ, ರಾಜ್ಯನೀತಿಜ್ಞ ಹಾಗೂ ಯೋಧ, ಕ್ಷತ್ರಿಯನ ದೇಹದಲ್ಲಿ ಬ್ರಹ್ಮನ್‌ನನ್ನು ಅರಿತುಕೊಂಡವ. ಅವನ ಜೀವನದಲ್ಲಿ ಹೋಲಿಸಲು ಸಾಧ್ಯವಾಗದ ಪ್ರಕಟಣೆ ಹಾಗೂ ಪರಮೋಚ್ಚ ಸಾಮರ್ಥ್ಯವಿರುವ ಮಹಾಶಕ್ತಿಯ ರಹಸ್ಯ ಲೀಲೆಯನ್ನು ನಾವು ನೋಡುತ್ತೇವೆ.

ಆ ರಹಸ್ಯ ಕುರಿತು ಗೀತೆ ಒಂದು ವಿವರಣೆಯಾಗಿದೆ.

ಶ್ರೀಕೃಷ್ಣ ಲೋಕಗಳ ಒಡೆಯನಾಗಿದ್ದಾನೆ, ವಿಶ್ವಂಭರ ವಾಸುದೇವನಾಗಿದ್ದಾನೆ, ಆದಾಗ್ಯೂ ತನ್ನ ಶ್ರೇಷ್ಠತೆಯನ್ನು ಮುಚ್ಚಿ ಮರೆಯಲ್ಲಿರಿಸಿ ಲೀಲೆಯಲ್ಲಿ ಪ್ರವೇಶ ಮಾಡಿದ್ದಾನೆ, ಜನರೊಡನೆ ಅವನ ಸಂಬಂಧ ತಂದೆ ಹಾಗೂ ಮಗ, ಸಹೋದರ, ಪತಿ, ನಿಕಟವರ್ತಿ ಹಾಗೂ ಮಿತ್ರ ಹಾಗೂ ಶತ್ರು ಇವರ ರೂಪದಲ್ಲಿತ್ತು. ಅವನ ಜೀವನದಲ್ಲಿ ಆರ್ಯರ ಜ್ಞಾನದ ರಹಸ್ಯ ಹಾಗೂ ಭಕ್ತಿಯ ಅತ್ಯುಚ್ಚ ಅರ್ಥ ಒಳಗೊಂಡಿವೆ, ಅವುಗಳ ಸಾರಭೂತ ತತ್ವಗಳು ಕೂಡ ಗೀತೆಯ ಬೋಧನೆ–ಯಲ್ಲಿವೆ.

ಶ್ರೀಕೃಷ್ಣನ ಅವತಾರ ದ್ವಾಪರ ಹಾಗೂ ಕಲಿಯುಗಗಳ ಸಂಧಿಕಾಲದಲ್ಲಾಗಿತ್ತು. ಪ್ರತಿಯೊಂದು ಉತ್ಕ್ರಾಂತಿಕಾರಕ ಕಲ್ಪದಲ್ಲಿ ದೇವ ಇಡಿಯಾಗಿ ಅವತಾರ ತಾಳುತ್ತಾನೆ. ಕಲಿಯುಗ ಈ ಯುಗಗಳಲ್ಲಿ ಅತ್ಯಂತ ಕೆಟ್ಟದಾದದ್ದು ಹಾಗೂ ಅತ್ಯಂತ ಒಳ್ಳೆಯದೂ ಆಗಿರುತ್ತದೆ. ಈ ಯುಗ ಕಲಿಯ ಆಳಿಕೆಯ ಯುಗ, ಅವನು ಪಾಪವನ್ನು ಪ್ರಚೋದಿಸುತ್ತಾನೆ ಹಾಗೂ ಮನುಷ್ಯನ ಪ್ರಗತಿಗೆ ಪ್ರಮುಖ ವೈರಿಯಾಗಿರುತ್ತಾನೆ. ಮನುಷ್ಯನ ಅತ್ಯಂತ ಕೀಳು ಸ್ಥಿತಿ ಹಾಗೂ ಅಧಃಪತನ ಕಲಿಯ ಆಳಿಕೆಯ ಕಾಲದಲ್ಲಾಗುತ್ತವೆ. ಆದರೆ ಅಡೆತಡೆಗಳ ವಿರುದ್ಧ ಹೋರಾಡುವುದರಿಂದ ಬಲದಲ್ಲಿ ವೃದ್ಧಿಯಾಗುತ್ತದೆ ಮತ್ತು ಹೊಸ ಸೃಷ್ಟಿ, ಹಳೆಯದು ನಾಶವಾಗುವುದರಿಂದ ಬರುತ್ತದೆ, ಈ ವಿಧಾನ ಕಲಿಯುಗದಲ್ಲಿಯೂ ಕಂಡುಬರುತ್ತದೆ. ಜಗತ್ತಿನ ಉತ್ಕ್ರಾಂತಿಯ ಕ್ರಮದಲ್ಲಿ ನಾಶವಾಗಲಿರುವ ಅನಿಷ್ಟದ ಅಂಶಗಳು ನಿಖರವಾಗಿ ಮಿತಿಮೀರಿದ ಬೆಳವಣಿಗೆಯ ಮೂಲಕ ನಾಶವಾದವುಗಳೇ ಆಗಿರುತ್ತವೆ; ಇನ್ನೊಂದೆಡೆಗೆ ಹೊಸ ಸೃಷ್ಟಿಯ ಬೀಜಗಳನ್ನು ಬಿತ್ತಲಾಗುತ್ತದೆ ಹಾಗೂ ಅವು

ಚಿಗುರು ಬಿಡುತ್ತವೆ, ಕಲಿಯುಗವನ್ನು ಅನುಸರಿಸಿ ಬರುವ ಸತ್ಯಯುಗದಲ್ಲಿ ಅವು ಗಿಡಗಳಾಗಿ ಬೆಳೆಯುತ್ತವೆ.

**ಬಂಗಾಲಿ ಬರಹಗಳು, ಪು. 95** **– ಶ್ರೀ ಅರವಿಂದರು**

*

**ಶ್ರೀಕೃಷ್ಣನ ರಾಜಕೀಯ ಉದ್ದೇಶ**

ಇಂತಹ ಏಕತೆಯನ್ನು, ಸಾಮ್ರಾಜ್ಯವನ್ನು ಇಲ್ಲವೆ ನಿಯಮದ ಆಳಿಕೆಯನ್ನು ಸ್ಥಾಪಿಸುವುದು ಶ್ರೀಕೃಷ್ಣನ ರಾಜಕೀಯ ಉದ್ದೇಶವಾಗಿತ್ತು. ಮಗಧದ ರಾಜ ಜರಾಸಂಧ ಈ ಪ್ರಯತ್ನವನ್ನು ಕೈಕೊಂಡಿದ್ದ, ಆದರೆ ಅದು ಪೀಡನೆ ಹಾಗೂ ಅನ್ಯಾಯದ ನಡೆವಳಿಕೆ ಇವುಗಳ ಆಧಾರದ ಮೇಲಿದ್ದ ಸಾಮರ್ಥ್ಯವಾಗಿತ್ತು, ಆದ್ದರಿಂದ ಅದು ಅಲ್ಪಕಾಲ ಉಳಿದುಕೊಂಡಿತು. ಆ ಕಾರಣದಿಂದಾಗಿ ಶ್ರೀಕೃಷ್ಣ ಭೀಮನ ಕೈಯಲ್ಲಿ ಜರಾಸಂಧನನ್ನು ವಧೆ ಮಾಡಿಸುವುದರ ಮೂಲಕ ಆ ಪ್ರಯತ್ನವನ್ನು ಭಂಗಗೊಳಿಸಿದ. ಶ್ರೀಕೃಷ್ಣನ ಕಾರ್ಯಕ್ಕೆ ಮುಖ್ಯ ಅಡೆತಡೆ ಗರ್ವಿಷ್ಠರೂ ಸಾಮರ್ಥ್ಯಪೂರ್ಣರೂ ಆದ ಕುರುವಂಶದವರಿಂದ ಆಗಿತ್ತು. ಕುರುವಂಶದವರು ದೀರ್ಘಕಾಲದಿಂದ ಭಾರತದ ನೇತಾರ ಜನರ ವರ್ಗದಲ್ಲಿದ್ದರು. ಅಧಿಪತ್ಯ ಎಂದು ಕರೆಯಲಾದದ್ದು ಎಂದರೆ ಸಮಾನ ದರ್ಜೆಯುಳ್ಳ ಸ್ವತಂತ್ರ ಜನಾಂಗಗಳ ನಡುವೆ ಸರ್ವೋಚ್ಚತೆ ಹಾಗೂ ನಾಯಕತ್ವ ಇದು ಕುರುವಂಶದವರಿಗೆ ವಂಶಾನುಗತವಾಗಿ ಬಂದಿತ್ತು. ಶ್ರೀಕೃಷ್ಣ ಇದನ್ನು ಅರಿತುಕೊಂಡ ಹಾಗೂ ಕುರುವಂಶದವರನ್ನು ನಿರ್ನಾಮ ಮಾಡಲು ನಿರ್ಧರಿಸಿದ. ಆದರೆ ಕುರುವಂಶದವರಿಗೆ ಭಾರತದ ಮೇಲೆ ರಾಜ್ಯವಾಳಲು ವಂಶಾನುಗತ ಹಕ್ಕಿತ್ತು. ಶ್ರೀಕೃಷ್ಣ ಈ ವಾಸ್ತವ ವಿಷಯವನ್ನು ಮರೆತಿರಲಿಲ್ಲ. ಹಕ್ಕನ್ನು ಹೊಂದಿದ ಮನುಷ್ಯನಿಂದ ಅದನ್ನು ಕಿತ್ತುಕೊಳ್ಳುವುದು ಅನ್ಯಾಯದ ನಡೆವಳಿಕೆಯಾಗುತ್ತಿತ್ತು. ಹಾಗಾಗಿ ಭವಿಷ್ಯದ ಸಾಮ್ರಾಟನಾಗುವುದಕ್ಕೆ ಯುಧಿಷ್ಠಿರನನ್ನು ಆಯ್ಕೆ ಮಾಡಲಾಯಿತು, ಅವನು ನ್ಯಾಯಬದ್ಧವಾಗಿ ರಾಜ ಮತ್ತು ಕುರುವಂಶದವರ ಮುಖ್ಯಸ್ಥನಾಗಿದ್ದ.

*

## ಶ್ರೀಕೃಷ್ಣ ಪರಮೋಚ್ಚ ರೀತಿಯಲ್ಲಿ ನ್ಯಾಯನಿಷ್ಠನಾಗಿದ್ದ

ಶ್ರೀಕೃಷ್ಣ ಪರಮೋಚ್ಚ ರೀತಿಯಲ್ಲಿ ನ್ಯಾಯನಿಷ್ಠನಾಗಿದ್ದ, ತನಗೆ ಪ್ರಿಯವಾದ ಯದುವಂಶದವರಿಗೆ ಒಲವಿನಿಂದ ಕುರುವಂಶದವರ ಸ್ಥಾನ ಕೊಡಿಸಲಿಲ್ಲ, ಅದನ್ನು ಕೈಕೊಳ್ಳಲು ಅವನು ಸಮರ್ಥನಾಗಿದ್ದ. ಪಾಂಡವರಲ್ಲಿ ಹಿರಿಯನಾದ ಯುಧಿಷ್ಠಿ–ರನನ್ನು ಅಲಕ್ಷಿಸಿ ತನಗೆ ಪ್ರಿಯನಾಗಿದ್ದ ಅರ್ಜುನನಿಗೆ ರಾಜ್ಯಾಧಿಕಾರವನ್ನು ಕೊಡುವಂತೆ ಮಾಡಲಿಲ್ಲ. ಆದರೆ ಕೇವಲ ವಯಸ್ಸನ್ನು ಮತ್ತು ಮೊದಲಿದ್ದ ಹಕ್ಕುದಾರಿಕೆಯನ್ನು ಪರಿಗಣಿಸುವುದರಲ್ಲಿ ಹಾನಿಯಿರುವ ಸಾಧ್ಯತೆ ಇರುತ್ತದೆ. ಯುಧಿಷ್ಠಿರ ನ್ಯಾಯನಿಷ್ಠನಾಗಿರದೆ ಇದ್ದರೆ, ಪೀಡಾಕಾರಕನಾಗಿದ್ದರೆ ಇಲ್ಲವೆ ಅಸಮರ್ಥನಾಗಿದ್ದರೆ ಶ್ರೀಕೃಷ್ಣ ಬೇರೆ ಅಭ್ಯರ್ಥಿಯನ್ನು ಅರಸಬೇಕಾದ ನಿರ್ಬಂಧ–ಕ್ಕೊಳಗಾಗುತ್ತಿದ್ದ. ಯುಧಿಷ್ಠಿರ ಜನ್ಮತಃ ಸಾಮ್ರಾಟನಾಗುವುದಕ್ಕೆ, ಸರಿಯಾದ ರಾಜ್ಯಾಧಿಕಾರ ಪಡೆಯುವುದಕ್ಕೆ ಮತ್ತು ಆ ನೆಲದ ಸರಿಯಾದ ಸಂಪ್ರದಾಯವನ್ನು ಪಾಲಿಸಿಕೊಂಡು ಬರುವುದಕ್ಕೆ ಯೋಗ್ಯನಾಗಿರುವಂತೆ ಅವನ ಗುಣಗಳಿಂದಲೂ ಕೂಡ ಹಕ್ಕುದಾರನಾಗಿದ್ದ. ಆಗ ಅಲ್ಲಿ ಯುಧಿಷ್ಠಿರನಿಗಿಂತ ಹೆಚ್ಚು ಶ್ರೇಷ್ಠ, ವೀರೋಚಿತ ಹಾಗೂ ಜಾಣರಾದ ರಾಜರುಗಳಿದ್ದರು, ಆದರೆ ಬಲ ಹಾಗೂ ಜಾಣತನಗಳು ಮಾತ್ರ ಮನುಷ್ಯನಿಗೆ ರಾಜ್ಯಾಧಿಕಾರವನ್ನು ಕೊಡುವುದಿಲ್ಲ. ರಾಜ ನಿಯಮದ ಆಳಿಕೆಯನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬರಬೇಕು, ಪ್ರಜೆಗಳನ್ನು ಸಂತೃಪ್ತಿಯಿಂದ ಇರಿಸಬೇಕು ಮತ್ತು ರಾಜ್ಯವನ್ನು ರಕ್ಷಿಸಬೇಕು. ಮೊದಲಿನ ಎರಡು ಗುಣಗಳಿಗೆ ಸಮಾನ ದರ್ಜೆಯವರು ಬೇರಾರೂ ಇರಲಿಲ್ಲ. ಅವನು ನ್ಯಾಯನಿಷ್ಠ ಪ್ರಭುವಿನ ಮಗನಾಗಿದ್ದನು; ಅವನು ದಯಾಪೂರ್ಣನೂ, ನಿಷ್ಪಕ್ಷಪಾತನಾದವನೂ ಆಗಿದ್ದನು, ಸತ್ಯವನ್ನು ಮಾತನಾಡುತ್ತಿದ್ದನು ಹಾಗೂ ತನ್ನ ಸತ್ಯವನ್ನು ಕಾಪಾಡಿಕೊಂಡು ಬರುತ್ತಿದ್ದನು, ಅವನ ಕಾರ್ಯಗಳು ಸತ್ಯದ ಆಧಾರ ಪಡೆದಿರುತ್ತಿದ್ದವು, ಅವನು ಪ್ರಜೆಗಳಿಗೆ ಅತ್ಯಂತ ಪ್ರಿಯನಾಗಿದ್ದನು. ಮೇಲೆ ಹೇಳಿದ ಅವಶ್ಯವಾದ ಗುಣಗಳಲ್ಲಿ ಕೊನೆಯ ಗುಣದ ಕೊರತೆಯನ್ನು ಅವನ ವೀರೋಚಿತ ಸಹೋದರರಾದ ಭೀಮ ಹಾಗೂ ಅರ್ಜುನ ತುಂಬಿಕೊಡಲು ಸಮರ್ಥ–ರಾಗಿದ್ದರು. ಸಮಕಾಲೀನ ಭಾರತ ಪಾಂಡವರಂತಹ ಸಮರ್ಥರೂ, ವಿರೋಚಿತರೂ ಆದ ಬೇರೆ ರಾಜರುಗಳನ್ನು ಹೊಂದಿರಲಿಲ್ಲ. ಹಾಗಾಗಿ ಜರಾಸಂಧನನ್ನು ಕೊಲೆ ಮಾಡಿ, ಇರಬಹುದಾಗಿದ್ದ ಅಡೆತಡೆಯನ್ನು ತೆಗೆದುಹಾಕಿದ ನಂತರ ರಾಜಾ ಯುಧಿಷ್ಠಿರ, ಶ್ರೀಕೃಷ್ಣನ ಉಪದೇಶದ ಪ್ರಕಾರ ನಾಡಿನ

ಸಂಪ್ರದಾಯದಂತೆ ರಾಜಸೂಯ ಯಜ್ಞವನ್ನು ಮಾಡಿ ಸಾಮ್ರಾಟನಾದನು.

**ಬಂಗಾಲಿ ಬರಹಗಳು, ಪು. 141–42**

*

**ಪ್ರಭುತ್ವವುಳ್ಳ ರಾಜ್ಯನೀತಿಜ್ಞ ಶ್ರೀಕೃಷ್ಣ**

ಶ್ರೀಕೃಷ್ಣ ಪ್ರಭುತ್ವವುಳ್ಳ ರಾಜ್ಯನೀತಿಜ್ಞನಾಗಿದ್ದ ಹಾಗೆ ಅವನು ನ್ಯಾಯನಿಷ್ಠನೂ ಆಗಿದ್ದ. ಹಾನಿಕಾರಕವಾದ, ದೋಷಪೂರಿತವಾದ ಇಲ್ಲವೆ ಆ ಕಾಲದ ಆವಶ್ಯಕತೆಗೆ ಸರಿಹೋಗದ ಸಾಂಪ್ರದಾಯಿಕ ವಿಧಾನ ಇಲ್ಲವೆ ನಿಯಮವನ್ನು ಬದಲು ಮಾಡುವುದರಿಂದ ಅವನು ಎಂದೂ ಹಿಂಜರಿಯುತ್ತಿರಲಿಲ್ಲ. ಅವನು ಆ ಕಾಲದ ಪ್ರಧಾನ ಕ್ರಾಂತಿಕಾರಕನಾಗಿದ್ದ.

ಸಂಪ್ರದಾಯವಾದಿಯ ದೃಷ್ಟಿಕೋನದಲ್ಲಿ, ಹಳೆಯ ರೀತಿಗಳಿಗೆ ಅವನ ಅಂಟಿಕೊಳ್ಳುವಿಕೆಗೆ, ಹೊಸ ಸಾಹಸ ತನ್ನಲ್ಲೇ ಒಂದು ಪಾಪವಾಗಿರುತ್ತದೆ. ಶ್ರೀಕೃಷ್ಣ ಯುಧಿಷ್ಠಿರನ ಪತನವನ್ನು ಅರಿತುಕೊಂಡಿದ್ದ– ತಿಳಿದುಕೊಂಡಿದ್ದನಷ್ಟೇ ಅಲ್ಲ ಅದನ್ನು ಪ್ರಾರಂಭದಿಂದ ತಿಳಿದುಕೊಂಡಿದ್ದ ಏಕೆಂದರೆ ಅವನು ದೇವನಾಗಿದ್ದ. ದ್ವಾಪರ ಯುಗಕ್ಕೆ ಯೋಗ್ಯವಾಗಿದ್ದ ಒಂದು ರೂಢಿಯನ್ನು ಕಲಿಯುಗದಲ್ಲಿ ಎಂದಿಗೂ ಕಾಪಾಡಿಕೊಂಡು ಬರಬಾರದು. ಹಾಗಾಗಿ ಅವನು ಅದಕ್ಕಾಗಿ ಮುಂದೆ ಹೆಚ್ಚಿನ ಯಾವ ಪ್ರಯತ್ನವನ್ನು ಮಾಡಲಿಲ್ಲ. ಕಲಿಯುಗಕ್ಕೆ ಯೋಗ್ಯವಾಗಿರುವ, ಯುದ್ಧ ಹೋರಾಟಗಳಿರುವ ರಾಜತಂತ್ರವನ್ನು ಅವನು ಅನುಸರಿಸಿದನು, ಆ ಪ್ರಯತ್ನಗಳು ಗರ್ವಿಷ್ಠ ಹಾಗೂ ದುರಹಂಕಾರದ ಕ್ಷತ್ರಿಯ ಕುಲದ ಸಾಮರ್ಥ್ಯವನ್ನು ನಾಶಮಾಡುವುದಕ್ಕಿದ್ದವು. ಕುರುವಂಶದವರಿಗೆ ಸಮನಾಗಿ ಸಾಮರ್ಥ್ಯ–ಪೂರ್ಣರಾಗಿರುವ ಹಾಗೂ ಅವರಿಗೆ ಪ್ರತಿದ್ವಂದಿಗಳಾದ ಪಾಂಚಾಲ ದೇಶದ ಜನರನ್ನು ಕುರುವಂಶದ ನಾಶಕ್ಕಾಗಿ ಹುರಿದುಂಬಿಸಿದನು. ಕುರುವಂಶದವರನ್ನು ದ್ವೇಷಿಸುವ ಹಾಗೂ ಯುಧಿಷ್ಠಿರನ ಬಗ್ಗೆ ಒಲವಿರುವ ಇಲ್ಲವೆ ಏಕತೆ ಹಾಗು ನಿಯಮ ಪಾಲನೆ ಬಯಸುವ ಇತರ ಎಲ್ಲ ಜನಾಂಗವರನ್ನು ತಮ್ಮ ಪಕ್ಷದತ್ತ ಆಕರ್ಷಿಸುವಂತಾಯಿತು, ಮತ್ತು ಯುದ್ಧದ ಎಲ್ಲ ಪ್ರಾಥಮಿಕ ಸಿದ್ಧತೆಗಳನ್ನು ತಯಾರು ಮಾಡಿಕೊಳ್ಳಲಾಯಿತು. ಶಾಂತಿ ಸ್ಥಾಪನೆ ಮಾಡುವ ಎಲ್ಲ ಪ್ರಯತ್ನಗಳಲ್ಲಿ ಶ್ರೀಕೃಷ್ಣನಿಗೆ ನಂಬಿಕೆ ಇರಲಿಲ್ಲ, ಶಾಂತಿ ಸ್ಥಾಪನೆ ಸಾಧ್ಯವಿಲ್ಲ ಎಂಬುದು ಅವನಿಗೆ ತಿಳಿದಿತ್ತು, ಅದನ್ನು ಕೈಕೊಂಡಾಗಲೂ ಕೂಡ ಅದು ಅಲ್ಪ ಕಾಲ

ಉಳಿದುಕೊಳ್ಳುತ್ತಿತ್ತು. ಆದಾಗ್ಯೂ, ಸರಿಯಾದ ನಿಯಮಕ್ಕೆ ಗೌರವ ನೀಡುವುದಕ್ಕಾಗಿ, ಕಾರ್ಯನೀತಿಯನ್ನು ಕುರಿತಾದ ಆಲೋಚನೆಯಿಂದ ಅನನು ಶಾಂತಿ ಸ್ಥಾಪನೆ ಮಾಡುವ ಕಾರ್ಯಕ್ಕೆ ಸಮಯ ಮೀಸಲಾಗಿರಿಸಿದನು.

*

**ಕುರುಕ್ಷೇತ್ರದ ಯುದ್ಧ**

ಕುರುಕ್ಷೇತ್ರದ ಯುದ್ಧ ಶ್ರೀಕೃಷ್ಣನ ಕಾರ್ಯನೀತಿ (policy) ಯಿಂದ ಆಯಿತು ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಕುರುವಂಶವನ್ನು, ಕ್ಷತ್ರಿಯರ ಸಾಮರ್ಥ್ಯವನ್ನು ನಾಶಮಾಡುವುದು, ವಿವಾದವಿಲ್ಲದ ಸಾಮ್ರಾಜ್ಯಶಾಹಿಯನ್ನು, ಅಧಿಕಾರವನ್ನು ಸ್ಥಾಪಿಸುವುದು ಮತ್ತು ಭಾರತದ ಏಕತೆ ಇವು ಅವನ ಉದ್ದೇಶಗಳಾಗಿದ್ದವು. ನಿಯಮ– ಪಾಲನೆಯನ್ನು ಸ್ಥಾಪಿಸುವುದಕ್ಕಾಗಿ ಕೈಕೊಂಡ ಯುದ್ಧ ನ್ಯಾಯನಿಷ್ಠ ಯುದ್ಧವಾಗಿತ್ತು. ಆ ನ್ಯಾಯನಿಷ್ಠ ಯುದ್ಧದಲ್ಲಿ, ದೇವ ನಿಯೋಜಿತ ವಿಜಯಿ, ದೈವೀಸಾಮರ್ಥ್ಯದಿಂದ ಮುಂದೂಡಲ್ಪಟ್ಟ ಬಲಿಷ್ಠ ಯೋಧ ಅರ್ಜುನನಾಗಿದ್ದ. ಅರ್ಜುನ ತನ್ನ ಶಸ್ತ್ರಾಸ್ತ್ರಗಳನ್ನು ಚೆಲ್ಲಿಕೊಟ್ಟಿದ್ದರೆ ಶ್ರೀಕೃಷ್ಣನ ಶ್ರಮಗಳು ವ್ಯರ್ಥವಾಗುತ್ತಿದ್ದವು, ಭಾರತದ ಏಕತೆಯನ್ನು ಸಿದ್ಧಿಸಿಕೊಳ್ಳಲಾಗು–ತ್ತಿರಲಿಲ್ಲ ಹಾಗೂ ಭವ್ಯ ಅನಿಷ್ಟವೊಂದು ಕೂಡಲೆ ಆ ಭೂಮಿಯ ಭವಿಷ್ಯತ್ತಿನ ಮೇಲೆ ಹಠಾತ್ತನೆ ಒದಗುತ್ತಿತ್ತು.

**ಬಂಗಾಲಿ ಬರಹಗಳು, ಪು. 141–42**

*

**ಮಹಾಭಾರತದ ಯುಗ**

ಮಹಾಭಾರತದ ಕಾಲದಲ್ಲಿ ಪೃಥ್ವಿ ರಾಕ್ಷಸೀಯ ಸಾಮರ್ಥ್ಯದ ಭಾರದಡಿಯಲ್ಲಿ ನರಳುತ್ತಿತ್ತು. ಅದಕ್ಕಿಂತ ಮೊದಲಾಗಲಿ ಇಲ್ಲವೆ ನಂತರದಲ್ಲಾಗಲಿ ಇಂತಹ ಸಾಮರ್ಥ್ಯಪೂರ್ಣ ಮತ್ತು ಹಿಂಸಾತ್ಮಕ ಕ್ಷತ್ರಿಯ ಸಾಮರ್ಥ್ಯದ ಸಿಡಿತವಿರಲಿಲ್ಲ, ಆದರೆ ಆ ಭಯಾನಕ ಸಾಮರ್ಥ್ಯವನ್ನು ಒಳ್ಳೆಯ ಉದ್ದೇಶಕ್ಕಾಗಿ ಹೊರಳಿಸುವ ಅವಕಾಶ ಅತಿ ಕಡಿಮೆ ಇತ್ತು. ಈ ಸಾಮರ್ಥ್ಯವನ್ನು ಹೊತ್ತೊಯ್ಯುವ ಅವರೆಲ್ಲರೂ ರಾಕ್ಷಸೀ ಸ್ವಭಾವ, ಜಂಬ, ಗರ್ವ ಇವೆಲ್ಲವುಗಳಿದ್ದವರಾಗಿದ್ದರು ಮತ್ತು ಸ್ವಾರ್ಥ ಹಾಗೂ ಸ್ವ–ಸಂಕಲ್ಪ ಇವು ಅವರ ಎಲುಬುಗಳಲ್ಲಿದ್ದವು. ಶ್ರೀಕೃಷ್ಣ ಈ

ಸಾಮರ್ಥ್ಯವನ್ನು ನಾಶಮಾಡಿ ನಿಯಮದ ಆಳಿಕೆಯನ್ನು ಸ್ಥಾಪಿಸದೇ ಹೋಗಿದ್ದರೆ, ಮೇಲೆ ಹೇಳಿದ ಮೂರು ಬಗೆಯವುಗಳಲ್ಲಿ ಒಂದಿಲ್ಲೊಂದು ನಿಶ್ಚಿತವಾಗಿ ಸಂಭವಿಸುತ್ತಿತ್ತು. ಭಾರತ ಶಾಶ್ವತವಾಗಿ ಕಾಡು ಜನರ ಕೈಯಲ್ಲಿ ಬಿದ್ದುಬಿಡುತ್ತಿತ್ತು. ಕುರುಕ್ಷೇತ್ರದ ಯುದ್ಧ ಐದು ಸಾವಿರ ವರ್ಷಗಳ ಹಿಂದೆ ನಡೆಯಿತು ಎಂಬುದನ್ನು ನೆನಪಿನಲ್ಲಿಡಬೇಕು. ಎರಡು ಸಾವಿರದ ಐದುನೂರು ವರ್ಷಗಳು ಕಳೆದು ಹೋದ ನಂತರ ಕಾಡುಜನರ ಯಶಸ್ವಿ ಮುತ್ತಿಗೆ ಸಿಂಧೂ ನದಿಯಾಚೆಗೆ ತಲುಪಲು ಶಕ್ತವಾಯಿತು. ಅರ್ಜುನನಿಂದ ಸ್ಥಾಪಿತಗೊಂಡ ನಿಯಮದ ಆಳಿಕೆ ಬ್ರಾಹ್ಮಣರಿಂದ ಸ್ಫೂರ್ತಿ ಪಡೆದು ಕ್ಷತ್ರಿಯರ ಸಾಮರ್ಥ್ಯದಡಿಯಲ್ಲಿ ದೇಶವನ್ನು ರಕ್ಷಿಸುವಂತಾಯಿತು. ಆ ಕಾಲದಲ್ಲಿಯೂ ಕೂಡ ಈ ದೇಶದಲ್ಲಿ ಕ್ಷತ್ರಿಯರ ಸಾಹಸದ ಸಂಗ್ರಹ ಎಷ್ಟಿತ್ತೆಂದರೆ, ಅದರ ಭಾಗವೊಂದೇ ಈ ದೇಶವನ್ನು ಎರಡು ಸಾವಿರ ವರ್ಷಗಳವರೆಗೆ ಜೀವಂತವಿರಿಸಿದೆ. ಕ್ಷತ್ರಿಯ ಸಾಮರ್ಥ್ಯದ ಆ ಬಲದ ಮೇಲೆ ಶ್ರೇಷ್ಠ ಜನರಾದ ಚಂದ್ರಗುಪ್ತ, ಪುಷ್ಯಮಿತ್ರ, ಸಮುದ್ರಗುಪ್ತ ವಿಕ್ರಮ, ಸಂಗ್ರಾಮ ಸಿಂಹ, ಪ್ರತಾಪ, ರಾಜಾಸಿಂಹ, ಪ್ರತಾಪಾದಿತ್ಯ ಮತ್ತು ಶಿವಾಜಿ ಇವರೆಲ್ಲರೂ ದೇಶದ ದುರ್ದೈವಗಳ ವಿರುದ್ಧ ಹೋರಾಡಿದ್ದಾರೆ. ಈ ಇನ್ನೊಂದು ದಿನ ಗುಜರಾತದಲ್ಲಿ ನಡೆದ ಸಂಗ್ರಾಮದಲ್ಲಿ ಮತ್ತು ಲಕ್ಷ್ಮೀಬಾಯಿಯ ಶವಸಂಸ್ಕಾರದ ಉರುವಲಿನ ಮೇಲೆ ಆ ಸಾಮರ್ಥ್ಯದ ಕೊನೆಯ ಕಿಡಿ ನಂದಿಹೋಯಿತು. ಅದರೊಂದಿಗೆ ಶ್ರೀಕೃಷ್ಣನ ರಾಜಕೀಯ ಕಾರ್ಯದ ಒಳ್ಳೆಯ ಫಲ ಮತ್ತು ಸದ್ಗುಣ ಕೊನೆಕಂಡಿತು, ಭಾರತವನ್ನು ಹಾಗೂ ಜಗತ್ತನ್ನು ರಕ್ಷಿಸಲು ಇನ್ನೊಂದು ಪೂರ್ತಿ ಅವತಾರದ ಆವಶ್ಯಕತೆ ಬಂದಿತು. ಆ ಅವತಾರ ಬ್ರಾಹ್ಮಣರ ನಾಶವಾಗಿ ಹೋಗಿದ್ದ ಸಾಮರ್ಥ್ಯ ಮರುಪ್ರಜ್ವಲಿಸುವಂತೆ ಮಾಡಿದೆ, ಆ ಸಾಮರ್ಥ್ಯ ಕ್ಷತ್ರಿಯರ ಸಾಮರ್ಥ್ಯವನ್ನು ಸೃಷ್ಟಿಸುವುದು. ಕುರುಕ್ಷೇತ್ರದ ಯುದ್ಧದಲ್ಲಾದ ರಕ್ತಪಾತದಿಂದ ಶ್ರೀಕೃಷ್ಣ ಕ್ಷತ್ರಿಯರ ಸಾಮರ್ಥ್ಯವನ್ನು ನಾಶಮಾಡಲಿಲ್ಲ. ತದ್ವಿರುದ್ಧವಾಗಿ ದೈತ್ಯ ಸಾಮರ್ಥ್ಯವನ್ನು ನಾಶಮಾಡುವುದರ ಮೂಲಕ ಅವನು ಬ್ರಾಹ್ಮಣನ ಹಾಗೂ ಕ್ಷತ್ರಿಯನ ಸಾಮರ್ಥ್ಯವನ್ನು ರಕ್ಷಿಸಿದನು.

**ಬಂಗಾಲಿ ಬರಹಗಳು, ಪು. 148–49**

*

**ಕುರುಕ್ಷೇತ್ರದಲ್ಲಿ ದೇವ ಭಾರತವನ್ನು ರಕ್ಷಿಸಿದ**

ಕಲಿಯುಗದಲ್ಲಿ ಭಾರತ ಅಧಃಪತನಕ್ಕೆ ಈಡಾಗಿದೆ ಎಂಬುದನ್ನು ಯಾರೂ ನಿರಾಕರಿಸಲಾರರು. ಆದರೆ ದೇವ ಪೃಥ್ವಿಯ ಮೇಲೆ ಅಧಃಪತನವನ್ನು ಉಂಟುಮಾಡುವುದಕ್ಕೆ ಅವರೋಹಣ ಮಾಡಿ ಬರುವುದಿಲ್ಲ. ಅವತಾರ ತಳೆಯುವಿಕೆ ದೈವೀ ನಿಯಮವನ್ನು, ಜಗತ್ತನ್ನು ಹಾಗೂ ಜನರನ್ನು ರಕ್ಷಿಸುವು–ದಕ್ಕಾಗಿರುತ್ತದೆ. ವಿಶೇಷವಾಗಿ ಕಲಿಯುಗದಲ್ಲಿ ದೇವ ತನ್ನ ಪೂರ್ಣ ಅವತಾರ ತಾಳುತ್ತಾನೆ. ಅದಕ್ಕೆ ಕಾರಣ ಕಲಿಯುಗದಲ್ಲಿ ಮನುಷ್ಯ ಅಧಃಪತನ ಹೊಂದುವ ಅತಿ ಭವ್ಯ ಅಪಾಯವಿರುತ್ತದೆ, ಸ್ವಾಭಾವಿಕವಾಗಿ ಹೆಚ್ಚಿನ ರೀತಿಯಲ್ಲಿ ಸಂಭವಿಸುವ ಅನ್ಯಾಯದ ನಡೆವಳಿಕೆ ಇರುತ್ತದೆ. ಹಾಗಾಗಿ ಮನುಕುಲವನ್ನು ರಕ್ಷಿಸಲು, ಅನ್ಯಾಯದ ನಡೆವಳಿಕೆಗಳನ್ನು ನಾಶಮಾಡಲು, ಕಲಿಯ ರೀತಿಗೆ ಅಡ್ಡಬರಲು ಈ ಯುಗದಲ್ಲಿ ಮತ್ತೆ, ಮತ್ತೆ ಅವತಾರಗಳಾಗುತ್ತವೆ. ಶ್ರೀಕೃಷ್ಣ ಅವತಾರ ತಾಳಿದಾಗ ಅದಾಗಲೇ ಕಲಿಯ ಆಡಳಿತ ಪ್ರಾರಂಭವಾಗುವ ಕಾಲವಾಗಿತ್ತು. ಆ ಅವತಾರದ ಆಗಮನದ ಹೆದರಿಕೆಯಿಂದಾಗಿ ಕಲಿ ಅವನ ಪ್ರದೇಶದಲ್ಲಿ ಕಾಲಿರಿಸಿರಲಿಲ್ಲ. ಶ್ರೀಕೃಷ್ಣನ ಕೃಪೆಯ ಮೂಲಕ ಪರೀಕ್ಷಿತ ಕಲಿಯ ಸಾರ್ವಭೌಮತ್ವವನ್ನು, ಐದು ಗ್ರಾಮಗಳನ್ನು ಅವನ ಅಧೀನಕ್ಕೆ ಕೊಡುವುದರ ಮೂಲಕ, ತಡೆಹಿಡಿಯಲು ಶಕ್ತನಾಗಿದ್ದ. ಕಲಿಯುಗದ ಪ್ರಾರಂಭದಿಂದ ಕೊನೆಯವರೆಗೆ ಮನುಷ್ಯ ಮತ್ತು ಕಲಿಯ ನಡುವೆ ಭೀಕರ ಸಮರ ಉತ್ಕಟ ಸ್ಥಿತಿಯಲ್ಲಿರುತ್ತದೆ, ಹಾಗೂ ಆ ಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುತ್ತದೆ. ಈ ಸಮರದಲ್ಲಿ ಸಹಾಯಕರೆಂದು ಮುಂದಾಳುಗಳೆಂದು ದೇವನ ವಿಭೂತಿಗಳು ಹಾಗೂ ಅವತಾರಗಳು ಈ ಸಮಯದಲ್ಲಿ ಪೃಥ್ವಿಯ ಮೇಲೆ, ಮೇಲಿಂದ ಮೇಲೆ ಕೆಳಗಿಳಿದು ಬರುತ್ತಾರೆ. ಕಲಿಯುಗ ಪ್ರಾರಂಭವಾಗುತ್ತಿರುವ ಸಮಯದಲ್ಲಿ ದೇವ ಮಾನವ ರೂಪ ತಾಳಿದ್ದ, ಅದರಿಂದಾಗಿ ಬ್ರಾಹ್ಮಣನ ಸಾಮರ್ಥ್ಯ, ಜ್ಞಾನ, ಭಕ್ತಿ, ಆಶಾರಹಿತ ಕರ್ಮ ಇವುಗಳನ್ನು ನಿರ್ವಹಿಸಿಕೊಂಡು ಹೋಗಲು ಮತ್ತು ಅವು ಸಮರದಲ್ಲಿ ಸಹಾಯಕವಾಗುವವೆಂದು ಕಲಿಸಿಕೊಡಲು ಸಾಧ್ಯವಾಯಿತು. ಭಾರತದ ಸುರಕ್ಷಿತತೆಯ ಮೇಲೆ ಮನುಷ್ಯನ ಯೋಗಕ್ಷೇಮ ಹಾಗೂ ಭರವಸೆ ಇವು ಆಧಾರ ದೊರಕಿಸುತ್ತವೆ. ಕುರುಕ್ಷೇತ್ರದಲ್ಲಿ ದೇವ ಭಾರತವನ್ನು ರಕ್ಷಿಸಿದ. ರಕ್ತದ ಆ ಸಮುದ್ರದಲ್ಲಿ ಶ್ರೇಷ್ಠ ದೈವೀ ಸತ್ತೆ ವಿನಾಶಕಾರಿ ಕಾಲನ ರೂಪದಲ್ಲಿ ಹೊಸ ಜಗತ್ತಿನ

ಲೀಲೆ ನಡೆಸುವ ಕಮಲದಲ್ಲಿ ದಿವ್ಯಾನಂದ ಪಡೆಯುವುದನ್ನು ಪ್ರಾರಂಭಿಸಿದ.

**ಬಂಗಾಲಿ ಬರಹಗಳು, ಪು. 139–50** **– ಶ್ರೀ ಅರವಿಂದರು**

*

## ಧರ್ಮವನ್ನು ಮೇಲೆತ್ತಿ ಹಿಡಿಯುವುದು

ಶ್ರೀಕೃಷ್ಣಾವತಾರದ ಜನಪ್ರಿಯ ಹಾಗೂ ಪೌರಾಣಿಕ ವರದಿ ಎಂದರೆ ಕುರುವಂಶದವರ ಅನ್ಯಾಯದ ನಡೆವಳಿಕೆಗಾಗಿ ದುರ್ಯೋಧನ ಹಾಗೂ ಅವನ ಸಹೋದರರು ಅವತಾರ ತಾಳಿದವರಾಗಿದ್ದರು, ಅದರಿಂದ ಪೃಥ್ವಿಗೆ ಎಷ್ಟೊಂದು ಭಾರವಾಯಿತೆಂದರೆ ಪೃಥ್ವೀ ಮಾತೆ ದೇವನಿಗೆ ಕೆಳಗಿಳಿದು ಬರಲು ಹಾಗೂ ತನ್ನ ಭಾರ ಕಡಿಮೆ ಮಾಡಲು ಕೇಳಿಕೊಂಡಳು. ಆ ಬಿನ್ನಹಕ್ಕನುಗುಣವಾಗಿ ವಿಷ್ಣು ಶ್ರೀಕೃಷ್ಣನ ಹೆಸರಿನಲ್ಲಿ ಅವತಾರ ತಾಳಿದ ಮತ್ತು ದಮನಕ್ಕೊಳಗಾಗಿದ್ದ ಪಾಂಡವರಿಗೆ ಆ ದಮನದಿಂದ ಮುಕ್ತಿ ದೊರಕಿಸಿ ಕೊಟ್ಟ ಹಾಗೂ ಅನ್ಯಾಯದಿಂದ ವರ್ತಿಸುತ್ತಿದ್ದ ಕೌರವರನ್ನು ನಾಶಮಾಡಿದ, ರಾಮಾವತಾರದಲ್ಲಿ ಅನ್ಯಾಯದ ನಡವಳಿಕೆಯಿಂದ ನೀಡುತ್ತಿದ್ದ ರಾವಣನ ಪೀಡೆಯನ್ನು ನಾಶಮಾಡಿದ, ಪರಶುರಾಮಾವತಾರದಲ್ಲಿ ಯೋಧರು ಹಾಗೂ ರಾಜಮನೆತನದವರು ಆಗಿದ್ದ ಕ್ಷತ್ರಿಯರು ಅನ್ಯಾಯ–ವೆಸಗುವುದಕ್ಕೆ ಪಡೆದಿದ್ದ ಪರವಾನಿಗೆಯನ್ನು ನಾಶಮಾಡಿದ, ಕುಳ್ಳ ವಾಮನಾವತಾರದಲ್ಲಿ ರಾಕ್ಷಸನಾಗಿದ್ದ ಬಲಿಯ ಆಳಿಕೆಯನ್ನು ನಾಶಮಾಡಿದ. ಆದರೆ ಸ್ಪಷ್ಟವಾಗಿ ಕೇವಲ ವ್ಯಾವಹಾರಿಕ, ನೈತಿಕ ಇಲ್ಲವೆ ಸಾಮಾಜಿಕ ಹಾಗೂ ರಾಜಕೀಯ ಮಣಿಹವಷ್ಟೆ ಜನಪ್ರಿಯ ಹಾಗೂ ಪೌರಾಣಿಕ ವರದಿಯಾಗಿತ್ತು, ಅದು ಅವತಾರತ್ವದ ಗೋಚರ ಸಂಗತಿಯನ್ನು ಕುರಿತು ಸರಿಯಾದ ವರದಿಯನ್ನು ಕೊಡುವುದಿಲ್ಲ. ಈ ಬಾಹ್ಯ ಉಪಯುಕ್ತತೆ ಎಲ್ಲವೂ ಆಗಿದ್ದರೆ ನಾವು ಬುದ್ಧ ಹಾಗೂ ಕ್ರಿಸ್ತ ಇವರನ್ನು ಅವತಾರ ತಾಳಿದವರ ಪಟ್ಟಿಯಿಂದ ಹೊರಗಿಡಬೇಕಾಗುವುದು; ಅವರ ಮಣಿಹ ಅನಿಷ್ಟವನ್ನು ಕೈಕೊಳ್ಳುತ್ತಿದ್ದವರನ್ನು ನಾಶಮಾಡಿ, ಒಳ್ಳೆಯವರನ್ನು ಮುಕ್ತ–ಗೊಳಿಸುವುದು ಆಗಿರಲಿಲ್ಲ, ಆದರೆ ಎಲ್ಲ ಜನರಿಗೆ ಒಂದು ಹೊಸ ಆಧ್ಯಾತ್ಮಿಕ ಸಂದೇಶ, ದೈವಿಕವಾಗಿ ಬೆಳೆಯಲು ಹೊಸ ರೀತಿ ಮತ್ತು ಆಧ್ಯಾತ್ಮಿಕ ಸಿದ್ಧಿಯನ್ನು ಪಡೆಯುವ ರೀತಿ ಇವೆಲ್ಲವನ್ನು ಒಳಗೊಂಡಿತ್ತು. ಇನ್ನೊಂದೆಡೆಗೆ 'ಧರ್ಮ' ಶಬ್ದಕ್ಕೆ ಕೇವಲ ಅದರ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಅರ್ಥ ಕೊಟ್ಟರೆ ನಾವು ನಿಜವಾಗಿ ಆ

ಸಂಗತಿಯ ತಿರುಳಿನತ್ತ ಬರುತ್ತೇವೆ, ಆದರೆ ನಾವು ಅವತಾರಪುರಷ ಕೈಕೊಂಡ ಕಾರ್ಯದ ಅತ್ಯಂತ ಮಹತ್ವದ ಭಾಗವನ್ನು ಹೊರಗಿರಿಸುತ್ತೇವೆ. ದೈವೀ ಅವತಾರಗಳಲ್ಲಿ ನಾವು, ಯಾವಾಗಲೂ, ಎರಡು ಬಗೆಯ ಕಾರ್ಯವನ್ನು ನೋಡುತ್ತೇವೆ, ಮತ್ತು ಅದು ಅನಿವಾರ್ಯವಾಗಿರುತ್ತದೆ, ಏಕೆಂದರೆ ಅವತಾರಪುರುಷ ಮಾನವ ಜೀವನದಲ್ಲಿ ದೇವನ ಕಾರ್ಯವನ್ನು, ಜಗತ್ತಿನಲ್ಲಿ ದೈವೀಸಂಕಲ್ಪ ಹಾಗೂ ಜಾಣತನವನ್ನು ಕೈಗೆತ್ತಿಕೊಳ್ಳುತ್ತಾನೆ, ಅದು ಯಾವಾಗಲೂ ಬಾಹ್ಯದಲ್ಲಿ ಹಾಗೂ ಅಂತರ್ಯದಲ್ಲಿ ನೆರವೇರಿಕೆ ಕಂಡುಕೊಳ್ಳುತ್ತದೆ, ಆ ನೆರವೇರಿಕೆ ಆತ್ಮದಲ್ಲಿ ಪ್ರಗತಿ ಪಡೆಯುವುದರ ಮೂಲಕ ಮತ್ತು ಜೀವನದಲ್ಲಿ ಬಾಹ್ಯ ಬದಲಾವಣೆ ತರುವುದರ ಮೂಲಕ ಆಗುತ್ತದೆ.

**CWSA, 19/169–70** **– ಶ್ರೀ ಅರವಿಂದರು**

*

**ಶ್ರೀಕೃಷ್ಣನ ಸಂದೇಶ**

ಆಧ್ಯಾತ್ಮಿಕತೆ ಜೀವನದಿಂದ ವಿಚ್ಛೇದಿತ ವಿಷಯ ಎಂದು ಯೋಚಿಸುವುದು ತಪ್ಪು ಎಂದು ನಾವು ಪುನರಾವರ್ತಿಸಿ ಹೇಳುತ್ತೇವೆ. "ಎಲ್ಲವನ್ನು ಬಿಟ್ಟುಕೊಡಿರಿ, ಅದರಿಂದಾಗಿ ಎಲ್ಲದರ ಸಂತೋಷ ಪಡೆಯಬಲ್ಲಿರಿ, ಬೇರೆ ಯಾವುದೇ ಮನುಷ್ಯನ ವಶದಲ್ಲಿದ್ದುದಕ್ಕಾಗಿ ಆಸೆ ಪಡುವುದು ಬೇಡ, ಆದರೆ ಈ ಜಗತ್ತಿನಲ್ಲಿ ನಿಮ್ಮ ಎಲ್ಲ ಕಾರ್ಯಗಳನ್ನು ಕೈಕೊಳ್ಳಬೇಕು ಹಾಗೂ ನಿಮ್ಮ ನೂರು ವರ್ಷಗಳ ಕಾಲ ಬದುಕಲು ಇಚ್ಛೆ ಇರಿಸಿಕೊಂಡಿರಬೇಕು, ಇದಕ್ಕಿಂತ ಬೇರೆ ಯಾವ ರೀತಿಯನ್ನು ಕೊಡಲಾಗಿಲ್ಲ, ಇದರಿಂದ ನಿಮ್ಮ ಕರ್ಮಗಳ ಬಂಧನದಿಂದ ಮುಕ್ತರಾಗುತ್ತೀರಿ", ಎಂದು ಈಶಾವಾಶ್ಯೋಪನಿಷತ್ ಹೇಳುತ್ತದೆ. ಧರ್ಮಗಳ ಎತ್ತರಗಳು ಈ ಜಗತ್ತಿನ ಹೋರಾಟಗಳ ಮೇಲಿವೆ ಎಂದು ಯೋಚಿಸುವುದು ತಪ್ಪು. ಹೋರಾಟ ಕುರಿತು ಶ್ರೀಕೃಷ್ಣ ಅರ್ಜುನನಿಗೆ ಮತ್ತೆ ಮತ್ತೆ ಹೇಳುತ್ತಾನೆ: * "ಹೋರಾಡು, ವಿರೋಧಿಗಳನ್ನು

* ಜನ್ಮ ಕರ್ಮಚ ಮೇ ದಿವ್ಯಮ್ ಏವಮ್ ಯೋ ವೇತ್ತಿ ತತ್ವತಃ ।
ತ್ಯಕ್ತ್ವಾ ದೇಹಮ್ ಪುನರ್ಜನ್ಮ ನೈತಿ ಮಾಮ್ ಏತಿ ಸೋಽರ್ಜುನ ॥
ವೀತರಾಗ ಭಯಕ್ರೋಧಃ ಮನ್ಮಯಾ ಮಾಮ್ ಉಪಾಶ್ರಿತಾಃ ।
ಬಹವೋ ಜ್ಞಾನತಪಸಾ ಪೂತಾ ಮದ್ಭಾವಮಾಗತಾಃ ॥

**ಗೀತಾ, ಅಧ್ಯಾಯ 4, ಶ್ಲೋಕ : 9 ಮತ್ತು 10.**

ಜಯಿಸು", "ನನ್ನನ್ನು ನೆನಪಿಸಿಕೋ ಹಾಗೂ ಹೋರಾಡು", "ನಿನ್ನ ಎಲ್ಲ ಕರ್ಮಗಳನ್ನು, ನನಗೆ ಆಧ್ಯಾತ್ಮಿಕತೆಯಿಂದ ತುಂಬಿಕೊಂಡ ನಿನ್ನ ಹೃದಯದಿಂದ ಬಿಟ್ಟುಕೊಡು, ಎಲ್ಲ ಬಗೆಯ ಹಾತೊರತೆಗಳಿಂದ, ಸ್ವಾರ್ಥದಿಂದ ಮುಕ್ತನಾಗಿ ಹೋರಾಡು, ನಿನ್ನ ಆತ್ಮದ ಜ್ವರ ನಿನ್ನಿಂದ ದೂರ ಸಾಗಿ ಹೋಗಲಿ." ಧಾರ್ಮಿಕ ಮನುಷ್ಯ ತನ್ನ ಸರ್ವಸಾಮಾನ್ಯ ಕರ್ಮಗಳನ್ನು ಬಿಟ್ಟುಕೊಡದಿದ್ದಾಗ್ಯೂ, ಅವನಿನ್ನೂ ಬಹಳ ಸಾತ್ವಿಕ, ಬಹಳ ಸಂತಸ್ವರೂಪದವನು, ಬಹಳ ಪ್ರೀತಿಸುವವನು ಇಲ್ಲವೆ ಜಗತ್ತಿನ ಒರಟು ಕಾರ್ಯಗಳಿಗೆ ಬಹಳ ಭಾವೋದ್ರೇಕವಿಲ್ಲದವನು ಎಂದು ಕಲ್ಪನೆ ಮಾಡಿಕೊಳ್ಳುವುದು ತಪ್ಪು. ವಿರುದ್ಧ ದಿಸೆಯಲ್ಲಿ ಗೀತೆಯ ಉತ್ತರ ಬೇರೆ ಯಾವುದೂ ಅಷ್ಟೊಂದು ಅತಿಶಯವಾದದ್ದು, ಮತ್ತು ರಾಜೀಮಾಡಿಕೊಳ್ಳ-ದಂತಹದು ಇರಲಾರದು. "ಯಾರ ಮನೋಭಾವ ಅಹಂಕಾರದಿಂದ ದೂರವಿರುತ್ತದೆಯೋ, ಆ ಕಾರ್ಯದ ಮುದ್ರೆಯನ್ನು ಸ್ವೀಕರಿಸಲು ಯಾರು ತನ್ನ ಆತ್ಮ ವೇದನೆಗೆ ಒಳಗಾಗದಂತೆ ಮಾಡುವನೋ ಅಂತಹನು ಇಡೀ ಜಗತ್ತನ್ನೇ ಕೊಂದು ಹಾಕಿದರೂ ಬಂಧನಕ್ಕೊಳಗಾಗುವುದಿಲ್ಲ." ಕುರುಕ್ಷೇತ್ರದ ಹಾಳುಗೆಡವಲಾದ ನೆಲದ ಮೇಲೆ ಅರ್ಜುನನ ರಥವನ್ನು ನಡೆಸುತ್ತಿದ್ದ ಸಾರಥಿ ಶ್ರೀಕೃಷ್ಣನ ಕಾರ್ಯ ಕರ್ಮಯೋಗದ ಪ್ರತೀಕ ಮತ್ತು ವರ್ಣನೆ; ಏಕೆಂದರೆ ದೇಹವೇ ರಥ, ಇಂದ್ರಿಯಗಳು ರಥವನ್ನು ನಡೆಸುವ ಕುದುರೆಗಳು ಮತ್ತು ರಕ್ತಸಿಕ್ತ, ಕೆಸರಿನಿಂದ ಮುಳುಗಿದ ಜಗತ್ತಿನ ರೀತಿಗಳಾದ್ಯಂತ ಶ್ರೀಕೃಷ್ಣ ಮನುಷ್ಯನ ಆತ್ಮಕ್ಕೆ ವೈಕುಂಠದತ್ತ ದಾರಿ ತೋರಿಸುತ್ತಾನೆ.

**CWSA, 13/12** **– ಶ್ರೀ ಅರವಿಂದರು**

*

**ಗೀತೆಗೆ ಬೀಗದ ಕೈ ಮತ್ತು ಗೀತೆಯಲ್ಲಿರುವ ಸತ್ಯಗಳನ್ನು ಅರಿತುಕೊಳ್ಳುವುದು**

ನಾನೊಬ್ಬ ಮನುಷ್ಯನನ್ನು ಭೇಟಿ ಮಾಡಿದೆ. ಆಗ ನನ್ನ ವಯಸ್ಸು ಇಪ್ಪತ್ತು ಇಲ್ಲವೆ ಇಪ್ಪತ್ತೊಂದಾಗಿರಬಹುದು. ಆ ಮನುಷ್ಯ ಭಾರತೀಯನಾಗಿದ್ದ, ಅವನು ಇಲ್ಲಿಂದ (ಭಾರತದಿಂದ) ಅಲ್ಲಿಗೆ (ಫ್ರಾನ್ಸ್ ದೇಶಕ್ಕೆ) ಬಂದಿದ್ದ ಮತ್ತು ಅವನು ನನ್ನ ಬಳಿ 'ಗೀತೆ' ಯನ್ನು ಕುರಿತು ಮಾತನಾಡಿದ. ಅಲ್ಲಿ ಗೀತೆಯ ಭಾಷಾಂತರವಿತ್ತು, ಅನುವಾದ ಅಷ್ಟೊಂದು ಸರಿಯಾಗಿರಲಿಲ್ಲ. ಅವನು ಆ ಅನುವಾದವನ್ನು ಓದಿರಿ

ಎಂದು ನನಗೆ ಹೇಳಿದ ಮತ್ತು ಆ ಬೀಗದ ಕೈಯನ್ನು ಕೊಟ್ಟ– ಅದು ಅವನ ಬೀಗದ ಕೈಯಾಗಿತ್ತು– ಅವನು ಹೇಳಿದ: "ಗೀತೆಯನ್ನು ಓದಿರಿ, ಗೀತೆಯ ಈ ಅನುವಾದ ಅಷ್ಟೊಂದು ಸರಿಯಾಗಿಲ್ಲ, ಆದಾಗ್ಯೂ ಫ್ರೆಂಚ್ ಭಾಷೆಯಲ್ಲಿ ಭಾಷಾಂತರವಿರುವ ಪುಸ್ತಕ ಅದೊಂದೇ." ಆ ಸಮಯದಲ್ಲಿ ನಾನು ಇತರ ಭಾಷೆಗಳಲ್ಲಿ ಬರೆದಿದ್ದ ಏನನ್ನೂ ತಿಳಿದುಕೊಳ್ಳಲು ಸಮರ್ಥಳಾಗಿರಲಿಲ್ಲ. ಅಲ್ಲದೆ ಇಂಗ್ಲಿಷ್ ಭಾಷೆಯಲ್ಲಾದ ಅನುವಾದ ಅಷ್ಟೇ ಕೆಟ್ಟದಾಗಿತ್ತು. ಶ್ರೀ ಅರವಿಂದರು ತಮ್ಮ ಅನುವಾದವನ್ನು ಆಗ ಬರೆದಿರಲಿಲ್ಲ.

ಅವನು ಹೇಳಿದ: "ಗೀತೆಯನ್ನು ಓದಿರಿ ಮತ್ತು ಶ್ರೀಕೃಷ್ಣನನ್ನು ಸರ್ವವ್ಯಾಪಿ ದೇವನ ಸಂಕೇತ, ಆಂತರಿಕ ದೇವ ಪ್ರಮುಖ ಎಂದು ತಿಳಿದುಕೊಳ್ಳಿರಿ." ಅವನು ಹೇಳಿದ್ದು ಇದಿಷ್ಟೇ ಆಗಿತ್ತು. ಅವನು ನನಗೆ ಹೇಳಿದ: "ಶ್ರೀಕೃಷ್ಣ ಸರ್ವವ್ಯಾಪಿ ದೇವನನ್ನು ಮತ್ತು ನಿಮ್ಮೊಳಗಿರುವ ದೇವನನ್ನು ಪ್ರತಿನಿಧಿಸುತ್ತಾನೆ ಎಂಬ ಭಾವದಿಂದ ಗೀತೆಯನ್ನು ಓದಿರಿ." ಸರಿ, ಒಂದು ತಿಂಗಳ ಸಮಯದಲ್ಲಿ ಇಡೀ ಕಾರ್ಯವನ್ನು ಕೈಕೊಳ್ಳಲಾಯಿತು.

**CWM, 6/298–99** **– ಶ್ರೀಮಾತೆ**

*

**ಶ್ರೀಕೃಷ್ಣ ಅಧಿಮಾನಸದ ಸಾಧ್ಯತೆಯನ್ನು ತೆರೆದು ತೋರಿಸಿದ**

ಶ್ರೀಕೃಷ್ಣ ಅಧಿಮಾನಸವನ್ನು ಅದರ ಸಿದ್ಧಿಯ ನಿಶ್ಚಲ ಹಾಗೂ ಕ್ರಿಯಾಶೀಲ ಎಂಬ ಎರಡು ಸಾಧ್ಯತೆಗಳೊಂದಿಗೆ ತೆರೆದು ತೋರಿಸಿದ. ಬುದ್ಧ ಮನಸ್ಸಿನಿಂದ ಪರಮೋಚ್ಚನಲ್ಲಿರುವ ನಿರ್ವಾಣದತ್ತ ವೇಗವಾಗಿ ಸಾಗಿ ಹೋಗುವುದನ್ನು ಪ್ರಯತ್ನ ಮಾಡಿ ತೋರಿಸಿದ, ಹಾಗೆಯೇ ಶಂಕರಾಚಾರ್ಯರು ಇನ್ನೊಂದು ರೀತಿಯಲ್ಲಿ ಅದನ್ನೇ ಕೈಕೊಂಡರು. ಅವರಿಬ್ಬರೂ ಇತರ ಹಂತಗಳ ಆಚೆಗೆ ಹಾರಿಹೋಗು–ವುದನ್ನು ಒಪ್ಪಿಕೊಳ್ಳುತ್ತಾರೆ, ಅದರ ಉದ್ದೇಶ ನಾಮರಹಿತ, ಆಕಾರರಹಿತ ಪರಿಪೂರ್ಣತೆಯನ್ನು ದೊರಕಿಸುವುದಾಗಿರುತ್ತದೆ. ಇನ್ನೊಂದೆಡೆಗೆ ಶ್ರೀಕೃಷ್ಣ ಉತ್ಕ್ರಾಂತಿಯ ಸರ್ವಸಾಮಾನ್ಯ ಮುನ್ನಡೆಯತ್ತ ಕರೆದೊಯ್ಯುತ್ತಿದ್ದ. ಮುಂದಿನ ಹೆಜ್ಜೆ ಆಕಾರರಹಿತ ಪರಿಪೂರ್ಣತೆಯಲ್ಲ, ಆದರೆ ಅತಿಮನಸ್ಸಾಗಿರುತ್ತದೆ. ಆಚೆಗೆ ಹಾರಿ ಹೋಗುವುದರಲ್ಲಿ ಶಂಕರಾಚಾರ್ಯರ ಹಾಗೆ ಬುದ್ಧನೂ ಕ್ರಿಯಾಶೀಲ ಭಾಗವನ್ನು

ಕತ್ತರಿಸಿ ತಪ್ಪು ಮಾಡಿದ ಎಂದು ನನಗನಿಸುತ್ತದೆ. ಹಾಗಾಗಿ ಕಲ್ಕಿಯಿಂದ ಒಂದು ತಪ್ಪನ್ನು ತಿದ್ದುವುದು ಇದೆ.

**CWSA, 28/488** **– ಶ್ರೀ ಅರವಿಂದರು**

*

ಶ್ರೀಕೃಷ್ಣ ಅತಿಮಾನಸ ಪ್ರಕಾಶವನ್ನು ಪ್ರತಿನಿಧಿಸುತ್ತಿಲ್ಲ. ಶ್ರೀಕೃಷ್ಣನ ಅವರೋಹಣದ ಅರ್ಥ ಅಧಿಮಾನಸದ ದೇವಪ್ರಮುಖನ ಅವರೋಹಣವಾಗಿದ್ದು ತಾನೇ ಸ್ವತಃ ಅತಿಮಾನಸವಾಗಿರದೆ ಅತಿಮಾನಸದ ಹಾಗೂ ದಿವ್ಯಾನಂದದ ಅವರೋಹಣಕ್ಕಾಗಿ ತಯಾರು ಮಾಡುತ್ತದೆ. ಶ್ರೀಕೃಷ್ಣ ಆನಂದಮಯ, ಅವನು ಅಧಿಮಾನಸದ ಕರೆದೊಯ್ಯುವಿಕೆಯ ಮೂಲಕ ಆನಂದದತ್ತ ಸಾಗಲು ಉತ್ಕ್ರಾಂತಿಗೆ ಆಧಾರ ಒದಗಿಸುತ್ತಾನೆ.

*

ಮನಸ್ಸು ಮತ್ತು ಪ್ರಾಣಿಕಗಳಲ್ಲಿ ಕ್ರಿಯೆ ಕೈಕೊಳ್ಳುವ ಅಧಿಮಾನಸ ಪ್ರಜ್ಞೆಗಾಗಿ ಶ್ರೀಕೃಷ್ಣ ಕಾರ್ಯಮಾಡಿದ.

*

ಅಲ್ಲಿ ಹೇಳಿದ್ದೇನೆಂದರೆ ಶ್ರೀಕೃಷ್ಣ ಪೃಥ್ವಿಯ ಮೇಲಿನ ಪ್ರಕಟಣೆಯಾಗಿ ಅಧಿಮಾನಸ ಪ್ರಜ್ಞೆಯ ಸಾಧ್ಯತೆಯನ್ನು ಇಲ್ಲಿ ಮನುಷ್ಯರಿಗಾಗಿ ತೆರೆದಿರಿಸಿದ ಹಾಗೂ ಅದಕ್ಕಾಗಿ ನಿಂತುಕೊಂಡ, ಅದು ಮಾನಸಿಕ ಮನುಷ್ಯನಲ್ಲಿ ಶ್ರೀರಾಮ ಅವತಾರ ತಾಳಿದ ಹಾಗಿತ್ತು. ಶ್ರೀಕೃಷ್ಣ ಅಧಿಮಾನಸದ ದೇವತೆಯಾಗಿದ್ದರೆ ಅದರರ್ಥ ಅವನು ಅವತಾರ ಪುರುಷನಾಗಿರಲಿಲ್ಲ, ಭಗವಂತನಾಗಿರಲಿಲ್ಲ, ಆದರೆ ಭಗವಂತ ಎಂದು ಹಕ್ಕು ಸಾಧಿಸಿದ ಬೇರೆ ಯಾರೋ ಆಗಿದ್ದರು– ಎಂದರೆ ಅವನು ದೇವತೆಯಾಗಿದ್ದ, ಆದರೆ ಹೇಗೋ ತಾನು ಭಗವಂತ ಎಂದು ಯೋಚಿಸಿದ.

*


ಅತಿ ಕಡಿಮೆ ಜನ ಶ್ರೀಕೃಷ್ಣನನ್ನು ಅವತಾರ ಪುರುಷ ಎಂದು ಗುರುತಿಸಿರಲಿಲ್ಲ, ನಿಶ್ಚಿತವಾಗಿ ಅದು ಸಾರ್ವತ್ರಿಕ ರೂಪದಲ್ಲಿ ಗುರುತಿಸಿದ್ದಾಗಿರಲಿಲ್ಲ ಎಂದು ನಾನು ಭಾವಿಸುತ್ತೇನೆ. ಅವನಿಗೆ ಅತಿ ಹತ್ತಿರವಾಗಿದ್ದವರು ಅದನ್ನು ಲೆಕ್ಕಕ್ಕೆ ತೆಗೆದುಕೊಂಡಿ–

ರಲಿಲ್ಲ ಎಂದು ತೋರಿಬರುತ್ತದೆ. ವಿದುರನಂತಹ ಕಡಿಮೆ ಪ್ರಾಮುಖ್ಯತೆಯಿದ್ದ ಜನರು ಲೆಕ್ಕಕ್ಕೆ ತೆಗೆದುಕೊಂಡಿದ್ದರು.

ಶ್ರೀಕೃಷ್ಣನ ಜೊತೆಗಿದ್ದವರು ತೋರಿಕೆಯಲ್ಲಿ ಇತರ ಮನುಷ್ಯರಿರುವ ಮನುಷ್ಯರ ಹಾಗಿದ್ದರು. ಮನುಷ್ಯರು ಇತರ ಮನುಷ್ಯರ ಜೊತೆಗೆ ಮಾತನಾಡುವ ರೀತಿಯಲ್ಲಿ ಮಾತನಾಡುತ್ತಿದ್ದರು, ಕಾರ್ಯ ಕೈಕೊಳ್ಳುವ ರೀತಿಯಲ್ಲಿ ಕಾರ್ಯಕೈಕೊಳ್ಳುತ್ತಿದ್ದರು, ಅವರನ್ನು ದೇವರುಗಳೆಂದು ಅವರ ಸುತ್ತಲಿದ್ದ ಜನರು ಯೋಚಿಸಿರಲಿಲ್ಲ. ಶ್ರೀಕೃಷ್ಣನನ್ನೇ ಸ್ವತಃ ಬಹಳಷ್ಟು ಜನರು ಮನುಷ್ಯನೆಂದು ತಿಳಿದುಕೊಂಡಿದ್ದರು– ಕೇವಲ ಕೆಲವು ಜನರು ಅವನನ್ನು ಭಗವಂತನೆಂದು ಪೂಜಿಸುತ್ತಿದ್ದರು.

**CWSA, 28/499–00** **– ಶ್ರೀ ಅರವಿಂದರು**

*



**ಶ್ರೀಕೃಷ್ಣ ಪೃಥ್ವಿಯ ಮೇಲೆ ಸ್ವಾತಂತ್ರ್ಯವನ್ನು ಹಾಗೂ ದಿವ್ಯಾನಂದವನ್ನು ತರುವುದಕ್ಕಾಗಿ ಬಂದಿದ್ದ**

ಶ್ರೀಕೃಷ್ಣನನ್ನು ಕುರಿತು ಹೇಳುವುದಾದರೆ ಅವನು ಪೃಥ್ವಿಯ ಮೇಲೆ ಸ್ವಾತಂತ್ರ್ಯವನ್ನು ಹಾಗೂ ದಿವ್ಯಾನಂದವನ್ನು ತರಲು ಬಂದಿದ್ದ. ಪ್ರಕೃತಿಗೆ, ತಮ್ಮ ಭಾವೋದ್ರೇಕಗಳಿಗೆ ಹಾಗೂ ದೋಷಗಳಿಗೆ ಗುಲಾಮರಾಗಿದ್ದ ಜನರು ಪರಮೋಚ್ಚ ಪ್ರಭುವಿನಲ್ಲಿ ಆಶ್ರಯ ಪಡೆದರೆ ಅವರು ಎಲ್ಲ ಬಂಧನದಿಂದ ಹಾಗೂ ಪಾಪದಿಂದ

ಮುಕ್ತರಾಗುತ್ತಾರೆ ಎಂಬುದನ್ನು ಘೋಷಿಸಿ ಹೇಳಲು ಬಂದಿದ್ದ. ಆದರೆ ಜನರು ತಮ್ಮ ದುರ್ಗುಣಗಳಿಗೆ ಹಾಗೂ ಸದ್ಗುಣಗಳಿಗೆ ಬಹಳಷ್ಟು ಅಂಟಿಕೊಂಡಿರುತ್ತಾರೆ. (ಏಕೆಂದರೆ ದುರ್ಗುಣವಿಲ್ಲದೆ ಸದ್ಗುಣವಿರುವುದಿಲ್ಲ), ಅವರು ತಮ್ಮ ಪಾಪಗಳನ್ನು ಪ್ರೀತಿಸುತ್ತಾರೆ ಮತ್ತು ಬೇರೆ ಯಾರಾದರೂ ಮುಕ್ತರಾಗಿರುವುದನ್ನು, ಎಲ್ಲ ದೋಷಗಳ ಮೇಲಿರುವುದನ್ನು ಸಹಿಸಿಕೊಳ್ಳುವುದಿಲ್ಲ. ಆ ಕಾರಣದಿಂದಾಗಿಯೇ ಶ್ರೀಕೃಷ್ಣ ಅಮರನಾಗಿದ್ದರೂ ಬೃಂದಾವನದಲ್ಲಿ ಮಾನವ ದೇಹ ರೂಪದಲ್ಲಿ–ರುವುದಿಲ್ಲ.

**CWM, 10/59–60** **– ಶ್ರೀಮಾತೆ**

*

**ಅವತಾರ ಬರುವುದರಿಂದಾಗಿ ಆಂತರಿಕ ಫಲಗಳು**

ಆಂತರಿಕ ಫಲಗಳನ್ನು ದೊರಕಿಸಲು ಮನುಷ್ಯ ಇರಬೇಕಾದ ರೀತಿ ಹೀಗಿದೆ: ದೈವೀ ಜನ್ಮ ತಾಳುವಿಕೆಯ ಹಾಗೂ ದೈವೀ ಕಾರ್ಯಗಳ ನಿಜವಾದ ಸ್ವಭಾವವನ್ನು ಅರಿತಿರಬೇಕು, ಅವತಾರಪುರುಷನೊಂದಿಗೆ ಪ್ರಜ್ಞೆಯಲ್ಲಿ ತುಂಬಿಕೊಂಡು ಬೆಳೆಯುತ್ತ ಅವನಲ್ಲಿ ಇಡೀ ಸತ್ತೆಯೊಡನೆ ಆಶ್ರಯ ಪಡೆಯುವುದು 'ಮನ್ಮಯಾ ಮಾಮ್ ಉಪಾಶ್ರಿತಾಃ', ಸಿದ್ಧಿ ತಂದುಕೊಡುವ ಅವತಾರ ಪುರುಷರ ಶಕ್ತಿಯಿಂದ ಪರಿಶುದ್ಧರಾಗಬೇಕು, ನಿಮ್ನ ಪ್ರಕೃತಿಯಿಂದ ಮುಕ್ತಿ ಪಡೆಯಬೇಕು, ದೈವೀ ಸತ್ತೆಯನ್ನು ಹಾಗೂ ದೈವೀ ಸ್ವಭಾವ 'ಮದ್ಭಾವ' ವನ್ನು ಪಡೆಯಬೇಕು. ಅವತಾರ ಪುರುಷ ನಿಮ್ನ ಸ್ವಭಾವದ ಮೇಲಿರುವ ದೈವೀಸ್ವಭಾವವನ್ನು ತೆರೆದು ತೋರಿಸಲು, ಮತ್ತು ಮುಕ್ತ, ಅಹಂಕಾರರಹಿತ, ಉದಾಸೀನ, ಅವ್ಯೈಯಕ್ತಿಕ, ವಿಶ್ವಂಭರ, ದೈವೀಪ್ರಕಾಶದಿಂದ, ದೈವೀ ಕಾರ್ಯಗಳೆಂದರೇನು? ಎಂಬುದನ್ನು ತೋರಿಸಿ–ಕೊಡಲು ಬರುತ್ತಾನೆ. ಅವನು ದೈವೀವಿಶಿಷ್ಟತೆಯೆಂದು ಬರುತ್ತಾನೆ, ಆ ವಿಶಿಷ್ಟತೆ ಮಾನವ ಸತ್ತೆಯ ಪ್ರಜ್ಞೆಯನ್ನು ತುಂಬುವುದು ಮತ್ತು ಸೀಮಿತ ಅಹಂಕಾರಯುಕ್ತ ವ್ಯಕ್ತಿತ್ವವನ್ನು ಬದಲು ಮಾಡುವುದು, ಅದರಿಂದಾಗಿ ಅದು ಅಹಂಕಾರದಿಂದ ಮುಕ್ತವಾಗುತ್ತದೆ, ಅನಂತ ಹಾಗೂ ವಿಶ್ವಂಭರವಾದುದರಲ್ಲಿ ಸೇರಿಕೊಳ್ಳುತ್ತದೆ, ಜನ್ಮತಾಳುವುದನ್ನು ತೊರೆದು ಅಮರವಾಗುತ್ತದೆ. ಅವನು ದೈವೀ ಸಾಮರ್ಥ್ಯ ಹಾಗೂ ದೈವೀ ಪ್ರೇಮವೆಂದಾಗಿ ಬರುತ್ತಾನೆ, ಅವು ಜನರನ್ನು ತಮ್ಮೆಡೆಗೆ ಸೆಳೆಯುತ್ತವೆ, ಹಾಗಾಗಿ ಅವರು ಅವುಗಳಲ್ಲಿ ಆಶ್ರಯ ಪಡೆಯುತ್ತಾರೆ ಮತ್ತು ಇನ್ನು

ಮುಂದೆ ಅವರು ತಮ್ಮ ಅಸಮರ್ಪಕ ಮಾನವ ಸಂಕಲ್ಪಗಳಲ್ಲಿ ಮತ್ತು ಮಾನವ ಭಯ, ಸಿಟ್ಟು ಮತ್ತು ಭಾವೋದ್ರೇಕ ಇವುಗಳಲ್ಲಿ ಆಶ್ರಯ ಪಡೆಯುವುದಿಲ್ಲ, ಈ ಎಲ್ಲ ಚಂಚಲತೆ ಮತ್ತು ವೇದನೆ ಇವುಗಳಿಂದ ಮುಕ್ತಿ ಪಡೆದು ದೇವನ ಸ್ಥಿರತೆ ಮತ್ತು ದಿವ್ಯಾನಂದಗಳಲ್ಲಿ ಜೀವಿಸುವಂತಾಗುವುದು. ದೇವನ ಯಾವ ನಾಮರೂಪದಲ್ಲಿ ಇಲ್ಲವೆ ದೇವನ ಯಾವ ಮುಖವನ್ನು ಮುಂದಿರಿಸಿಕೊಂಡು ದೇವ ಬರುತ್ತಾನೆ ಎಂಬುದು ಸಾರಭೂತವಾಗಿ ಮಹತ್ವದ್ದಾಗಿರುವುದಿಲ್ಲ, ಏಕೆಂದರೆ ಜನರ ಸ್ವಭಾವಕ್ಕನುಗುಣವಾಗಿ ಭಿನ್ನವಾಗುತ್ತ ಅವರು ಭಗವಂತನಿರಿಸಿದ ಮಾರ್ಗಗಳನ್ನು ಅನುಸರಿಸುತ್ತಾರೆ, ಆ ಮಾರ್ಗಗಳು ಕೊನೆಯಲ್ಲಿ ಅವರನ್ನು ದೇವನತ್ತ ಕರೆದೊಯ್ಯುತ್ತವೆ, ಅವು ಅವರನ್ನು ಕರೆದೊಯ್ಯಲು ಬಂದಾಗ ಅವರು ಅತ್ಯಂತ ಒಳ್ಳೆಯ ರೀತಿಯಲ್ಲಿ ಅನುಸರಿಸುವ ಹಾಗಿರುತ್ತವೆ; ಯಾವ ರೀತಿಯಲ್ಲಿ ಜನರು ದೇವನನ್ನು ಒಪ್ಪಿಕೊಳ್ಳುವರೋ, ಪ್ರೀತಿಸುವರೋ, ಅವನಲ್ಲಿ ಸಂತೋಷ ಕಂಡುಕೊಳ್ಳುವರೋ ಆ ರೀತಿಯಲ್ಲಿ ದೇವ ಅವರನ್ನು ಒಪ್ಪಿಕೊಳ್ಳುತ್ತಾನೆ, ಪ್ರೀತಿಸುತ್ತಾನೆ ಹಾಗೂ ಮನುಷ್ಯನಲ್ಲಿ ಸಂತೋಷ ಕಂಡುಕೊಳ್ಳುತ್ತಾನೆ: 'ಯೆ ಯಥಾ ಮಾಮ್ ಪ್ರಪದ್ಯಂತೆ ತಾಮ್ ತಥೈವ ಭಜಾಮ್ಯಹಂ'.

**CWSA, 19/175–176** **– ಶ್ರೀ ಅರವಿಂದರು**

*

## ಶ್ರೀಕೃಷ್ಣ – ಯೋಗದ ದೈವೀ ಪ್ರಭು

### ಶ್ರೀಕೃಷ್ಣನಿಗಾಗಿ ಪ್ರೇಮ ಮತ್ತು ಭಕ್ತಿ

ಶ್ರೀಕೃಷ್ಣನನ್ನು ಕುರಿತು ಹೇಳುವುದಾದರೆ ಅವನನ್ನು ಸರಳವಾಗಿ, ನೇರವಾಗಿ ಸಮೀಪಿಸುವುದಿಲ್ಲವೇಕೆ? ನೀವು ಪ್ರಾರ್ಥಿಸಿದರೆ, ಅವನು ಅದನ್ನು ಕೇಳಿಸಿ–ಕೊಳ್ಳುತ್ತಾನೆ ಎಂಬುದರಲ್ಲಿ ವಿಶ್ವಾಸವಿರಿಸಬೇಕು. ಉತ್ತರ ಬರುವುದಕ್ಕಾಗಿ ತಡವಾದರೆ, ಅವನು ತಿಳಿದುಕೊಂಡಿರುತ್ತಾನೆ ಮತ್ತು ಪ್ರೀತಿಸುತ್ತಾನೆ ಮತ್ತು ಕಾಲವನ್ನು ಆಯ್ದುಕೊಳ್ಳುವುದರಲ್ಲಿ ಅವನು ಅತ್ಯಂತ ಜಾಣನಾಗಿರುತ್ತಾನೆ. ಈ ನಡುವೆ ನೆಲವನ್ನು ಸ್ವಚ್ಛಗೊಳಿಸಿರಿ ಅದರಿಂದಾಗಿ ಅವನು ಬರುವಾಗ ದಾರಿಯ ಮೇಲೆ ಕಲ್ಲನ್ನು ಎಡವಿಕೊಂಡು, ಅಡವಿಯನ್ನು ದಾಟಿಕೊಂಡು ಬರದಂತಾಗಲಿ. ಅದು ನನ್ನ ಸೂಚನೆ ಮತ್ತು ನಾನು ಏನನ್ನು ಹೇಳುತ್ತಿರುವೆ ಎಂಬುದು ನನಗೆ

ತಿಳಿದಿದೆ– ಏಕೆಂದರೆ ನೀವೇನೇ ಹೇಳಿರಿ, ನಾನು ಮಾನವರ ತೊಂದರೆಗಳನ್ನು ಹಾಗೂ ಹೋರಾಟಗಳನ್ನು ಸರಿಯಾಗಿ ಅರಿತಿದ್ದೇನೆ ಮತ್ತು ಅವುಗಳನ್ನು ಹೇಗೆ ನಿವಾರಿಸಬೇಕೆಂಬುದನ್ನು ನಾನು ತಿಳಿದುಕೊಂಡಿದ್ದೇನೆ.– ಅಲ್ಲಿ ಚೈತ್ಯಾತ್ಮಿಕ ಹೊರಳುವಿಕೆ, ನಂಬಿಕೆ, ಪರಿಪೂರ್ಣ ಹಾಗೂ ಸರಳ ಗಾಢನಂಬಿಕೆ ಹಾಗೂ ನೆಚ್ಚಿಕೊಳ್ಳುವಿಕೆ ಇರಬೇಕು. ಇವು ವೈಷ್ಣವ ಯೋಗದ ಸೂತ್ರಗಳು ಎಂಬುದನ್ನು ನಾನು ನಿಮ್ಮ ನೆನಪಿಗೆ ತಂದುಕೊಡುತ್ತಿರುವೆ. ಸಹಜವಾಗಿ ವೈಷ್ಣವರ ಇನ್ನೊಂದು ರೀತಿಯಿದೆ, ಅದು ಹಾತೊರೆತ ಹಾಗೂ ನಿರಾಶೆ ಇವುಗಳ ಮಧ್ಯೆ ಹೊಯ್ದಾಡು–ವಂತಹದಾಗಿರುತ್ತದೆ.– ಉತ್ಸಾಹದಿಂದ ಅರಸುವಿಕೆ ಮತ್ತು ವಿರಹದ ಪೀಡೆಗಳು. ಅದನ್ನೇ ನೀನು ಅನುಸರಿಸುತ್ತಿರುವಂತೆ ತೋರಿಬರುತ್ತದೆ. ಅದರ ಮೂಲಕ ಮನುಷ್ಯ ಗುರಿಯನ್ನು ತಲುಪಬಲ್ಲ ಎಂಬುದನ್ನು ನಾನು ನಿರಾಕರಿಸುತ್ತಿಲ್ಲ, ಯಾವುದೇ ಮಾರ್ಗವನ್ನು ನಿಷ್ಕಾಪಟ್ಯದಿಂದ ಅನುಸರಿಸಿದಾಗ ಮನುಷ್ಯ ಆ ಗುರಿಯನ್ನು ತಲುಪುತ್ತಾನೆ. ಆದರೆ ಆ ಮಾರ್ಗವನ್ನು ಅನುಸರಿಸುವವರು ವಿರಹದಲ್ಲಿಯೂ, ದೈವೀಪ್ರಿಯಕರನ ಚಪಲ ಚಿತ್ತತೆಯಲ್ಲಿಯೂ ರಸ ಕಂಡುಕೊಳ್ಳುತ್ತಾರೆ. ಕೆಲವರು ಹಾಡಿ ಹೇಳಿದ್ದು ಹೀಗಿದೆ: “ದೇವನನ್ನು ಕುರಿತು ನಮ್ಮ ಇಡೀ ಜೀವನಗಳಾದ್ಯಂತ ಅರಸುತ್ತ ಬಂದಿದ್ದೇವೆ, ಆದರೆ, ಯಾವಾಗಲೂ, ಅವನು ನಮ್ಮ ದೃಷ್ಟಿಯಿಂದ ನುಸುಳಿಕೊಂಡು ಹೋಗಿದ್ದಾನೆ. ಅದರಲ್ಲಿಯೂ ಕೂಡ ನಾವು ರಸ ಕಂಡುಕೊಳ್ಳುತ್ತೇವೆ.” ಹಾಗಾಗಿ ಆ ಮಾರ್ಗವನ್ನು ನೀನು ಅನುಸರಿಸುವುದಕ್ಕೆ ನಾನು ಒಪ್ಪಿಗೆ ನೀಡುವುದನ್ನು ನಿರೀಕ್ಷಿಸಬಾರದು. ಎಲ್ಲ ಸಾಧನಗಳಿಂದ ಶ್ರೀಕೃಷ್ಣನನ್ನು ಅರಸುತ್ತ ಹೋಗು, ಆದರೆ ಗುರಿ ತಲುಪುವ ನಿರ್ಧಾರವನ್ನಿರಿಸಿಕೋ, ವಿಫಲತೆ ಬರಬಹುದೆಂಬ ನಿರೀಕ್ಷೆ ಬೇಡ, ಇಲ್ಲವೆ ಅರ್ಧದಾರಿಯಲ್ಲಿಯೇ ಮುರಿದುಕೊಂಡು ಬಿಡುವ ಸಾಧ್ಯತೆಯನ್ನು ಒಪ್ಪಿಕೊಳ್ಳುವುದು ಬೇಡ.

**CWSA, 29/487–88** **– ಶ್ರೀಮಾತೆ**

*

**ನೇರವಾಗಿ ಶ್ರೀಕೃಷ್ಣನನ್ನು ಸಮೀಪಿಸುವುದು ಸುಲಭವಲ್ಲ**

ನೇರವಾಗಿ ಶ್ರೀಕೃಷ್ಣನನ್ನು ಸಮೀಪಿಸುವುದು ಸುಲಭವಲ್ಲ ಹಾಗೂ ಸುರಕ್ಷಿತವಲ್ಲ, ಸಾಧಕನ ಸ್ವಭಾವದಲ್ಲಿರುವ ಸ್ಪಷ್ಟತೆ ಹಾಗೂ ಏಕರೂಪತೆಗಳ ಮಧ್ಯೆ

ಬರುವ ಏನಾದರೊಂದಿದ್ದರೆ ಅದು ಕೆಲವೊಮ್ಮೆ ಭೀಕರವಾಗುವಂತೆ ಅಪಾಯ–ಕಾರಕವಾಗುವುದು. ಅಂತಹ ಸಂದರ್ಭದಲ್ಲಿ ಯಾವುದೇ ತಪ್ಪಾದ ಆಸೆ, ಜಂಬ, ಗರ್ವ, ಲೈಂಗಿಕ ಅಶುದ್ಧತೆ, ಮಹತ್ವಾಕಾಂಕ್ಷೆ, ಇಲ್ಲವೆ ಬೇರೆ ಯಾವುದೋ ದೌರ್ಬಲ್ಯ ಇವೆಲ್ಲ ಸಾಧನೆಯನ್ನು ಗಂಭೀರ ವಿರೂಪಗೊಳ್ಳುವಿಕೆಗೆ ತೆರೆದಿರಿಸಬಹುದು, ಸಾಧನೆಯನ್ನು ತಪ್ಪು ಮಾರ್ಗದತ್ತ ಹೊರಳಿಸಬಹುದು, ನಿಂತು ಹೋಗುವಂತೆ, ಕುಸಿದು ಹೋಗುವಂತೆ ಮಾಡಬಹುದು, ಆಧ್ಯಾತ್ಮಿಕ ಅಧೋಗತಿಯತ್ತ ಕೊಂಡೊಯ್ಯಬಹುದು. ಶ್ರೀಕೃಷ್ಣನದೇ ಪ್ರಭಾವ ನಿಜವಾಗಿ ಅವನದೇ ಪ್ರಭಾವವಾಗಿರುವಾಗ ತಪ್ಪಾದ ಪ್ರಭಾವವಾಗಲಾರದು, ಆದರೆ ಬೇರೆ ಯಾವುದೋ ಪ್ರಭಾವ ಅವನದೆಂದು ತಪ್ಪಾಗಿ ಭಾವಿಸಿ ಒಪ್ಪಿಕೊಳ್ಳುವ ಸಂಭವವಿರುತ್ತದೆ. ವಿಶೇಷವಾಗಿ ಅವನು ದೈವೀ ಪ್ರೇಮ, ದೈವೀ ಸೌಂದರ್ಯ ಹಾಗೂ ದಿವ್ಯಾನಂದಗಳ ಪ್ರಭುವಾಗಿರುತ್ತಾನೆ, ಇವುಗಳನ್ನು ಅರಸಿಕೊಂಡು ಯಾವಾಗಲೂ ತಪ್ಪಾದ ರೀತಿಯಲ್ಲಿ ಸಾಗಿ ಹೋಗುವ ಜನರು ತಮ್ಮ ತಪ್ಪಾದ ರೀತಿಗಳನ್ನು ಶ್ರೀಕೃಷ್ಣನನ್ನು ಅರಸುವಿಕೆಯಲ್ಲಿ ಸುಲಭವಾಗಿ ಅನುಸರಿಸಬಹುದು. ಆ ಸಮೀಪಿಸುವಿಕೆಯನ್ನು ಗುರುವಿನ ಮುಖಾಂತರ ಸಾಧಿಸಬೇಕು, ಹಾಗಿಲ್ಲದಿದ್ದರೆ ಸಿದ್ಧಿಸಿಕೊಳ್ಳಲಾಗುವುದಿಲ್ಲ ಎಂದು ದೃಷ್ಟಾರರು ಹೇಳುವುದಕ್ಕೆ ಇರುವ ಅವರ ಅನುಭವ ಹಲವಾರು ಕಾರಣಗಳಲ್ಲಿ ಒಂದಾಗಿರಬೇಕು. ಆ ಕಾರಣಕ್ಕಾಗಿಯೇ ವೈರಾಗ್ಯ, ಮಾನವ ಸ್ವಭಾವದ ಸಾಮಾನ್ಯ ಗುರಿಗಳಿಗೆ ಅಂಟಿಕೊಂಡಿರದೇ ಇರುವುದು ಅಷ್ಟೊಂದು ಅವಶ್ಯವಾಗಿದೆ ಎಂದು ಅವರು ಒತ್ತುಕೊಟ್ಟು ಹೇಳುತ್ತಾರೆ. ಅದೇ ಕಾರಣದಿಂದಾಗಿ ಶ್ರೀಕೃಷ್ಣ ತನಗಾಗಿ ಕ್ಷೇತ್ರ ನಿರ್ಮಲವಾಗುವವರೆಗೆ ತನ್ನನ್ನು ತೋರಿಸಲು ಒಲವು ತೋರಿಸುವುದಿಲ್ಲ! ಅವನು ತಾನೇ ಎಂದು ಪ್ರತಿನಿಧಿಸುವ ಯಾವುದೇ ಸಾಮರ್ಥ್ಯ ಇಲ್ಲವೆ ಪ್ರಭಾವದ ಮಧ್ಯಪ್ರವೇಶಿಸುವಿಕೆ, ಅವನ ರೂಪವನ್ನು ಕೂಡ ಅನುಕರಣ (imitation) ಮಾಡುವಿಕೆ ಇವುಗಳನ್ನು ಒಪ್ಪಿಕೊಂಡರೆ ಅವು ಮಾರಕವಾಗಬಹುದು. ಅವನ ನಿಜವಾದ ಪ್ರಕಟಣೆಗೆ ತಯಾರಾಗದೆ ಇದ್ದವನಲ್ಲಿ ಅಸ್ತವ್ಯಸ್ತತೆಯನ್ನು ಉಂಟುಮಾಡಬಹುದು. ಮನುಷ್ಯ ಈ ಅಪಾಯಗಳಿಂದ ತನ್ನನ್ನು ರಕ್ಷಿಸಿಕೊಳ್ಳಬೇಕು ಮತ್ತು ಗುರು ತನ್ನನ್ನು ಮಧ್ಯೆ ಸೇರಿಸಿಕೊಂಡು ಅವುಗಳ ವಿರುದ್ಧ ರಕ್ಷಾಸಾಧನ (shield) ಆಗಬಲ್ಲನು.

**CWSA, 29/488–89** **– ಶ್ರೀಮಾತೆ**

*

## ಶ್ರೀಕೃಷ್ಣ ಪ್ರೀತಿ ಪಾತ್ರನಾದವನು

ನಿನಗೆ ಒಗಟಾಗಿರುವ ವಿಷಯ ಕುರಿತು ಹೇಳುವುದಾದರೆ ಅದು ಭಕ್ತನ ಭಾವನೆ ಮತ್ತು ಅವಲೋಕನ ಮಾಡುವವನ ಅವಲೋಕನ ಇವುಗಳ ಮಧ್ಯದಲ್ಲಿಯ ಗೊಂದಲವಾಗಿದೆ. ಸಹಜವಾಗಿ ಭಕ್ತ ಶ್ರೀಕೃಷ್ಣನನ್ನು ಪ್ರೀತಿಸುತ್ತಾನೆ, ಏಕೆಂದರೆ ಶ್ರೀಕೃಷ್ಣ ಪ್ರೀತಿಪಾತ್ರನಾಗಿರುತ್ತಾನೆ ಎಂದು, ಬೇರಾವ ಕಾರಣಕ್ಕಾಗಿ ಅಲ್ಲ, ಅದು ಅವನ ನಿಜವಾದ ಭಾವನೆ. ಶ್ರೀಕೃಷ್ಣನನ್ನು ಪ್ರೀತಿಸುವಂತೆ ತನ್ನಲ್ಲಿರುವ ಏನು ಮಾಡಿತು ಎಂಬುದರ ಬಗ್ಗೆ ತಲೆಕೆಡಿಸಿಕೊಳ್ಳಲು ಅವನಲ್ಲಿ ಸಮಯವಿರುವುದಿಲ್ಲ. ಅವನು ಪ್ರೀತಿಸುತ್ತಾನೆ ಎಂಬ ವಾಸ್ತವ ಸಂಗತಿ ಅವನಿಗೆ ಸಾಕಷ್ಟಾಗಿರುತ್ತದೆ, ಅವನು ತನ್ನ ಭಾವನೆಗಳನ್ನು ವಿಶ್ಲೇಷಣೆ ಮಾಡುವ ಆವಶ್ಯಕತೆ ಇರುವುದಿಲ್ಲ. ಶ್ರೀಕೃಷ್ಣನ ಕೃಪೆ ಅವನಿಗೆ ಶ್ರೀಕೃಷ್ಣನ ಪ್ರೀತಿಪಾತ್ರವಾಗಿರುವಿಕೆಯನ್ನು, ಅವನ ಕರೆಯಲ್ಲಿ ಅವನ ಕೊಳಲಿನ ಕೂಗನ್ನು ಒಳಗೊಂಡಿರುತ್ತದೆ, ಹೃದಯಕ್ಕೆ ಅದಷ್ಟು ಸಾಕಾಗುತ್ತದೆ ಇಲ್ಲವೆ ಇನ್ನೂ ಹೆಚ್ಚಿನದೇನಾದರೂ ಇದ್ದರೆ ಅದು ಇತರರು ಇಲ್ಲವೆ ಎಲ್ಲರೂ ಆ ಕೊಳಲನ್ನು ಕೇಳಿಸಿಕೊಳ್ಳಲಿ, ಮುಖವನ್ನು ನೋಡಲಿ, ಈ ಪ್ರೇಮದ ಎಲ್ಲ ಸೌಂದರ್ಯ ಹಾಗೂ ದಿವ್ಯಾನಂದವನ್ನು ಭಾವನೆಗೆ ತಂದುಕೊಳ್ಳಲಿ ಎಂಬ ಹಾತೊರೆತವಿರುತ್ತದೆ.

*

## ಬಾಹ್ಯಪರಿಸ್ಥಿತಿಗಳಿಗಿಂತ ಆಂತರಿಕ ಸಿದ್ಧತೆ ಹೆಚ್ಚು ಮಹತ್ವದ್ದು

ಭಕ್ತನ ಹೃದಯವಲ್ಲ, ಆದರೆ ಅವಲೋಕಿಸುವ ಮನಸ್ಸು ಪ್ರಶ್ನಿಸುತ್ತದೆ: ಗೋಪಿಯರನ್ನು ಕರೆಯಲಾಗಿತ್ತು, ಅವರು ಕೂಡಲೆ ಪ್ರತಿಸ್ಪಂದಿಸಿದರು. ಉದಾಹರಣೆಗೆ ಬ್ರಾಹ್ಮಣ ಸ್ತ್ರೀಯರನ್ನು ಕರೆಯಲಾಗಿರಲಿಲ್ಲ, ಇಲ್ಲವೆ ಅವರು ಕೂಡಲೆ ಪ್ರತಿಸ್ಪಂದಿಸಲಿಲ್ಲ. ಮನಸ್ಸು ಒಮ್ಮೆ ಪ್ರಶ್ನೆಯನ್ನು ಇರಿಸಿದ ಕೂಡಲೆ ಆಗ ಸಾಧ್ಯವಾಗಬಹುದಾದ ಎರಡು ಉತ್ತರಗಳಿರುತ್ತವೆ, ಯಾವುದೇ ಕಾರಣವಿಲ್ಲದೆ, ಕೇವಲ ಶ್ರೀಕೃಷ್ಣನ ಸಂಕಲ್ಪ, ಅದನ್ನು ಮನಸ್ಸು ಪರಿಪೂರ್ಣ ದೈವೀಆಯ್ಕೆ ಇಲ್ಲವೆ ಅವನ ಯಾದೃಚ್ಛಿಕ (arbitrary) ದೈವೀ ಚಪಲ ಚಿತ್ತತೆ ಇಲ್ಲವೆ ಕರೆಗೊಳಗಾದ ಹೃದಯದ ಸಿದ್ಧತೆಯಾಗಿರುತ್ತದೆ, ಅದರರ್ಥ ಅಧಿಕಾರ ಭೇದ ಎಂದಾಗುತ್ತದೆ. ಮೂರನೆಯ ಉತ್ತರ ಪರಿಸ್ಥಿತಿಗಳಿಂದಾಗಿರಬಹುದು ಎಂದಿರುತ್ತದೆ,ಉದಾಹರಣೆಗೆ

ಮುಚ್ಚಿಕೊಂಡ ರಕ್ಷಣಾವಲಯಗಳಲ್ಲಿ ಆಧ್ಯಾತ್ಮಿಕ ನೆಲಗಟ್ಟನ್ನು ಇರಿಸಿರುವುದಾಗಿದೆ. ಆದರೆ ಪರಿಸ್ಥಿತಿಗಳು ದೈವೀಕೃಪೆ ಕಾರ್ಯಮಾಡದಂತೆ ಅದನ್ನು ಹೇಗೆ ತಡೆಹಿಡಿಯಬಲ್ಲವು? ದೂರವಿರಿಸುವಿಕೆ ಇದ್ದಾಗಲೂ ಅದು ಕಾರ್ಯ ಮಾಡುತ್ತದೆ. ಕ್ರಿಶ್ಚಿಯನ್‌ರು, ಮಹಮ್ಮದೀಯರು ಶ್ರೀಕೃಷ್ಣನ ದೈವೀಕೃಪೆಗೆ ಪ್ರತ್ಯುತ್ತರ ನೀಡುತ್ತಾರೆ. ಹುಲಿಗಳು, ಅವನನ್ನು ನೋಡಿದರೆ, ಅವನ ಕೊಳಲಿನ ಧ್ವನಿ ಕೇಳಿದರೆ ಅವನನ್ನು ಪ್ರೀತಿಸಬಹುದು? ಹೌದು, ಆದರೆ ಕೆಲವರು ಕೇಳಿಸಿಕೊಳ್ಳುತ್ತಾರೆ ಹಾಗೂ ನೋಡುತ್ತಾರೆ, ಇತರರಿಗೆ ಅದು ಸಾಧ್ಯವಾಗುವುದಿಲ್ಲ ಏಕೆ? ನಮ್ಮನ್ನು ಎರಡು ಪರ್ಯಾಯ ಉತ್ತರಗಳಲ್ಲಿ ಚೆಲ್ಲಿಕೊಡಲಾಗಿದೆ. ಶ್ರೀಕೃಷ್ಣನ ಕೃಪೆಗೆ ಯಾವುದೇ ನಿರ್ಧಾರಕ ಕಾರಣ, ಆಯ್ದುಕೊಳ್ಳುವುದಕ್ಕೆ ಇಲ್ಲವೆ ತಿರಸ್ಕರಿಸುವುದಕ್ಕೆ, ಇರದೇ ಇದ್ದಾಗ ಅದು ಸಂಕಲ್ಪಿಸಿದ್ದುದಕ್ಕೆ ಕರೆಕೊಡುವ ಸಂಕಲ್ಪ ಮಾಡುತ್ತದೆ, ಅವನ ಕರುಣೆ ತೋರಿಸುವುದಕ್ಕಾಗಿ ಇಲ್ಲವೆ ಕನಿಷ್ಠಪಕ್ಷ ಕರುಣೆ ತೋರಿಸುವುದನ್ನು ತಡೆಹಿಡಿಯು–ವುದಕ್ಕಾಗಿ ಇಲ್ಲವೆ ಕನಿಷ್ಠಪಕ್ಷ ಕರುಣೆ ತೋರಿಸುವುದನ್ನು ನಿಧಾನಗತಿಯಲ್ಲಿ ಮಾಡುವುದಕ್ಕಾಗಿ ಇಲ್ಲವೆ ಅವನ ಕರೆಗೆ ಕಂಪಿಸುತ್ತ ನೆಗೆತ ಮಾಡಿ ಬರುವುದಕ್ಕೆ ಸಿದ್ಧತೆ ಮಾಡಿಕೊಂಡ ಹೃದಯಗಳಿಗೆ ಮತ್ತು ಅಲ್ಲಿಯೂ ಕೂಡ ಸರಿಯಾದ ಕ್ಷಣ ಬರುವುದಕ್ಕಾಗಿ ಕಾದುಕೊಂಡಿರುತ್ತಾನೆ. ಅದು ಯೋಗ್ಯತೆಯ ಬಾಹ್ಯ ಅರ್ಹತೆಯ ಇಲ್ಲವೆ ತೋರಿಕೆಯ ಮೇಲೆ ಅವಲಂಬಿಸಿಲ್ಲ ಎಂದು ಹೇಳುವುದು ನಿಸ್ಸಂಶಯವಾಗಿ ನಿಜವಾಗಿರುತ್ತದೆ, ಆದಾಗ್ಯೂ ಎಚ್ಚತ್ತುಕೊಳ್ಳಲು ತಯಾರಿಮಾಡಿಕೊಂಡ ಏನೋ ಒಂದಾದ ಅದನ್ನು ಬಹಳಷ್ಟು ಬಿರುಸಾದ ಪದರುಗಳಲ್ಲಿ ಸೇರಿಸಲಾಗಿತ್ತು, ಅದು ಶ್ರೀಕೃಷ್ಣನಿಗೆ ಗೋಚರಿಸುವ ಆದರೆ ನಮಗೆ ಗೋಚರಿಸದ ಏನೋ ಒಂದಾಗಿತ್ತು. ಬಹುಶಃ ಅದು ಅಲ್ಲಿ ಕೊಳಲು ಊದುವುದನ್ನು ಪ್ರಾರಂಭಿಸುವುದಕ್ಕಿಂತ ದೀರ್ಘಕಾಲ ಮೊದಲು ಇದ್ದಿರಬಹುದು, ಆದರೆ ಅವನು ಅಲ್ಲಿ ಬಿರುಸಾಗಿದ್ದ ಪದರುಗಳನ್ನು ಮೆತ್ತಗಾಗಿಸುತ್ತ ಇದ್ದ, ಅದರಿಂದಾಗಿ ಎಚ್ಚತ್ತುಕೊಳ್ಳುವಂತೆ ಮಾಡುವ ಧ್ವನಿಗಳು ಬಂದಾಗ ಹೃದಯ ಅದರ ನೆಗೆತದಲ್ಲಿ ಹಿಂದೆ ಹೋಗುವಂತೆ ಆಗದಿರುವ ಹಾಗಿತ್ತು. ಗೋಪಿಯರು ಕೇಳಿದರು ಮತ್ತು ಅರಣ್ಯದಲ್ಲಿ ರಭಸದಿಂದ ನಡೆದುಕೊಂಡು ಹೋದರು– ಉಳಿದವರು ಹಾಗೆ ಮಾಡಲಿಲ್ಲ– ಇಲ್ಲವೆ ಅದು ಕೇವಲ ಹಳ್ಳಿಗಾಡಿನ ಸಂಗೀತ ಇಲ್ಲವೆ ಒರಟಾದ ದನಕಾಯುವ ಪ್ರಿಯಕರ ತನ್ನ ಪ್ರೀತ್ಯಾಸ್ಪದಳಾದವಳಿಗೆ ಕೊಳಲಿನ ಧ್ವನಿ ಕೇಳಿಸುವಂತೆ ಮಾಡುತ್ತಿದ್ದ, ಪಂಡಿತರು, ಸುಸಂಸ್ಕೃತರು ಇಲ್ಲವೆ ಸದ್ಗುಣಿಗಳು ಇಂತಹರ ಕಿವಿಗಳಿಗೆ ಅದನ್ನು ದೈವೀ ಕರೆಯೆಂದು ಗುರುತಿಸಲಾಗಿರಲಿಲ್ಲ.

*

## ಅಧಿಕಾರ ಭೇದ

ಅಧಿಕಾರ ಭೇದವನ್ನು ಕುರಿತು ಹೇಳಬೇಕಾದ ಏನೋ ಒಂದಿಷ್ಟಿದೆ ಆದರೆ, ಸಹಜವಾಗಿ, ಅದನ್ನು ವಿಶಾಲ ಅರ್ಥದಲ್ಲಿ ತಿಳಿದುಕೊಳ್ಳಬೇಕು.– ಕೆಲವರಿಗೆ ಶ್ರೀಕೃಷ್ಣನ ಕೊಳಲಿನ ಧ್ವನಿಯನ್ನು ಗುರುತಿಸುವ ಅಧಿಕಾರವಿರಬಹುದು, ಕೆಲವರು ಕ್ರಿಸ್ತನ ಕರೆಯನ್ನು ಕೇಳುವ ಅಧಿಕಾರ ಹೊಂದಿರಬಹುದು, ಇನ್ನು ಕೆಲವರಿಗೆ ಶಿವನ ನರ್ತನವನ್ನು ನೋಡುವ ಅಧಿಕಾರವಿರಬಹುದು.– ಪ್ರತಿಯೊಬ್ಬನಿಗೂ ದೇವನ ಕರೆಗೆ ತನ್ನ ಸ್ವಭಾವದ ಉತ್ತರ ನೀಡುವ ತನ್ನದೇ ರೀತಿಯಿರಬಹುದು. 'ಅಧಿಕಾರ' ಶಬ್ದವನ್ನು ಕಟ್ಟುನಿಟ್ಟಿನ ಮಾನಸಿಕ ಶಬ್ದಗಳಲ್ಲಿ ಹೇಳಲಾಗದು, ಅದು ಆಧ್ಯಾತ್ಮಿಕವಾದದ್ದು ಹಾಗೂ ಸೂಕ್ಷ್ಮವಾದದ್ದು, ಅದು ಕರೆಕೊಡುವವನ ಹಾಗೂ ಕರೆ ಕೇಳಿಸಿಕೊಳ್ಳುವವನ ಮಧ್ಯೆ ಆಧ್ಯಾತ್ಮಿಕವಾದ ಹಾಗೂ ರಹಸ್ಯವಾದ ಏನೋ ಒಂದು.

**CWSA, 29/491–92** **– ಶ್ರೀ ಅರವಿಂದರು**

*



ರಾಧಾ ಭಗವಂತನಿಗಾಗಿ ಇರುವ ಪರಿಪೂರ್ಣ ಪ್ರೇಮದ ವ್ಯಕ್ತೀಕರಣ, ಇಡಿಯಾದದ್ದು ಹಾಗೂ ಸಮಗ್ರವಾದದ್ದು, ಸತ್ತೆಯ ಎಲ್ಲ ಭಾಗಗಳಲ್ಲಿ ಅತ್ಯುಚ್ಚ ಆಧ್ಯಾತ್ಮಿಕವಾದದ್ದರಿಂದ ಹಿಡಿದು ಭೌತಿಕವಾದುದದರ ವರೆಗೆ ಇರುವಂತಹದು,

ಎಲ್ಲ ಸತ್ತೆಯ ಪರಿಪೂರ್ಣ ಸ್ವ–ಅರ್ಪಣ ಮತ್ತು ಇಡಿಯಾದ ಮುಡುಪಾಗಿರಿಸಿ–ಕೊಳ್ಳುವಿಕೆ ಇದ್ದದ್ದು, ದೇಹದಲ್ಲಿ ಮತ್ತು ಅತ್ಯಂತ ಭೌತಿಕವಾದ ಪ್ರಕೃತಿಯಲ್ಲಿ ಪರಮೋಚ್ಚ ಆನಂದವನ್ನು ಕೆಳಗೆ ತರುವಂತಹದು.

**CWSA, 29/494** **– ಶ್ರೀ ಅರವಿಂದರು**

*

**ಶ್ರೀಕೃಷ್ಣ ಹಾಗೂ ಅವನ ಚಪಲ ಚಿತ್ತತೆ**

ಮನುಷ್ಯನಿಗೆ ಶ್ರೀಕೃಷ್ಣ ಬೇಕಾಗಿದ್ದರೆ ಅವನು ಅವನನ್ನು ದೊರಕಿಸುತ್ತಾನೆ. ಆದರೆ ಅವನು ಸಾಕಷ್ಟು ಪರೀಕ್ಷೆಗೆ ಒಳಪಡಿಸುವ ದೇವ, ಕೂಡಲೆ ಬರುವಂತಹನಲ್ಲ, ಆದಾಗ್ಯೂ ಯಾವುದೇ ಸಮಯದಲ್ಲಿ ಹಠಾತ್ತಾಗಿ ಬರಬಹುದು. ಆದರೆ ಸಾಮಾನ್ಯವಾಗಿ ಮನುಷ್ಯ ಅವನನ್ನು ಎಷ್ಟೊಂದು ಅತ್ಯಗತ್ಯತೆಯಿಂದ ಬಯಸಬೇಕು ಎಂದರೆ ಯಾವುದೇ ಬೆಲೆ ತೆತ್ತಲು ತಯಾರಾಗಿರಬೇಕು. ಮನುಷ್ಯ ಹೇಗೆ ಕಾದುಕೊಂಡಿರಬೇಕು ಹಾಗೂ ಹೇಗೆ ಬಯಸಬೇಕು ಎಂಬುದನ್ನು ತಿಳಿದುಕೊಂಡಿರಬೇಕು– ದೀರ್ಘಕಾಲದ ನಿರಾಕರಣೆಯನ್ನು ಗಮನಕ್ಕೆ ತೆಗೆದು–ಕೊಳ್ಳದೆ ಒತ್ತಾಯಪಡಿಸುತ್ತ ಹೋಗಬೇಕು. ಚೈತ್ಯ ಸತ್ತೆ ಅದನ್ನು ಕೈಕೊಳ್ಳಬಲ್ಲದು, ಆದರೆ ಮನಸ್ಸು ಹಾಗೂ ಪ್ರಾಣಿಕ ಕೂಡ ಅದನ್ನು ಹೇಗೆ ಕೈಕೊಳ್ಳಬೇಕು ಎಂಬುದನ್ನು ಕಲಿತುಕೊಳ್ಳಬೇಕು.

*

ನಿಜವಾಗಿ ಶ್ರೀಕೃಷ್ಣ ಬಹಳ ಚಪಲ ಚಿತ್ತದವನು ಎಂದು ನಂಬಲಾಗಿದೆ, ಅವನೊಡನೆ ವ್ಯವಹಾರ ಕಠಿಣವಾದದ್ದು, ಅವನು ಲೀಲೆ ನಡೆಸುವವನು, ಯಾರೊಡನೆ ಲೀಲೆ ನಡೆಸಲಾಗಿರುತ್ತದೆಯೋ ಅವರು ಕೂಡಲೇ ಅದಕ್ಕೆ ಸರಿಯಾದ ಬೆಲೆ ಕಟ್ಟಲಾರರು. ಆದರೆ ಆ ಲೀಲೆಗೆ ಒಂದು ಕಾರಣ, ಅಡಗಿದ ಒಂದು ವಿಧಾನ ಇವೆ ಮತ್ತು ಅವನು ಅದರಿಂದ ಹೊರಗೆ ಬಂದಾಗ ಮತ್ತು ನಿಮಗೆ ಸೊಗಸಾಗಿರಬೇಕು ಎಂಬ ಲಹರಿ ಅವನಲ್ಲಿ ಬಂದಾಗ ಅವನಲ್ಲಿ ಪರಮೋಚ್ಚ ಆಕರ್ಷಕತೆ, ಮೋಹಕತೆ ಇರುತ್ತವೆ, ಅವು ನೀವು ವೇದನೆಗೊಳ–ಗಾದದ್ದಕ್ಕೆಲ್ಲ ಸರಿದೂಗುವಂತಿರುತ್ತವೆ.

*

ಗೋಪಿಯರು, ಅವರ ಸರಿಯಾದ ಅರ್ಥದಲ್ಲಿ, ಸಾಮಾನ್ಯ ಜನರಲ್ಲ, ಅವರು ತಮ್ಮ ಅಸಾಧಾರಣ ಪ್ರೇಮದ ಅತಿಶಯತೆಯಿಂದಾಗಿ, ಭಾವೋದ್ರೇಕದ ಭಕ್ತಿಯಿಂದಾಗಿ, ಕಾದಿರಿಸಿಕೊಳ್ಳದ ಸ್ವ–ಅರ್ಪಣದಿಂದಾಗಿ ಅಸಾಧಾರಣವಾದವರು. ಯಾರಲ್ಲಿ ಅಂತಹದಿರುತ್ತದೆಯೋ, ಬೇರೆ ಸಂಬಂಧದಲ್ಲಿ ಅವನ ಸ್ಥಾನ ಎಷ್ಟೇ ದೀನವಾದದ್ದಿರಲಿ, ಕಲಿಕೆ ಹಾಗೂ ಬಾಹ್ಯ ಪಾವಿತ್ರ್ಯ ಎಷ್ಟೇ ಇರಲಿ ಅವನು ಸುಲಭವಾಗಿ ಶ್ರೀಕೃಷ್ಣನನ್ನು ಬೆನ್ನಟ್ಟಿ ಹೋಗಬಲ್ಲನು ಹಾಗೂ ಅವನನ್ನು ತಲುಪಬಲ್ಲನು, ಅದು ಗೋಪಿಯರ ಸಂಕೇತದ ಅರ್ಥ ಎಂದು ನನಗೆ ತೋರಿಬರುತ್ತಿದೆ. ಸಹಜವಾಗಿ ಅಲ್ಲಿ ಅನೇಕ ಪ್ರಾಮುಖ್ಯತೆಗಳಿವೆ, – ಇಲ್ಲಿ ಹೇಳಿದ್ದು ಅವುಗಳಲ್ಲೊಂದಾಗಿದೆ.

*

ರಾಧೆಯೊಡನಿರುವ ಶ್ರೀಕೃಷ್ಣ ದೈವೀ ಪ್ರೇಮದ ಸಂಕೇತ, ಕೊಳಲು ದೈವೀ ಪ್ರೇಮ ಕರೆಕೊಡುವುದರ ಸಂಕೇತ, ನವಿಲುಗರಿ ವಿಜಯದ ಸಂಕೇತ.

**CWSA, 30/156** **– ಶ್ರೀ ಅರವಿಂದರು**

*

**ಶ್ರೀಕೃಷ್ಣನ ಪ್ರಕಾಶಗಳು**

ಬಂಗಾರ ಹಾಗೂ ನೀಲಿ ಪ್ರಕಾಶಗಳೆರಡೂ ಒಟ್ಟಿಗೆ ಶ್ರೀಕೃಷ್ಣನ ಪ್ರಕಾಶಗಳಾಗಿ–ರುತ್ತವೆ.

**CWSA, 30**

*

ನಸುಬಿಳಿಯದು ಹಾಗೂ ನೀಲಿ ಪ್ರಕಾಶ ಶ್ರೀಕೃಷ್ಣನ ಪ್ರಕಾಶ, ಹಾಗೆಯೇ ನನ್ನದೂ ಕೂಡ; ಆಳಾತಿ ಆಳದ ನೀಲಿ ಪ್ರಕಾಶಗಳು ಬಹಳಷ್ಟು ಸಲ ಉಚ್ಚತರ ಪ್ರಜ್ಞೆಯ ಪ್ರಕಾಶವನ್ನು ಸೂಚಿಸುತ್ತವೆ.

*

ನೀಲಿ ಪ್ರಕಾಶದ ಅರ್ಥ, ಅದರ ನಿಖರವಾದ ಗುಣಲಕ್ಷಣ, ಛಾಯೆ ಹಾಗೂ ಸ್ವಭಾವ ಇವುಗಳ ಮೇಲೆ ಅವಲಂಬಿಸಿರುತ್ತದೆ, ನಸು ಬಿಳಿಯದಾದ ನೀಲಿ, ಚಂದ್ರನ ಬೆಳಕಿನಂತಿರುವುದು ಅದು ಶ್ರೀಕೃಷ್ಣನ ಇಲ್ಲವೆ ಶ್ರೀ ಅರವಿಂದರ ಪ್ರಕಾಶ ಎಂದು ತಿಳಿಯಲಾಗಿದೆ.– ತಿಳಿ ನೀಲಿ ಜ್ಞಾನೋದಯ ಪಡೆದ ಮನಸ್ಸಿನ ಪ್ರಕಾಶ ಎಂದು

ಬಹಳಷ್ಟು ಸಲ ಹೇಳಲಾಗಿದೆ– ಉಚ್ಚತರ ಮನಸ್ಸಿಗೆ ಸೇರಿದ ಕಡು ನೀಲಿ ಪ್ರಕಾಶವಿದೆ, ನೇರಳೆ ಬಣ್ಣಕ್ಕೆ ಸಮೀಪವಿರುವ ಇನ್ನೊಂದು ಪ್ರಾಣಿಕ– ಸಾಮರ್ಥ್ಯದ ಪ್ರಕಾಶವಾಗಿದೆ.

**CWSA, 30/118–122**

*

ಶ್ರೀಕೃಷ್ಣನ ಭಿನ್ನ ಪ್ರಕಾಶಗಳಿವೆ– ಮಸುಕಾದ ನೀಲಿ ವಜ್ರದ ಪ್ರಕಾಶ, ನಿತ್ಯ ಹರಿದ್ವರ್ಣದ ಪ್ರಕಾಶ, ಕಡುನೀಲಿ ಪ್ರಕಾಶ ಇತ್ಯಾದಿ. ಅದು ಯಾವ ಸ್ತರದ ಮೇಲೆ ಪ್ರಕಟವಾಗುತ್ತದೆ ಎಂಬುದರ ಮೇಲೆ ಅವಲಂಬಿಸಿರುತ್ತದೆ.

*

ನೀಲಿ ವಜ್ರದ ಪ್ರಕಾಶ ಅಧಿಮಾನಸದಲ್ಲಿರುವ ಶ್ರೀಕೃಷ್ಣನ ಪ್ರಕಾಶ, ಹರಿದ್ವರ್ಣದ ನೀಲಿ ಅಂತರ್ಬೋಧೆಯ ಮನಸ್ಸಿನ ಪ್ರಕಾಶ.

*

ನಸುಬಿಳಿಯದಾದ, ಚಂದ್ರನ ಬೆಳಕಿನಂತಿರುವ ನೀಲಿ ಶ್ರೀಕೃಷ್ಣನ ಪ್ರಕಾಶ– ಹರಿದ್ವರ್ಣದ ನೀಲಿ ಭಕ್ತಿಯ ಪ್ರಕಾಶ, ಕಡು ನೀಲಿ ಭೌತಿಕ ಮನಸ್ಸಿನ ಪ್ರಕಾಶ, ಆಕಾಶ ನೀಲಿ ಉಚ್ಚತರ ಮನಸ್ಸಿನ ಪ್ರಕಾಶ, ಹೀಗೆ ಇನ್ನೂ ಅನೇಕ ಇವೆ.

*

ಕಡುನೀಲಿ ಶ್ರೀಕೃಷ್ಣನ ಪ್ರಕಾಶವಲ್ಲ.

*

ನೀಲಿ ಪ್ರಕಾಶ ರಾಧೆಯದೂ ಆಗಿದೆ.

*

ನೇರಳೆ, ನಿಜವಾಗಿ, ದೈವೀ ಕರುಣೆಯ ಹಾಗೆಯೇ ಶ್ರೀಕೃಷ್ಣನ ದೈವೀಕೃಪೆಯ ವರ್ಣ ಇಲ್ಲವೆ ಪ್ರಕಾಶವಾಗಿರುತ್ತದೆ.

**CWSA, 30/126** **– ಶ್ರೀ ಅರವಿಂದರು**

*

## ವೈಷ್ಣವ ಭಕ್ತಿ ಮತ್ತು ಅತಿಮಾನಸ ಯೋಗ

ಶ್ರೀಕೃಷ್ಣ ಮತ್ತು ಭಕ್ತಿ ಕುರಿತು ಹೇಳುವುದಾದರೆ, ನಾನು ಈಗಾಗಲೆ ಒಂದಕ್ಕಿಂತ ಹೆಚ್ಚು ಸಲ ಉತ್ತರ ನೀಡಿದ್ದೇನೆ ಎಂದು ನನಗನಿಸುತ್ತದೆ. ಶ್ರೀಕೃಷ್ಣನನ್ನು ಪೂಜಿಸುವುದಕ್ಕೆ ಇಲ್ಲವೆ ವೈಷ್ಣವರ ರೀತಿಯ ಭಕ್ತಿಗೆ ನನ್ನ ಅಭ್ಯಂತರವೇನೂ ಇಲ್ಲ, ವೈಷ್ಣವರ ಭಕ್ತಿ ಮತ್ತು ಅತಿಮಾನಸ ಯೋಗ ಇವುಗಳ ನಡುವೆ ಅಸಾಮರಸ್ಯ ಇಲ್ಲ ಮತ್ತು ವಾಸ್ತವದಲ್ಲಿ ವಿಶೇಷವಾದ ಹಾಗೂ ಪ್ರತ್ಯೇಕವಾದ ಅತಿಮಾನಸ ಯೋಗದ ರೂಪವಿಲ್ಲ. ಎಲ್ಲ ಮಾರ್ಗಗಳು ಅತಿಮನಸ್ಸಿನೆಡೆಗೆ ಕರೆದೊಯ್ಯುತ್ತವೆ, ಅದು ಎಲ್ಲ ಮಾರ್ಗಗಳು ಭಗವಂತನತ್ತ ಕರೆದೊಯ್ಯುವ ರೀತಿಯದಾಗಿದೆ.

ನಿಶ್ಚಿತವಾಗಿ ನಾನು ನಿನಗೆ ಸಹಾಯ ಮಾಡುವೆ ಮತ್ತು ಈಗ ಸಹಾಯ ಮಾಡುತ್ತಿರುವೆ, ನಾನು ಸಹಾಯ ಮಾಡುವುದನ್ನು ನಿಲ್ಲಿಸುವೆ ಮತ್ತು ನಿನ್ನನ್ನು ದೂರ ಕಳಿಸಿಬಿಡುವೆ ಎಂಬ ವಿಚಾರದಲ್ಲಿ ಯಾವ ಅರ್ಥವೂ ಇಲ್ಲ. ಪಟ್ಟು ಹಿಡಿದರೆ ನೀನು ಬಯಸುವ ಶಾಶ್ವತ ಭಕ್ತಿಯನ್ನು ಹಾಗೂ ಸಿದ್ಧಿಯನ್ನು ದೊರಕಿಸುವುದರಲ್ಲಿ ವಿಫಲನಾಗುವುದಿಲ್ಲ. ಎಲ್ಲವೂ ಸಿದ್ಧವಾಗಿದೆ ಎಂದು ಕಂಡುಕೊಂಡಾಗ ಹಾಗೂ ಸಮಯ ಸನ್ನಿಹಿತವಾದಾಗ ಅವನಿಗೆ ಕೊಡುವುದಕ್ಕೆ ಇಡಿಯಾದ ನೆಚ್ಚಿಕೆಯನ್ನು ಅವನ ಮೇಲೆ ಇರಿಸಬೇಕು.

**29/494–95**

*

## ಪ್ರತಿಯೊಬ್ಬನೂ ತನ್ನದೇ ಮಾರ್ಗದಲ್ಲಿ ಸಾಗಿ ಹೋಗಬೇಕು

ನಾನು ಒಂದು ಸಲವಲ್ಲ, ಹಲವಾರು ಸಲ ಹೇಳಿದ್ದೇನೆ: ನೀನು ಶ್ರೀಕೃಷ್ಣನನ್ನು ಅರಸುವುದಕ್ಕೆ ಇಲ್ಲವೆ ಅವನಿಂದ ಆನಂದ, ಮಿಲನ ಇಲ್ಲವೆ ಬೇರೆ ಇನ್ನಾವುದನ್ನೋ ಬೇಡಿ ಪಡೆಯುವುದಕ್ಕೆ ನನ್ನ ಆಕ್ಷೇಪಣೆ ಇಲ್ಲ, ನಿನ್ನನ್ನಾಗಲಿ, ಇತರರನ್ನಾಗಲಿ ಅತಿಮನಸ್ಸನ್ನು ಅರಸಿರಿ, ನನ್ನನ್ನು ಅವತಾರವೆಂದು ತಿಳಿಯಿರಿ ಎಂದು ಒತ್ತಾಯಪಡಿಸಿಲ್ಲ. ನಿನ್ನಿಂದ ಹಾಗೂ ಇತರರಿಂದ ಬಂದ ಪ್ರಶ್ನೆಗಳಿಗೆ ಉತ್ತರ ನೀಡುವಾಗ ಈ ವಿಷಯಗಳು ಮೇಲೆದ್ದು ಬಂದಿವೆ ಮತ್ತು ಅವು ಜ್ಞಾನಕ್ಕೆ ಸಂಬಂಧಿಸಿದ ವಿಷಯಗಳೆಂದು ಪರಿಗಣಿಸಿದ್ದೇನೆ ಮತ್ತು ಪ್ರತಿಯೊಬ್ಬನೂ ತನ್ನ ಗುರಿಯತ್ತ ತನ್ನ ರೀತಿಯಲ್ಲಿ, ತನ್ನದೇ ಸ್ವಭಾವಕ್ಕನುಗುಣವಾಗಿ ಸಾಗಿ

ಹೋಗಬೇಕು. ವೈಷ್ಣವರ ಆದರ್ಶದ ಪ್ರಕಾರ ಅಹೈತುಕ ಭಕ್ತಿ ಅತ್ಯುಚ್ಚವಾದ ಮಾರ್ಗ, ತೀವ್ರಗತಿಯದೂ ಕೂಡ, ಆದರೆ ಮನುಷ್ಯ ಆ ತೀವ್ರಗತಿಗೆ ಸಮನಾಗಿರುವ ಭಾವನೆ ತಂದುಕೊಳ್ಳದಿದ್ದರೂ ಆ ಅಹೈತುಕ ಭಕ್ತಿ ಸಾಕಷ್ಟು ಸರಿಯಾಗಿ ಕಾರ್ಯಮಾಡುವುದು. ಇಲ್ಲವೆ ಮನುಷ್ಯನೊಬ್ಬನಿಗೆ ಭಕ್ತಿಯತ್ತ ಎಳ್ಳಷ್ಟೂ ಒಲವಿರದಿದ್ದರೆ ಅವನಿಗೆ ಬೇರೆ ಅನೇಕ ಮಾರ್ಗಗಳಿವೆ. ಇಲ್ಲವೆ ಒಬ್ಬ ಈ ಎಲ್ಲ ರೀತಿಗಳಲ್ಲಿ ಯಾವುದನ್ನೂ ಅನುಸರಿಸಲು ಗಮನ ಹರಿಸದಿದ್ದರೆ, ನಾನು 'ಕ್ಷ'ನ ಪ್ರಶ್ನೆಗೆ ಕೊಟ್ಟ ಉತ್ತರದಲ್ಲಿ ಹೇಳಿದಂತೆ ಸ್ವಭಾವದಲ್ಲಿ ಆತ್ಮವನ್ನು ಕಂಡುಕೊಳ್ಳಲು ಏನೋ ಒಂದರ ಒತ್ತಡವಿರುತ್ತದೆ, ಆ ಏನೋ ಒಂದನ್ನು ಬೆನ್ನಟ್ಟುವುದು ಇಲ್ಲವೆ ದೇವನನ್ನು, ಶ್ರೀಕೃಷ್ಣನನ್ನು ಇಲ್ಲವೆ ಶ್ರೀಮಾತೆಯವರನ್ನು ಹೀಗೆ ಅದೇನೇ ಇರಲಿ ಅದನ್ನು ಅರಸುವುದು ಇರುತ್ತದೆ.

ನಿನ್ನಲ್ಲಿರುವ ಪ್ರೇರಣೆಯನ್ನು ನೀನು ತಿಳಿದಿದ್ದರೆ, ಅದನ್ನು ನೇರವಾಗಿ ಅನುಸರಿಸು– ಪ್ರಶ್ನೆ ಕೇಳುವ ಇಲ್ಲವೆ ಆ ಬದಿಗೆ, ಈ ಬದಿಗೆ ಹೋಗುವ ಆವಶ್ಯಕತೆ ಇಲ್ಲ. ಹೃದಯದ ಪ್ರೇರಣೆಯನ್ನು, ಅದು ಅರಸುತ್ತಿರುವುದನ್ನು ತಲುಪುವವರೆಗೆ, ಅನುಸರಿಸುತ್ತಿರು.

**CWSA, 29/487–93** **– ಶ್ರೀ ಅರವಿಂದರು**

*

**ಶ್ರೀಕೃಷ್ಣ**

ಈ ಭಯಾನಕ ಹಾಗೂ ಮಧುರವಾಗಿರುವ ವಿಶ್ವದಲಿ
ಕೊನೆಗೊಮ್ಮೆ ನನ್ನ ಆತ್ಮ ಜನ್ಮತಾಳಿದುದರ ಅರ್ಥವೊಂದನು ನಾನು
ಕಾಣುತಿಹೆನು,
ಹಸಿದ ಪೃಥ್ವಿಯ ಹೃದಯ ಸ್ವರ್ಗದಾಚೆಗಿರುವ ಶ್ರೀಕೃಷ್ಣನ ಪಾದಗಳತ್ತ
ಅಭೀಪ್ಸೆ ಪಡುತ್ತಿರುವುದರ ಭಾವನೆ ನನಗೆ ಬಂದಿಹುದು.
ಅಮರ ಕಣ್ಣುಗಳ ಸೌಂದರ್ಯವನು ನಾನು ನೋಡಿಹೆನು,
ಪ್ರಿಯಕರನ ಭಾವೋದ್ರೇಕದ ಕೊಳಲನು ಕೇಳಿಸಿಕೊಂಡಿಹೆನು,
ಅಮರ ದಿವ್ಯಾನಂದದ ಆಶ್ಚರ್ಯವೊಂದನು ತಿಳಿದುಕೊಂಡಿಹೆನು,
ಹಾಗೂ ನನ್ನ ಹೃದಯದಲಿರುವ ವೇದನೆ ಎಂದೆಂದಿಗೂ
ಮೂಕವಾಗಿಹುದು.

ಈಗ ಹತ್ತಿರ ಅತಿ ಹತ್ತಿರ ಕೊಳಲಿನ ಸಂಗೀತ ಎಳೆದು ಬರುತಿಹುದು
ವಿಚಿತ್ರ ಪರಮಾನಂದದಿಂದ ಪ್ರಾಣ ನಡುಗುತಿಹುದು,
ಪ್ರಭು ಸ್ಪರ್ಶಿಸುವನೆಂದು, ಅಪ್ಪಿಕೊಳ್ಳುವನೆಂದು ಇರುವನೆಂದು
ಎಲ್ಲ ಪ್ರಕೃತಿ ವಿಶಾಲ ಮನಸೆಳೆಯುವ ನಿಲುಗಡೆಯಾಗಿಹುದು,
ಈ ಒಂದು ಕ್ಷಣಕ್ಕಾಗಿ ಗತಕಾಲದ ಯುಗಗಳು ಜೀವಿಸಿಹವು,
ಕೊನೆಗೆ ಜಗತ್ತು ಈಗ ನನ್ನಲ್ಲಿ ನೆರವೇರಿಕೆ ಕಂಡುಕೊಂಡು ಸ್ಪಂದಿಸುತಿಹುದು.

*

**ವಿಶ್ವವ್ಯಾಪಿ ನರ್ತನ**

**(ಶ್ರೀಕೃಷ್ಣನ ನರ್ತನ, ಕಾಳೀ ನರ್ತನ)**

ವಿಶ್ವವ್ಯಾಪಿ ನರ್ತನದ ಎರಡು ಪರಿಮಾಣಗಳಿಹವು,
ಜೀವನದ ಅಪಾಯಕರ ಭಯಾನಕ ಹಾಗೂ ಮತ್ತು ಮಧುರ
ನೋವು ದುಃಖ ಹಾಗೂ ಅವಕಾಶಗಳ ಲಯಬದ್ಧತೆಗಳಲ್ಲಿ
ನಾವು ಯಾವಾಗಲೂ ಕಾಳೀಮಾತೆಯ ಹೆಜ್ಜೆ ಸಪ್ಪಳ ಕೇಳುತಿಹೆವು.
ಪರದೆಯ ಹಿಂದಿರುವ ದೀಕ್ಷೆ ಪಡೆದವನ ಸತ್ವಪರೀಕ್ಷೆ,
ಮೃತ್ಯುವಿನ ಅಪ್ಪುಗೆಯೊಂದಿಗೆ ಲೀಲೆಯಲಿರುವ ಧೀರೋದಾತ್ತ ಆತ್ಮ
ವಿಧಿಯ ಕಡುಭಯದ ವ್ಯಾಯಾಮಶಾಲೆಯಲಿರುವ ಕುಸ್ತಿಪಟು
ಮತ್ತು ದೈವೀಕೃಪೆಗಿರುವ ಏಕೈಕ ಮಾರ್ಗದ ಯಜ್ಞಾಹುತಿ,
ದೈವೀ ರಹಸ್ಯಗಳಿಗೆ ಬೀಗದ ಕೈ ಎಂದು ಮಾಡಲಾದ ಮಾನವ ದುಃಖಗಳು,
ಕಾಲಗತಿಯ ಕನಸಿನ ಅಪವ್ಯಯಗಳಿಂದ ಹೊರಗಿರುವ ಸತ್ಯದ ಇಕ್ಕಟ್ಟಾದ ದಾರಿ,
ಭೌತದ್ರವ್ಯದ ಸಮಾಧಿಯಿಂದ ಮೇಲಕ್ಕೇಳಲು ಆತ್ಮದ ಏಳು ಮಾರ್ಗಗಳು,
ಇವೆಲ್ಲ ಅವಳ ದುರಂತ ವಿಷಯದ ಸಾಮಾನ್ಯ ಪ್ರಚೋದನೆಗಳಾಗಿಹವು.
ಆದರೆ ಪ್ರಕೃತಿಯ ಮೂಲಕ ಯಾವಾಗ ಶ್ರೀಕೃಷ್ಣನ ನರ್ತನವವನ
ಮಾಧುರ್ಯದ, ನಗುವಿನ, ದಿವ್ಯಾನಂದದ, ಪ್ರೇಮದ ಮುಖವಾಡವನು ಬದಲಾಯಿಸುವುದು?

**CWSA, 2/608, 590** **– ಶ್ರೀ ಅರವಿಂದರು**

*

# ಶ್ರೀ ಅರವಿಂದರು ಹಾಗೂ ಶ್ರೀಕೃಷ್ಣ

## ವಾಸುದೇವ ಸರ್ವಮ್ ಇತಿ

ನನ್ನನ್ನು ಜನರಿಂದ ಪ್ರತ್ಯೇಕಗೊಳಿಸಿದ್ದ ಜೇಲಿನತ್ತ ನೋಡಿದೆ, ಅದು ನನ್ನನ್ನು ಎತ್ತರದ ಗೋಡೆಗಳಿಂದ ಸೆರೆಗೊಳಪಡಿಸಿರಲಿಲ್ಲ, ಇಲ್ಲ, ವಾಸುದೇವ ನನ್ನನ್ನು ಸುತ್ತುವರಿದಿದ್ದ. ನನ್ನ ಸೆರೆಮನೆಯ ಕೋಣೆಯ ಎದುರಿಗಿದ್ದ ಗಿಡದ ಟೊಂಗೆಗಳ ಕೆಳಗೆ ಅಡ್ಡಾಡಿದಾಗ, ಅದು ಆ ಗಿಡವಾಗಿರಲಿಲ್ಲ, ವಾಸುದೇವ ಅಲ್ಲಿದ್ದನೆಂದು ನಾನು ತಿಳಿದುಕೊಂಡೆ, ಶ್ರೀಕೃಷ್ಣ ಅಲ್ಲಿ ನಿಂತುಕೊಂಡಿದ್ದನ್ನು ನಾನು ನೋಡಿದೆ, ಅವನು ನನ್ನ ಮೇಲೆ ತನ್ನ ಛಾಯೆಯನ್ನಿರಿಸಿದ್ದ. ನನ್ನ ಸೆರೆಮನೆ ಕೋಣೆಯ ಸರಳುಗಳತ್ತ ನೋಡಿದೆ, ಅಲ್ಲೊಂದು ಸರಳಿನ ಚೌಕಟ್ಟಿರುವ ಬಾಗಿಲವಿತ್ತು, ಅಲ್ಲಿ ಮತ್ತೆ ವಾಸುದೇವನನ್ನು ನೋಡಿದೆ. ಅಲ್ಲಿ ಕಾವಲುಗಾರನಾಗಿ ಪಹರೆ ನಡೆಸುತ್ತಿದ್ದವನು ನಾರಾಯಣನಾಗಿದ್ದ. ಇಲ್ಲವೆ ನನಗೆ ಹಾಸಿಗೆ ಎಂದು ಕೊಡಲಾಗಿದ್ದ ಒರಟು ಕಂಬಳಿಗಳ ಮೇಲೆ ನಾನು ಒರಗಿಕೊಂಡಿದ್ದಾಗ ಶ್ರೀಕೃಷ್ಣನ ತೋಳುಗಳು ನನ್ನನ್ನು ಸುತ್ತುವರಿದಿರುತ್ತಿದ್ದ ಭಾವನೆ ನನಗೆ ಬರುತ್ತಿತ್ತು, ಆ ತೋಳುಗಳು ನನ್ನ ಮಿತ್ರನ ಹಾಗೂ ಪ್ರಿಯಕರನ ತೋಳುಗಳಾಗಿದ್ದವು. ಅವನು ನನಗೆ ಕೊಟ್ಟ ಆಳವಾದ ದರ್ಶನದ ಮೊದಲ ಉಪಯೋಗ ಇದಾಗಿತ್ತು. ನಾನು ಜೇಲಿನಲ್ಲಿದ್ದ ಆರೋಪಿಗಳತ್ತ ನೋಡಿದೆ, ಅಲ್ಲಿ ಕಳ್ಳರು, ಕೊಲೆಗಾರರು, ಮೋಸಗಾರರು ಇದ್ದರು, ನಾನವರತ್ತ ನೋಡುತ್ತಿದ್ದ ಹಾಗೆ ವಾಸುದೇವನನ್ನು ನೋಡಿದೆ, ಈ ಅಂಧಕಾರ–ಕ್ಕೊಳಗಾಗಿದ್ದ ಆತ್ಮಗಳಲ್ಲಿ, ದುರುಪಯೋಗಪಡಿಸಿಕೊಂಡಿದ್ದ ದೇಹಗಳಲ್ಲಿ ನಾನು ನಾರಾಯಣನನ್ನು ಕಂಡೆ.

**CWSA, 8/6** – ಶ್ರೀ ಅರವಿಂದರು

*

## ಶ್ರೀಕೃಷ್ಣನತ್ತ ಹೊರಳುವುದು ಅಡೆತಡೆಯನ್ನುಂಟು ಮಾಡುವುದಿಲ್ಲ

ನೀನು ಶ್ರೀಕೃಷ್ಣನತ್ತ ಹೊರಳುವುದು ಒಂದು ಅಡೆತಡೆಯನ್ನುಂಟು ಮಾಡುವುದಿಲ್ಲ ಎಂದು ನಿನಗೆ ಹೇಳಿದ್ದೆನೆಂದು ನನಗನಿಸುತ್ತದೆ. ಸಂದರ್ಭ ಏನೇ ಇರಲಿ, ನಿನ್ನ ಪ್ರಶ್ನೆಗೆ ಉತ್ತರವೆಂದು ಧನಾತ್ಮಕವಾಗಿ ಅದನ್ನು ದೃಢೀಕರಿಸುತ್ತಿದ್ದೇನೆ.

ನನ್ನದೇ ಸಾಧನೆಯಲ್ಲಿ ಅವನು ಭವ್ಯವಾದ ಹಾಗೂ ಪ್ರಧಾನವಾದ ಪಾತ್ರ ವಹಿಸಿದ್ದನ್ನು ಪರಿಗಣಿಸಿದರೆ ನಿನ್ನ ಸಾಧನೆಯಲ್ಲಿ ಅವನ ಪಾತ್ರ ಆಕ್ಷೇಪಾರ್ಹ ಎಂದು ಪರಿಗಣಿಸುವುದು ವಿಚಿತ್ರ ಸಂಗತಿ. ಪಂಥೀಯ ಮನೋಭಾವ ಮತತತ್ವಕ್ಕೆ, ವ್ರತಾಚರಣೆಗೆ ಸೇರಿದ ವಿಷಯ, ಆಧ್ಯಾತ್ಮಿಕವಾದದ್ದಲ್ಲ. ಶ್ರೀಕೃಷ್ಣನ ಮೇಲೆ ಏಕಾಗ್ರತೆ ವಹಿಸುವುದು ಇಷ್ಟ ದೇವತೆಗೆ ಸ್ವ–ಅರ್ಪಣ ಮಾಡಿಕೊಳ್ಳುವುದಾಗಿದೆ. ನೀನು ಶ್ರೀಕೃಷ್ಣನನ್ನು ತಲುಪಿದರೆ, ಭಗವಂತನನ್ನು ತಲುಪಿರುತ್ತೀ, ನೀನು ನಿನ್ನನ್ನು ಶ್ರೀಕೃಷ್ಣನಿಗೆ ಅರ್ಪಿಸಿಕೊಂಡರೆ ನನಗೂ ಅರ್ಪಿಸಿಕೊಂಡಿರುತ್ತೀ. ಗುರುತಿಸುವು–ದರಲ್ಲಿ ನಿನ್ನ ಅಸಮರ್ಥತೆ ಇರುವುದಕ್ಕೆ ಕಾರಣ ಭೌತಿಕ ಮುಖಗಳ ಮೇಲೆ ಪ್ರಜ್ಞಾಪೂರ್ವಕವಾಗಿ ಇಲ್ಲವೆ ಅಪ್ರಜ್ಞೆಯಿಂದ ಬಹಳ ಒತ್ತು ನೀಡುತ್ತಿರುವಿ.

**CWSA, 35/433**

*

**ಶ್ರೀಕೃಷ್ಣ ಹಾಗೂ ವೇದಗಳು**

ಶ್ರೀಕೃಷ್ಣ ನನಗೆ ವೇದಗಳ ನಿಜವಾದ ಅರ್ಥವನ್ನು ತೋರಿಸಿಕೊಟ್ಟಿದ್ದಾನೆ, ಅದಷ್ಟೇ ಅಲ್ಲ, ಭಾಷಾಶಾಸ್ತ್ರದ ಹೊಸ ವಿಜ್ಞಾನವನ್ನು ತೋರಿಸಿಕೊಟ್ಟಿದ್ದಾನೆ, ಅದು ಮಾನವ ಮಾತಿನ ವಿಧಾನ ಹಾಗೂ ಮೂಲ ಇವುಗಳನ್ನು ತೋರಿಸಿಕೊಡುತ್ತದೆ, ಅದರಿಂದ ಹೊಸ ನಿರುಕ್ತವನ್ನು ರೂಪಿಸಬಹುದು ಹಾಗೂ ಅದರ ಆಧಾರದ ಮೇಲೆ ವೇದದ ಹೊಸ ವ್ಯಾಖ್ಯಾನವನ್ನು ಬರೆಯಬಹುದು. ಭಾರತೀಯ–ರಿಂದಾಗಲಿ ಇಲ್ಲವೆ ಯುರೋಪಿಯನ್‌ರಿಂದಾಗಲಿ ತಿಳಿದುಕೊಂಡಿರದ ಉಪನಿಷತ್ತುಗಳ ಅರ್ಥವನ್ನು ಅವನು ತೋರಿಸಿಕೊಟ್ಟಿದ್ದಾನೆ. ಹಾಗಾಗಿ ನಾನು ವೇದಾಂತಕ್ಕೆ ಹಾಗೂ ವೇದಕ್ಕೆ ಮರು ವಿವರಣೆ ಕೊಡಬೇಕಾಗಿದೆ, ಆ ವಿವರಣೆಯಿಂದ ಎಲ್ಲ ಧರ್ಮಗಳು ಹೇಗೆ ಮೇಲೆದ್ದು ಬರುತ್ತವೆ ಮತ್ತು ಎಲ್ಲೆಡೆಯಲ್ಲೂ ಒಂದೇ ಆಗಿರುತ್ತವೆ ಎಂಬುದು ತಿಳಿದು ಬರುತ್ತದೆ. ಈ ರೀತಿಯಲ್ಲಿ ಭಾರತ ಜಗತ್ತಿನ ಎಲ್ಲ ಧಾರ್ಮಿಕ ಜೀವನದ ಕೇಂದ್ರವೆಂದು ಮತ್ತು ಸನಾತನ ಧರ್ಮದ ಮೂಲಕ ದೇವತಾ ವ್ಯಕ್ತಿಯ ಸಂಕಲ್ಪ ವಿಧಿಸಿದ (destined) ಸಂರಕ್ಷಕ ಎಂದು ಸಿದ್ಧಪಡಿಸಲಾಗುವುದು.

**CWSA, 36/178** **– ಶ್ರೀ ಅರವಿಂದರು**

*

## ಸಿದ್ಧಿ ದಿನ: ಶ್ರೀ ಅರವಿಂದರ ದೇಹದಲ್ಲಿ ಶ್ರೀಕೃಷ್ಣ

1926ರಲ್ಲಿ ನಾನು ಒಂದು ಬಗೆಯ ಅಧಿಮಾನಸ ಸೃಷ್ಟಿಯನ್ನು ಪ್ರಾರಂಭಿಸಿದ್ದೆ, ನಾನು ಅಧಿಮನಸ್ಸನ್ನು ಪೃಥ್ವಿಯ ಮೇಲೆ ಇಲ್ಲಿ ಭೌತಿಕದಲ್ಲಿ ಕೆಳಗಿಳಿಸಿ ತಂದಿದ್ದೆ (ಪವಾಡಗಳು ಹಾಗೂ ಎಲ್ಲ ಬಗೆಯ ಸಂಗತಿಗಳು ಸಂಭವಿಸತೊಡಗಿದ್ದವು) ನಾನು ಈ ಎಲ್ಲ ದೇವತೆಗಳಿಗೆ ಅವತಾರ ತಾಳಿರಿ, ದೇಹದೊಡನೆ ಗುರುತಿಸಿಕೊಳ್ಳಿರಿ ಎಂದು ಕೇಳಿಕೊಂಡೆ. (ಕೆಲವರು ಪರಿಪೂರ್ಣವಾಗಿ ತಿರಸ್ಕರಿಸಿದರು). ಸರಿ ನನ್ನದೇ ಕಣ್ಣುಗಳಿಂದ ಶ್ರೀಕೃಷ್ಣನನ್ನು ನೋಡಿದೆ, ಅವನು ಯಾವಾಗಲೂ ಶ್ರೀ ಅರವಿಂದರೊಡನೆ ಸೌಹಾರ್ದದ ಸಂಬಂಧವನ್ನು ಇರಿಸಿಕೊಂಡಿದ್ದ, ಶ್ರೀ ಅರವಿಂದರ ದೇಹದಲ್ಲಿ ಕೆಳಗಿಳಿದು ಬರಲು ಒಪ್ಪಿಕೊಂಡ. ಅದು ನವ್ಹೆಂಬರ 24ರಂದು ಆಗಿತ್ತು, ಅದು 'ಶ್ರೀಮಾತೆ' ಯವರ ಪ್ರಾರಂಭವಾಗಿತ್ತು.

ಆದದ್ದು ಹೀಗಿದೆ: ಶ್ರೀಕೃಷ್ಣ ಶ್ರೀ ಅರವಿಂದರ ದೇಹದಲ್ಲಿ ಇಳಿದು ಬರಲು ಹಾಗೂ ಅಲ್ಲಿ ಸ್ಥಿರವಾಗಿ ಇರಲು ಒಪ್ಪಿಕೊಂಡ; ದೇಹವೊಂದರಲ್ಲಿ ಸ್ಥಿರವಾಗಿ ಉಳಿದುಕೊಳ್ಳುವಿಕೆ ಮತ್ತು ಅವತಾರ ತಾಳುವಿಕೆ ಮತ್ತು ಸರಳವಾಗಿ ಪ್ರಭಾವದ ರೂಪದಲ್ಲಿ ಕಾರ್ಯ ಕೈಕೊಳ್ಳುವಿಕೆ, (ಅದು ಬರುತ್ತದೆ, ಹೋಗುತ್ತದೆ, ಸುತ್ತಲೂ ಚಲಿಸುತ್ತದೆ) ಇವುಗಳಲ್ಲಿ ದೊಡ್ಡ ವ್ಯತ್ಯಾಸ ಇರುತ್ತದೆ ಎಂಬುದು ನಿಮಗೆ ತಿಳಿದಿದೆಯೆ? ದೇವತೆಗಳು ಯಾವಾಗಲು ಚಲಿಸುತ್ತಿರುತ್ತಾರೆ ಮತ್ತು ನಾವೇ ಸ್ವತಃ ನಮ್ಮ ಆಂತರಿಕ ಸತ್ತೆಗಳಲ್ಲಿ ಬರುತ್ತೇವೆ, ಹೋಗುತ್ತೇವೆ ಮತ್ತು ನೂರಾರು ಇಲ್ಲವೆ ಸಾವಿರಾರು ಸ್ಥಳಗಳಲ್ಲಿ ಕಾರ್ಯಕೈಕೊಳ್ಳುತ್ತೇವೆ. ಯಾವಾಗಾದರೊಮ್ಮೆ ಹೀಗೆ ಪ್ರಾಸಂಗಿಕವಾಗಿ ಬರುವಿಕೆ ಮತ್ತು ಶಾಶ್ವತವಾಗಿ ಒಂದು ದೇಹಕ್ಕೆ ಕಟ್ಟಿಹಾಕಿಕೊಳ್ಳುವಿಕೆ, ಹಾಗೆಯೇ ಶಾಶ್ವತ ಪ್ರಭಾವ ಮತ್ತು ಶಾಶ್ವತ ಸಾನ್ನಿಧ್ಯ ಇವುಗಳ ನಡುವೆ ವ್ಯತ್ಯಾಸವಿದೆ.

ಈ ಸಮಯದಲ್ಲಿ ಶ್ರೀ ಅರವಿಂದರು ಜನರೊಡನೆ ವ್ಯವಹರಿಸುವುದನ್ನು ನಿವೃತ್ತರಾಗಿ ನಿಲ್ಲಿಸಲು ನಿರ್ಧರಿಸಿದರು, ತಮ್ಮ ಕೋಣೆಯಲ್ಲಿ ಇರಲು ಬಯಸಿದರು.

ನಾನು ಒಂದು ಬಗೆಯ ಅಧಿಮಾನಸ ಸೃಷ್ಟಿಯನ್ನು ಪ್ರಾರಂಭಿಸಿದ್ದೆ. ಪ್ರತಿಯೊಬ್ಬ ದೇವ ಒಂದು ಸತ್ತೆಯಾಗುವಂತೆ ಮಾಡಲು ಬಯಸಿದ್ದೆ, ಅಲ್ಲಿ ಅಸಾಧಾರಣ ಊರ್ಧ್ವಮುಖ ವಕ್ರಗತಿಯಿತ್ತು. ಸರಿ, ನಾನು ಈ ಸತ್ತೆಗಳ

ಸಂಪರ್ಕದಲ್ಲಿದ್ದೆ ಮತ್ತು ನಾನು ಶ್ರೀಕೃಷ್ಣನಿಗೆ ಹೇಳಿದೆ (ಏಕೆಂದರೆ ಅವನು ಯಾವಾಗಲೂ ಶ್ರೀ ಅರವಿಂದರ ಹತ್ತಿರ ಇರುವುದನ್ನು ನಾನು ನೋಡುತ್ತಿದ್ದೆ), "ಇದೆಲ್ಲ ಬಹಳ ಸೊಗಸಾದದ್ದು, ಆದರೆ ಈಗ ಪೃಥ್ವಿಯ ಮೇಲೆ ಸೃಷ್ಟಿಯೊಂದನ್ನು ಬಯಸುತ್ತಿದ್ದೇನೆ,– ನೀನು ಅವತಾರ ತಾಳಬೇಕು" ಅವನು 'ಆಗಲಿ' ಎಂದು ಹೇಳಿದ. ನಂತರ ನಾನು ನನ್ನ ಕಣ್ಣುಗಳಿಂದ (ಸ್ವಾಭಾವಿಕವಾಗಿ ಆಂತರಿಕ ಕಣ್ಣುಗಳಿಂದ) ಅವನು ಶ್ರೀ ಅರವಿಂದರನ್ನು ಕೂಡಿಕೊಂಡದ್ದನ್ನು ನೋಡಿದೆ.

ಇದು 1926 ರಲ್ಲಾಗಿತ್ತು.

ಅದು ಕೇವಲ (ಅದನ್ನು ಹೇಳುವುದು ಹೇಗೆ?) ಶ್ರೀಕೃಷ್ಣ ಭಾಗವಹಿಸುವು–ದಾಗಿತ್ತು. ಅದು ವೈಯಕ್ತಿಕವಾಗಿ ಶ್ರೀ ಅರವಿಂದರಿಗೆ ಯಾವ ವ್ಯತ್ಯಾಸವನ್ನೂ ಉಂಟುಮಾಡಲಿಲ್ಲ. ಗತಕಾಲದಲ್ಲಿ ರೂಪಗೊಂಡಿದ್ದ ಅದು ಸದ್ಯದ ಸೃಷ್ಟಿಯಲ್ಲಿ ಭಾಗವಹಿಸುವುದಾಗಿತ್ತು, ಅದಕ್ಕಿಂತ ಹೆಚ್ಚಿನದೇನೂ ಅಲ್ಲ. ಅದು ಕೆಲಕಾಲದ ಹಿಂದೆ ಆದ ಪರಮೋಚ್ಚನ ಅವರೋಹಣ, ಈಗ ಹೊಸ ಸೃಷ್ಟಿಯಲ್ಲಿ ಭಾಗವಹಿಸಲು ಒಪ್ಪಿಕೊಂಡಿತು.

**ಶ್ರೀಮಾತೆ: ಅನುಯಾಯಿಯೊಬ್ಬನೊಡನೆ ಮಾತುಕತೆ : ಅಗಸ್ಟ 2, 1961**

*

**ಶ್ರೀಕೃಷ್ಣನೊಡನೆ ನಡೆದಾಡುವುದು**

ಹಿಂದಿನ ಕಾಲದಲ್ಲಿ ಶ್ರೀ ಅರವಿಂದರು ಅಲ್ಲಿದ್ದಾಗ ಮತ್ತು ನಾನು ಬೇರೆ ಮನೆಯೊಂದರಲ್ಲಿದ್ದೆ (ಈಗ ಅದನ್ನು 'dormitary annex' ಎಂದು ಕರೆಯುತ್ತಾರೆ) ಅಲ್ಲಿ ದೊಡ್ಡ ಮೊಗಸಾಲೆ (Verandah) ಇತ್ತು, ಮತ್ತು ನಾನು ಅತ್ತಿಂದಿತ್ತ ಅಡ್ಡಾಡುತ್ತಿದ್ದೆ. ಶ್ರೀ ಅರವಿಂದರು ಕಾರ್ಯಕೈಕೊಳ್ಳುತ್ತ ತಮ್ಮ ಕೋಣೆಯಲ್ಲಿ ಇರುತ್ತಿದ್ದರು. ನಾನು ಒಬ್ಬಳೇ ಅಡ್ಡಾಡುತ್ತಿದ್ದೆ, ಆದರೆ ಎಂದಿಗೂ ಏಕಾಕಿಯಾಗಿ–ರಲಿಲ್ಲ, ಶ್ರೀಕೃಷ್ಣ ಯಾವಾಗಲು ಅಲ್ಲಿರುತ್ತಿದ್ದ– ಅವನು ದೇವ ಶ್ರೀಕೃಷ್ಣ ಎಂದು ಪರಿಚಿತನಾದವನು. ಆದರೆ ಹೆಚ್ಚು ಎತ್ತರವಾದವನು, ಹೆಚ್ಚು ಸುಂದರನಾದವನು, ನಿಮಗೆ ತಿಳಿದ ಪಾಟಿ ಕಲ್ಲಿನ ಹಾಸ್ಯಾಸ್ಪದ ನೀಲಿ ಬಣ್ಣದಲ್ಲಲ್ಲ. ಹಾಗಲ್ಲವಲ್ಲವೇ ಅಲ್ಲ ಮತ್ತು ಯಾವಾಗಲೂ ನಾವು ಒಟ್ಟಿಗೆ ಅಡ್ಡಾಡುತ್ತಿದ್ದೆವು. ಅವನು ಸ್ವಲ್ಪ ನನ್ನ ಬೆನ್ನ ಹಿಂದಿರುತ್ತಿದ್ದ (ಕತ್ತಿನ ಹಿಂಭಾಗದಲ್ಲಿ ಮತ್ತು ಭುಜಕ್ಕೆ ಹೊಂದಿ ಹಿಂದಿರುವ ಸಂಜ್ಞೆ)

ನನ್ನ ಶಿರ ಅವನ ಭುಜದ ಮೇಲಿದ್ದ ಹಾಗಿರುತ್ತಿತ್ತು, ನಾನು ಸ್ವಲ್ಪ ಮುಂದಿರುತ್ತಿದ್ದೆ. ನಾವು ಒಟ್ಟಿಗೆ ನಡೆದಾಡುತ್ತಿದ್ದೆವು. (ನನ್ನ ಶಿರ ಅವನ ಭುಜದ ಮೇಲೆ ಒರಗಿಕೊಂಡ ಭಾವನೆ ನನಗೆ ಬರುತ್ತಿರಲಿಲ್ಲ, ಆದರೆ ಅದು ಇದ್ದುದು ಹಾಗೆ), ನಾವು ನಡೆದಾಡುತ್ತಿದ್ದೆವು, ಸುದ್ದಿ, ಸಮಾಚಾರ ಹಂಚಿಕೊಳ್ಳುತ್ತಿದ್ದೆವು. ಪ್ರತಿದಿನದ ಆ ರೀತಿ ಒಂದು ವರ್ಷಕ್ಕಿಂತಲೂ ಹೆಚ್ಚುಕಾಲ ಉಳಿದುಕೊಂಡಿತ್ತು. ನಂತರ ಅದು ಕೊನೆಗೊಂಡಿತು. ನಂತರ ಆಗೊಮ್ಮೆ ಈಗೊಮ್ಮೆ ಅವನನ್ನು ನೋಡುತ್ತಿದ್ದೆ. (ನಾವು ಹೊಸಮನೆಗೆ ಹೋದ ನಂತರ ಅವನನ್ನು ನಾನು ನೋಡಿದೆ.) ಕೆಲವೊಮ್ಮೆ ರಾತ್ರಿ ಕಾಲದಲ್ಲಿ ನಾನು ಬಹಳ ದಣಿದುಕೊಂಡಾಗ ಅವನು ಬರುತ್ತಿದ್ದ, ನಾನು ಅವನ ಭುಜದ ಮೇಲೆ ನಿದ್ರಿಸುತ್ತಿದ್ದೆ. ಆದರೆ ಶ್ರೀ ಅರವಿಂದರೇ ಸ್ವತಃ ತಮ್ಮನ್ನು ತೋರಿಸಿಕೊಡುವ ರೀತಿ ಅದು ಎಂದು ನಾನು ಚೆನ್ನಾಗಿ ತಿಳಿದುಕೊಂಡಿದ್ದೆ. ನಂತರ ನಾನಿಲ್ಲಿಗೆ ಬಂದಾಗ (ಶ್ರೀಮಾತೆಯವರ ಸದ್ಯದ ಕೋಣೆ) ಶ್ರೀ ಅರವಿಂದರು ತೀರಿಕೊಂಡಿದ್ದರು. ನಾನು ನನ್ನ ಮಂತ್ರವನ್ನು ಜಪಿಸುತ್ತ ಅತ್ತಿತ್ತ ನಡೆದಾಡುತ್ತಿದ್ದೆ. ಶ್ರೀ ಅರವಿಂದರು ಬಂದರು ಮತ್ತು ನಿಖರವಾಗಿ ಶ್ರೀಕೃಷ್ಣ ಇರುತ್ತಿದ್ದ ಸ್ಥಾನದಲ್ಲಿರುತ್ತಿದ್ದರು. (ಅದೇ ಸಂಜ್ಞೆ, ಶಿರದ ಹಿಂದಿನ ಭಾಗ) ನಾನು ನಡೆದಾಡುತ್ತಿದ್ದೆ, ಅವರು ಅಲ್ಲಿರುತ್ತಿದ್ದರು. ಅದು ಎಷ್ಟೊಂದು ಮೂರ್ತರೂಪದ್ದು ಹಾಗೂ ಅದ್ಭುತವಾದದ್ದು ಆಗಿತ್ತೆಂದರೆ ನಾನು ಯೋಚಿಸಲು ಪ್ರಾರಂಭಿಸಿದೆ: "ಜನರು, ವಸ್ತು–ವಿಷಯಗಳು ಇವುಗಳ ಕಾಳಜಿ ವಹಿಸುವುದೇಕೆ? ನಾನು ಈ ರೀತಿಯಲ್ಲಿ ಎಲ್ಲ ಕಾಲದಲ್ಲಿ ಉಳಿದುಕೊಳ್ಳಲು ಬಯಸುತ್ತೇನೆ!" ಶ್ರೀ ಅರವಿಂದರು ನನ್ನ ಯೋಚನೆಯನ್ನು ಹಿಡಿದುಕೊಂಡರು ಮತ್ತು "ಇನ್ನು ಮುಂದೆ ನಾನು ಬರುವುದಿಲ್ಲ" ಎಂದು ಹೇಳಿದರು ಮತ್ತು ಅವರು ಬರುವುದನ್ನು ನಿಲ್ಲಿಸಿದರು. "ಒಳ್ಳೆಯದು" ಎಂದು ನಾನು ಹೇಳಿದೆ ಮತ್ತು ಪರಮೋಚ್ಚ ಭಗವಂತನನ್ನು ಕುರಿತಾದ ಮಂತ್ರ ಜಪಿಸಲು ಪ್ರಾರಂಭಿಸಿದೆ. ಅವನು ಬಂದು ನನ್ನ ಜೊತೆಗೆ ನಡೆದಾಡುವಂತೆ ಮಾಡಲು ಬಹಳ ಪ್ರಯತ್ನ ಮಾಡಿದೆ, ಆದರೆ ಅವನು ತನ್ನದೇ ರೂಪದಲ್ಲಿ ಬರಬೇಕು, ಇನ್ನಾವುದೇ ರೂಪದಲ್ಲಲ್ಲ ಎಂದು ಅವನಲ್ಲಿ ಬೇಡಿಕೊಂಡೆ ಮತ್ತು ದೈವೀ ಸಾಮರ್ಥ್ಯ, ದೈವೀ ಸಾನ್ನಿಧ್ಯ ಹೀಗೆ ಎಲ್ಲವೂ ಅಲ್ಲಿದ್ದವು. ನಾನು ಅವನ ಸಾನ್ನಿಧ್ಯವನ್ನು ಹೆಚ್ಚು ಸ್ಪಷ್ಟವಾಗಿ ಭಾವನೆಗೆ ತಂದುಕೊಳ್ಳತೊಡಗಿದೆ. ಅವನು ಹಾಗೆ (ನನ್ನ ಬೆನ್ನ ಹಿಂದೆ) ಅವ್ಯೆಯಕ್ತಿಕ ರೂಪದಲ್ಲಿ ಇರುತ್ತಿದ್ದ. ಕೆಲವು ದಿನಗಳ ಕಾಲ ನಾನು ಏನೋ ಒಂದಕ್ಕೆ ಹತ್ತಿರವಾಗುತ್ತಿದ್ದೇನೆ ಎಂಬ ಭಾವನೆ

ಬರತೊಡಗಿತ್ತು; ನಿನ್ನೆ ಅರ್ಧಗಂಟೆ ಕಾಲ: "ದೈವೀ ಸಾನ್ನಿಧ್ಯ . . . ಪೂರ್ತಿ ಮೂರ್ತಗೊಂಡ ದೈವೀ ಸಾನ್ನಿಧ್ಯವಿತ್ತು. ಅವನು ನನಗೆ "ಮೊದಲು ಶ್ರೀಕೃಷ್ಣ, ನಂತರ ನಾನು" ಎಂದು ಹೇಳಿದ.

**ಶ್ರೀಮಾತಾ: ಅನುಯಾಯಿಯೊಂದಿಗೆ ಮಾತುಕತೆ : ಜೂನ 18, 1965**

*

**ಶ್ರೀಕೃಷ್ಣನೊಡನೆ ಅನನ್ಯತೆ (identity)**

ಶ್ರೀಕೃಷ್ಣನ ಆಧ್ಯಾತ್ಮಿಕತೆಯ ಶ್ರೇಷ್ಠತೆಯನ್ನು ನನ್ನದೇ ಆಧ್ಯಾತ್ಮಿಕತೆಯ ಜೊತೆಗೆ ಹೋಲಿಸಿ ನೋಡಿ ಅದನ್ನು ಕುರಿತು ವಾದ ಮಾಡುವುದನ್ನು ನನ್ನಿಂದ ಅಪೇಕ್ಷಿಸಬಾರದು. ಒಂದಕ್ಕೊಂದು ವಿರುದ್ಧವಾದ ಎರಡು ಪಂಥೀಯ ಧರ್ಮಗಳಿದ್ದಾಗ ಎಂದರೆ ವೈಷ್ಣವರಾಗಿರುವಿಕೆ ಹಾಗೂ ಶ್ರೀ ಅರವಿಂದರ ಪಂಥದವರಾಗಿರುವಿಕೆ ಇದ್ದಾಗ,  ಆ ಪ್ರಶ್ನೆ ಪ್ರಸ್ತುತವಾಗುತ್ತಿತ್ತು; ಆ ಪಂಥಗಳು ತಮ್ಮದೇ ದೇವನ ಶ್ರೇಷ್ಠತೆಯ ಮೇಲೆ ಒತ್ತುಕೊಡುತ್ತಿದ್ದವು. ಸಂದರ್ಭ ಅಂತಹದಲ್ಲ, ನಾನು ಯಾವ ಶ್ರೀಕೃಷ್ಣನಿಗೆ ಸವಾಲೊಡ್ಡಬೇಕು? ವಿಶ್ವಾತೀತ ದೇವಪ್ರಮುಖ, ಪರಮಾತ್ಮ, ಪರಬ್ರಹ್ಮ, ಪುರುಷೋತ್ತಮ, ವಿಶ್ವವ್ಯಾಪಿ ದೇವ, ವಿಶ್ವದ ಪ್ರಭು, ಎಲ್ಲವೂ ಆದ ವಾಸುದೇವ, ಬೃಂದಾವನ, ದ್ವಾರಕಾ, ಕುರುಕ್ಷೇತ್ರ ಇವೆಲ್ಲ ಸ್ಥಳಗಳಲ್ಲಿ ಅವತಾರ ತಳೆದಾಗ ಸಂಚರಿಸಿದವನು ಹೀಗೆಲ್ಲ ವರ್ಣಿಸಲಾದ ಗೀತೆಯಲ್ಲಿನ ಶ್ರೀಕೃಷ್ಣನಿಗೋ ಇಲ್ಲವೆ ನನ್ನ ಯೋಗದಲ್ಲಿ ನನಗೆ ಮಾರ್ಗದರ್ಶಕನಾದ, ಯಾರೊಂದಿಗೆ ನಾನು ಅನನ್ಯತೆ ಕಂಡುಕೊಂಡಿರುವೆನೋ ಆ ಶ್ರೀಕೃಷ್ಣನಿಗೋ ಹೀಗೆ ಯಾರಿಗೆ ಸವಾಲೊಡ್ಡಬೇಕು? ಅದು ನನಗೆ ತಾತ್ವಿಕವಾದದ್ದೂ ಅಲ್ಲ, ಮಾನಸಿಕವಾದದ್ದೂ ಅಲ್ಲ, ಆದರೆ ದೈನಂದಿನ, ಪ್ರತಿಗಳಿಗೆಯ ಸಿದ್ಧಿ, ನನ್ನ ಪ್ರಜ್ಞೆಯ ದ್ರವ್ಯಕ್ಕೆ ಸುಪರಿಚಿತವಾದದ್ದು.

**CWSA, 35/431–32** **– ಶ್ರೀ ಅರವಿಂದರು**


*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 8/9/2016ರ ಗುರುವಾರದಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು. ತತ್ಸಂಬಂಧ ಮಧ್ಯಾಹ್ನ 3.30 ರಿಂದ 3.45ರವರೆಗೆ ಸಾಮೂಹಿಕ ಧ್ಯಾನವನ್ನು ಏರ್ಪಡಿಸಲಾಗಿತ್ತು. ನಂತರ ಶಾಲಾ ಆಡಳಿತ ಮಂಡಳಿಯವರು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಿಕ್ಷಕ ವೃಂದದವರು ಮತ್ತು ಶ್ರೀ ಅರವಿಂದೋ ಸಂಕೀರ್ಣದ ಸಿಬ್ಬಂದಿ ವರ್ಗದವರು ಭಾಗವಹಿಸಿದರು. ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯ–ವಾಯಿತು.



*Immortality, unity*
*and freedom are in ourselves*
*and await there our discovery...*

- Sri Aurobindo

**RNI No. 22511/1971**
No. of Pages **56 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು – 560 078
ದೂರವಾಣಿ : 080–22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.